✦ ಭಾರತವು 1300ಕ್ಕೂ ಹೆಚ್ಚು ಸಣ್ಣ ಸಣ್ಣ ದ್ವೀಪಗಳನ್ನು ಹೊಂದಿದೆ. ಅವುಗಳನ್ನು ಪ್ರಮುಖವಾಗಿ 2 ಗುಂಪುಗಳಾಗಿಸಬಹುದು. ಅವುಗಳೆಂದರೆ ಬಂಗಾಳ ಕೊಲ್ಲಿಯ ಅಂಡಮಾನ್ ನಿಕೋಬಾರ್ ದ್ವೀಪಗಳು ಮತ್ತು ಅರೇಬಿಯನ್ ಸಮುದ್ರದ ಲಕ್ಷದ್ವೀಪಗಳು (ಚಿತ್ರ 2.4ನ್ನು ನೋಡಿ).

✦ 1981ರಿಂದ ಭಾರತವು ಅಂಟಾರ್ಕಟಿಕಾ ಸಂಶೋಧನಾ ಕಾರ್ಯಕ್ರಮವನ್ನು ಆರಂಭಿಸಿ ಅತ್ಯಂತ ಶೀತ ಹವಾಮಾನ ಮತ್ತು ಕಠಿಣ ಪರಿಸರವನ್ನು ಹೊಂದಿರುವ ಖಂಡವಾದ ಅಂಟಾರ್ಕ್ಟಿಕಾವನ್ನು ಅನ್ವೇಷಿಸುತ್ತಿದೆ. (ಚಿತ್ರ 2.1ರಲ್ಲಿ ಕೆಳಭಾಗದಲ್ಲಿರುವ ಬಿಳಿಯ ವಿಸ್ತಾರವಾದ ಪ್ರದೇಶವನ್ನು ನೋಡಿ). ಇದು ಬೃಹತ್ ಮಂಜುಗಡ್ಡೆಯಾಗಿದೆ. 1983ರಲ್ಲಿ ಭಾರತವು ಇಲ್ಲಿ ತನ್ನ ಮೊದಲ ವೈಜ್ಞಾನಿಕ ನೆಲೆಯನ್ನು ಸ್ಥಾಪಿಸಿತು. ಇದನ್ನು ದಕ್ಷಿಣ ಗಂಗೋತ್ರಿ ಎನ್ನುವರು. (ನಂತರ ಇನ್ನೂ ಎರಡು ನೆಲೆಗಳನ್ನು ಸ್ಥಾಪಿಸಲಾಯಿತು). ಭಾರತೀಯ ವಿಜ್ಞಾನಿಗಳು ಸುಮಾರು 40 ತಂಡಗಳು ಈ ದೂರದ ಭೂಪ್ರದೇಶದಲ್ಲಿ ವಿಶೇಷವಾಗಿ ಹವಾಮಾನ ಮತ್ತು ಪರಿಸರ ನಾಶದ ಬಗ್ಗೆ ಸಂಶೋಧನೆ ನಡೆಸಿದ್ದಾರೆ. ವಿಜ್ಞಾನಿಗಳು ವಾಸಿಸುವ ವಸತಿ, ಗ್ರಂಥಾಲಯ ಮತ್ತು ಅಂತರ್ಜಾಲ ಸೌಲಭ್ಯವನ್ನು ಸಹ ಹೊಂದಿದೆ.

AP SCERT

Oceans and Life

Oceans and continents are vital parts of the environment and affect most aspects of our lives, even if we do not notice it. We have mentioned that oceans send rain to the continents; this is part of the Earth's water cycle, which you will further study in Science. Without oceans, for instance, there would be no rainfall! The Earth would be a desert. Moreover, more than half of the world's oxygen is produced by the oceans' flora, which is why they are called **'the planet's lungs'**. The oceans, therefore, play a crucial role in regulating the climate and sustaining life on Earth.

Oceans have deeply impacted humanity in many other ways. From early times, people have used oceans and seas to migrate to other regions, to trade in all kinds of goods, to conduct military campaigns, and as a source of food through **fishing**. Oceans have also nourished the cultures of coastal people all over the world. Almost all of them have tales and legends about the sea, sea gods and goddesses, sea monsters and treasures from the sea - the oceans' dangers but also their blessings.



DON'T MISS OUT



The United Nations has designated **June 8 as World Oceans Day** to "remind us all of the major role the ocean plays in everyday life. It serves as the lungs of our planet, a major source of food and medicine and a critical part of the biosphere." Scientific studies have shown how the oceans are polluted by human activity - we throw several million tonnes of plastic waste into the oceans every year, choking marine life. There are several other forms of pollution. As a result, the marine environment is under threat. Overfishing (excessive fishing) is another cause for the decline of marine life. It is our collective responsibility to protect oceans for the future of the planet and of humanity.



Before we move on ...

- → The Earth's surface has vast water bodies called 'oceans' and large land-masses called 'continents'. Oceans are interconnected. Continents may be counted in various ways; the most common count is seven.
- → The Northern Hemisphere has more land than the Southern Hemisphere.
- → Oceans support all kinds of marine life and play a critical role in the world climate. They are now seriously affected by human activity and need our collective protection.

AP SCERT

ಸಾಗರಗಳು – ಜೀವನ

ಸಾಗರಗಳು ಮತ್ತು ಖಂಡಗಳು ಪ್ರಪಂಚದ ಪ್ರಮುಖ ಭಾಗಗಳಾಗಿವೆ. ನಾವು ಗಮನಿಸಲಿ ಅಥವಾ ಬಿಡಲಿ ನಮ್ಮ ಜೀವನದ ಹೆಚ್ಚಿನ ಅಂಶಗಳ ಮೇಲೆ ಪ್ರಭಾವ ಬೀರುತ್ತವೆ. ಸಾಗರಗಳು ಖಂಡಗಳಿಗೆ ಮಳೆಯನ್ನು ಕಳುಹಿಸುತ್ತವೆ ಎಂದು ನಾವು ಬಣ್ಣಿಸುತ್ತೇವೆ. ಇದು ಭೂಮಿಯ ಜಲಚಕ್ರದ ಭಾಗವಾಗಿದೆ.ಇದನ್ನು ವಿಜ್ಞಾನದ ದೃಷ್ಟಿಕೋನದಿಂದ ನೀವು ಮತ್ತಷ್ಟು ಅಧ್ಯಯನ ಮಾಡುವಿರಿ. ಉದಾಹರಣೆಗೆ ಸಾಗರಗಳಿಲ್ಲದಿದ್ದರೆ ಮಳೆ ಬರುತ್ತಿರಲಿಲ್ಲ! ಭೂಮಿಯು ಮರುಭೂಮಿಯಾಗಿರುತ್ತಿತ್ತು. ಇದಲ್ಲದೆ ವಿಶ್ವದ ಅರ್ಧಕ್ಕಿಂತ ಹೆಚ್ಚು ಆಮ್ಲಜನಕವನ್ನು ಸಾಗರದ ಸಸ್ಯವರ್ಗವು ಉತ್ಪಾದಿಸುತ್ತದೆ. ಆದ್ದರಿಂದಲೇ ಸಾಗರಗಳನ್ನು **ಭೂಮಿಯ 'ಶ್ವಾಸಕೋಶಗಳು'** ಎಂದು ಕರೆಯುವರು. ಆದ್ದರಿಂದ ಹವಾಮಾನವನ್ನು ನಿಯಂತ್ರಿಸುವಲ್ಲಿ ಮತ್ತು ಭೂಮಿಯ ಮೇಲಿನ ಜೀವಿಗಳನ್ನು ಉಳಿಸಿಕೊಳ್ಳುವಲ್ಲಿ ಸಾಗರಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ.

ಸಾಗರಗಳು ಮಾನವಕುಲದ ಮೇಲೆ ಇನ್ನೂ ಅನೇಕ ರೀತಿಯಲ್ಲಿ ಅಗಾಧ ಪ್ರಭಾವ ಬೀರಿವೆ. ಪ್ರಾಚೀನ ಕಾಲದಿಂದಲೂ ಜನರು ಇತರ ಪ್ರದೇಶಗಳಿಗೆ ವಲಸೆ ಹೋಗಲು, ಎಲ್ಲ ರೀತಿಯ ಸರಕುಗಳ ವ್ಯಾಪಾರ ಮಾಡಲು, ಮಿಲಿಟರಿ ಕಾರ್ಯಾಚರಣೆಯನ್ನು ನಡೆಸಲು ಮತ್ತು ಮೀನುಗಾರಿಕೆಯ ಮೂಲಕ ಆಹಾರದ ಮೂಲವಾಗಿ ಸಾಗರ ಮತ್ತು ಸಮುದ್ರಗಳನ್ನು ಬಳಸಿದ್ದಾರೆ. ಸಾಗರಗಳು ಪ್ರಪಂಚದಾದ್ಯಂತ ಕರಾವಳಿ ಜನರ ಸಂಸ್ಕೃತಿಗಳನ್ನು ಪೋಷಿಸಿಕೊಂಡು ಬಂದಿವೆ. ಅವುಗಳಲ್ಲಿ ಬಹುತೇಕ ಎಲ್ಲದರಲ್ಲೂ ಸಮುದ್ರಗಳು, ಸಮುದ್ರ ದೇವತೆಗಳು, ದೈವಗಳು, ಸಮುದ್ರ ರಾಕ್ಷಸರು ಮತ್ತು ಸಮುದ್ರದ ನದಿಗಳು ಮುಂತಾದ ಕಥೆಗಳು ಮತ್ತು ದಂತಕಥೆಗಳನ್ನು ಹೊಂದಿವೆ. ಅಷ್ಟೇ ಅಲ್ಲದೆ ಸಮುದ್ರದ ಅಪಾಯಗಳು ಹಾಗೂ ಸಮುದ್ರದ ದಾಳಿಕೋರರ ಕುರಿತ ಕಥೆಗಳೂ ಇವೆ.



ತಪ್ಪದೇ ತಿಳಿದುಕೊಳ್ಳಿ



ನಮ್ಮ ದೈನಂದಿನ ಜೀವನದಲ್ಲಿ ಸಾಗರವು ವಹಿಸುವ ಪ್ರಮುಖ ಪಾತ್ರವನ್ನು ನಮಗೆ ನೆನಪಿಸುವ ಉದ್ದೇಶದಿಂದ ವಿಶ್ವಸಂಸ್ಥೆಯು ಜೂನ್ 8ನ್ನು 'ವಿಶ್ವ ಸಾಗರ ದಿನ' ಎಂದು ಆಚರಿಸುತ್ತದೆ. "ಇವು ನಮ್ಮ ಗ್ರಹದ ಶ್ವಾಸಕೋಶಗಳಾಗಿ ಕಾರ್ಯನಿರ್ವಹಿಸುತ್ತವೆ. ಇವು ಪ್ರಮುಖ ಜೀವ ಮೂಲಗಳಾಗಿವೆ. ಆಹಾರ, ಔಷಧ ಹಾಗೂ ಜೀವಗೋಳದ ನಿರ್ಣಾಯಕ ಭಾಗವಾಗಿದೆ". ಮಾನವನ ಚಟುವಟಿಕೆಯಿಂದ ಸಾಗರಗಳು ಹೇಗೆ ಕಲುಷಿತಗೊಳ್ಳುತ್ತವೆ ಎಂಬುದನ್ನು ವೈಜ್ಞಾನಿಕ ಅಧ್ಯಯನಗಳು ತೋರಿಸಿವೆ. ನಾವು ಪ್ರತಿವರ್ಷ ಹಲವಾರು ಮಿಲಿಯನ್ ಟನ್ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಾಗರಗಳಿಗೆ ಎಸೆಯುತ್ತೇವೆ. ಇದು ಸಮುದ್ರ ಜೀವಿಗಳನ್ನು ಉಸಿರುಗಟ್ಟಿಸಿ ಸಾಯಿಸುತ್ತದೆ. ಮಾಲಿನ್ಯವು ಹಲವಾರು ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ. ಪರಿಣಾಮವಾಗಿ ಪರಿಸರವು ಅಪಾಯದಲ್ಲಿದೆ. ಅತಿಯಾದ/ಮಿತಿಮೀರಿದ ಮೀನುಗಾರಿಕೆ ಸಮುದ್ರ ಜೀವಿಗಳ ಅವನತಿಗೆ ಮತ್ತೊಂದು ಕಾರಣವಾಗಿದೆ. ಭೂಮಿಯ ಮತ್ತು ಮಾನವ ಭವಿಷ್ಯಕ್ಕಾಗಿ ಸಾಗರಗಳನ್ನು ರಕ್ಷಿಸುವುದು ನಮ್ಮೆಲ್ಲರ ಸಾಮೂಹಿಕ ಜವಾಬ್ದಾರಿಯಾಗಿದೆ.



ಮುಗಿಸುವ ಮುನ್ನ

→ ಭೂಮಿಯ ಮೇಲ್ಮೈ 'ಸಾಗರಗಳು' ಎಂದು ಕರೆಯಲ್ಪಡುವ ವಿಶಾಲವಾದ ಜಲಮೂಲಗಳನ್ನು ಹಾಗೂ 'ಖಂಡಗಳು' ಎಂದು ಕರೆಯಲ್ಪಡುವ ದೊಡ್ಡ ಭೂಭಾಗಗಳನ್ನು ಹೊಂದಿದೆ. ಸಾಗರಗಳು ಪರಸ್ಪರ ಸಂಪರ್ಕ ಹೊಂದಿವೆ. ಖಂಡಗಳನ್ನು ವಿವಿಧ ರೀತಿಯಲ್ಲಿ ವಿಂಗಡಿಸಬಹುದು. ಅತ್ಯಂತ ಸಾಮಾನ್ಯ ವಿಂಗಡನೆಯಲ್ಲಿ 'ಏಳು' ಎಂದು ಹೇಳುತ್ತೇವೆ.


→ ಉತ್ತರಾರ್ಧ ಗೋಳವು ದಕ್ಷಿಣಾರ್ಧ ಗೋಳಕ್ಕಿಂತ ಹೆಚ್ಚು ಭೂಮಿಯನ್ನು ಹೊಂದಿದೆ.

→ ಸಾಗರಗಳು ಎಲ್ಲ ರೀತಿಯ ಸಮುದ್ರ ಜೀವಿಗಳಿಗೆ ಆಶ್ರಯ ನೀಡಿದೆ. ಹಾಗೂ ವಿಶ್ವ ಹವಾಮಾನದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ. ಅವುಗಳು ಈಗ ಮಾನವ ಚಟುವಟಿಕೆಯಿಂದ ಗಂಭೀರವಾಗಿ ಪ್ರಭಾವಿತವಾಗಿವೆ. ಆದ್ದರಿಂದ ಇವುಗಳ ರಕ್ಷಣೆ ನಮ್ಮೆಲ್ಲರ ಅಥವಾ ಸಮುದಾಯದ ಹೊಣೆ.

AP SCERT

Questions, activities and projects

1. The given Picture shows the symbol of the Olympic Games. What do these rings symbolise? [ ]



A. The five most popular sports B. The five continents of the world
C. The five major oceans of the world
D. The five host countries of the Olympics

2. Assertion (A): India has established scientific research stations in Antarctica.
Reason (R): Scientists study climate and environmental changes there.
A. Both A and R are true, and R is the correct explanation of A.
B. Both A and R are true, but R is not the correct explanation of A.
C. A is true, but R is false. D. A is false, but R is true.


3. If most of earth's surface was covered by land instead of water, which of the following statement would likely be true? [ ]
A) Oceans would become larger B) The earth would still look blue
C)There would be no change in appearance
D) The earth would appear brown from space

4. Explain the following terms :
(A) Continent (B) Ocean (C) Island

5. "Oceans are often called the planet's lungs and climate regulators."Evaluate this statement by analysing the role of oceans in the Earth's water cycle and human life. Also, justify why protecting oceans is essential for the future of humanity.

6. Create a short awareness message for coastal people explaining what a tsunami is and how to stay safe.


7. Let us do - On the outline map of the world given below, label all the continents and oceans.



AP SCERT

ಪ್ರಶ್ನೆಗಳು, ಚಟುವಟಿಕೆಗಳು ಮತ್ತು ಯೋಜನಾಕಾರ್ಯಗಳು

1. ಕೆಳಗೆ ನೀಡಲಾದ ಚಿತ್ರವು ಒಲಿಂಪಿಕ್ ಕ್ರೀಡೆಗಳ ಚಿಹ್ನೆಯನ್ನು ಸೂಚಿಸುತ್ತದೆ. ಈ ರಿಂಗ್‌ಗಳು ಏನನ್ನು ಪ್ರತಿನಿಧಿಸುತ್ತವೆ? [ ]



A) ಐದು ಜನಮನ್ನಣೆ ಹೊಂದಿದ ಕ್ರೀಡೆಗಳು **B)** ಜಗತ್ತಿನ ಐದು ಖಂಡಗಳು.
C) ಜಗತ್ತಿನ ಐದು ಮಹಾಸಾಗರಗಳು. **D)** ಒಲಿಂಪಿಕ್ಸ್‌ನ ಐದು ಅತಿಥೇಯ ರಾಷ್ಟ್ರಗಳು

2. ಹೇಳಿಕೆ (A): ಭಾರತವು ಅಂಟಾರ್ಕ್ಟಿಕಾದಲ್ಲಿ ವೈಜ್ಞಾನಿಕ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಿದೆ.
ಕಾರಣ (R): ವಿಜ್ಞಾನಿಗಳು ಅಲ್ಲಿನ ವಾತಾವರಣ ಹಾಗೂ ಹವಾಮಾನದ ಬದಲಾವಣೆಗಳನ್ನು ಅಧ್ಯಯನ ಮಾಡುತ್ತಾರೆ..
A) A ಮತ್ತು R ಎರಡೂ ಸರಿಯಾಗಿವೆ ಹಾಗೂ R ಎಂಬುದು Aಯ ಸರಿಯಾದ ವಿವರಣೆ.
B) A ಮತ್ತು R ಎರಡೂ ಸರಿ, ಆದರೆ R ಎಂಬುದು Aಯ ಸರಿಯಾದ ವಿವರಣೆಯಲ್ಲ.
C) A ಸರಿ ಆದರೆ R ತಪ್ಪು. **D)** A ತಪ್ಪು ಆದರೆ R ಸರಿ.


3. ಭೂಮಿಯ ಮೇಲ್ಮೈನ ಬಹಳಷ್ಟು ಭಾಗ ನೀರಿನಿಂದಲ್ಲದೆ ನೆಲದಿಂದ ಆವೃತವಾಗಿದ್ದರೆ ಕೆಳಗಿನವುಗಳಲ್ಲಿ ಯಾವುದು ನಿಜವಾಗುವ ಸಂಭವವಿದೆ? [ ]
A) ಸಾಗರಗಳು ಶೂನ್ಯವಾಗುತ್ತವೆ. **B)** ಆದಾಗ್ಯೂ ಭೂಮಿ ನೀಲಿಯಾಗಿಯೇ ಕಾಣಿಸುತ್ತಿತ್ತು.
C) ಗೋಚರಿಸುವ ದೃಶ್ಯದಲ್ಲಿ ಯಾವುದೇ ಬದಲಾವಣೆ ಇರುತ್ತಿರಲಿಲ್ಲ.
D) ಬಾಹ್ಯಾಕಾಶದಿಂದ ಭೂಮಿ ಕಂದು ಬಣ್ಣದಲ್ಲಿ ಕಾಣಿಸುತ್ತಿತ್ತು.

4. ಕೆಳಗಿನ ಪದಗಳನ್ನು ವಿವರಿಸಿ.
A) ಖಂಡ **B)** ಸಾಗರ **C)** ದ್ವೀಪ

5. "ಸಾಗರಗಳು ಭೂಮಿಯ ಶ್ವಾಸಕೋಶಗಳು ಹವಾಮಾನದ ನಿಯಂತ್ರಕರೆಂದು ಪರಿಗಣಿಸಲ್ಪಡುತ್ತವೆ. ಭೂಮಿಯ ಜಲಚಕ್ರ ಮತ್ತು ಮಾನವನ ಜೀವನದಲ್ಲಿ ಸಾಗರಗಳ ಪಾತ್ರವನ್ನು ವಿಶ್ಲೇಷಿಸುವ ಮೂಲಕ ಈ ಹೇಳಿಕೆಯನ್ನು ಮೌಲ್ಯಮಾಪನ ಮಾಡಿ, ಈ ಮಾನವಕುಲದ ಭವಿಷ್ಯಕ್ಕಾಗಿ ಸಾಗರಗಳನ್ನು ರಕ್ಷಿಸುವುದು ಏಕೆ ಮುಖ್ಯ ಎಂಬ ಅಂಶವನ್ನು ಸಹ ಸಮರ್ಥಿಸಿರಿ.


6. ಸುನಾಮಿ ಎಂದರೇನು? ಹಾಗೂ ಕರಾವಳಿ ಜನರಿಗೆ ಜಾಗೃತಿಯ ಬಗ್ಗೆ ಅವಗಾಹನೆ ನೀಡುವ ಒಂದು ಜಾಹೀರಾತನ್ನು ರೂಪಿಸಿ.

7. ಇದನ್ನು ಮಾಡೋಣ – ಕೆಳಗೆ ನೀಡಲಾದ ಪ್ರಪಂಚ ಭೂಪಟದಲ್ಲಿ ಎಲ್ಲಾ ಖಂಡಗಳು ಮತ್ತು ಸಾಗರಗಳನ್ನು ಗುರುತಿಸಿ.



APSCERT

8. Slove this crossword.



Across

1. Abundantly produced by the oceans
3. A large expanse of landmass
6. A large continent of which India is a part
8. A major source of pollution of the oceans
10. The coldest continent


Down

2. The largest island on Earth
4. A huge destructive wave from the ocean
5. The smallest continent
7. The largest body of water on the Earth
9. A landmass (but not a continent) surrounded by the sea or ocean

9. Let us draw - without looking at the maps in the chapter draw the continents on a piece of paper and color them. After words compare the picture you draw with the map of oceans and continents found in the chapter.

AP SCERT

8. ಈ ಕೆಳಗಿನ ಪದಬಂಧವನ್ನು ತುಂಬಿರಿ



ಅಡ್ಡ (ಎಡದಿಂದ ಬಲಕ್ಕೆ):

1. ಸಾಗರದಿಂದ ಆವಿಯಾಗಿ ಉತ್ಪಾದಿಸಲ್ಪಡುವುದು.
3. ವಿಶಾಲವಾದ ಭೂ ಪ್ರದೇಶ.
6. ಭಾರತವು ಈ ಖಂಡದ ಭೂಭಾಗವಾಗಿದೆ.
8. ಸಾಗರಗಳ ಮಾಲಿನ್ಯದ ಪ್ರಮುಖ ಕಾರಣ.
10. ಅತ್ಯಂತ ಶೀತ ಖಂಡ.

ಮೇಲಿನಿಂದ ಕೆಳಕ್ಕೆ:

2. ಭೂಮಿಯ ಮೇಲಿನ ಅತಿ ದೊಡ್ಡ ದ್ವೀಪ.
4. ಸಾಗರಗಳಲ್ಲಿ ಸೃಷ್ಟಿಯಾಗುವ ದೊಡ್ಡ ಹಾಗೂ ವಿನಾಶಕಾರಿ ಅಲೆ.
5. ಅತ್ಯಂತ ಚಿಕ್ಕ ಖಂಡ.
7. ಭೂಮಿಯ ಮೇಲಿನ ಅತಿ ದೊಡ್ಡ ಜಲಾಶಯ.
9. ಸಮುದ್ರ ಅಥವಾ ಸಾಗರದಿಂದ ಆವೃತವಾದ ಭೂಭಾಗ (ಆದರೆ ಖಂಡವಲ್ಲ).

9. ಚಿತ್ರ ಬಿಡಿಸೋಣ –ಈ ಅಧ್ಯಾಯದಲ್ಲಿರುವ ನಕ್ಷೆಗಳನ್ನು ನೋಡದೆ ಒಂದು ಕಾಗದದ ಮೇಲೆ ಖಂಡಗಳನ್ನು ಚಿತ್ರಿಸಿ ಬಣ್ಣ ಹಾಕಿರಿ. ನಂತರ ನೀವು ಚಿತ್ರಿಸಿದ ಚಿತ್ರವನ್ನು ಅಧ್ಯಾಯದಲ್ಲಿರುವ ಸಾಗರಗಳು ಮತ್ತು ಖಂಡಗಳ ನಕ್ಷೆಯೊಂದಿಗೆ ಹೋಲಿಕೆ ಮಾಡಿ.

AP SCERT

CHAPTER

3

TIMELINE AND SOURCES OF HISTORY

N3L1K7

Learning Outcomes

The student will be able to-

- Define the term history and explain the importance of studying the past and the significance of historical sources. CG -1
- Differentiate between BC (Before Christ)/ BCE (Before Common Era) and AD (Anno Domini) / CE (Common Era) and explain their use in historical timelines. CG -1
- Explain how archaeological sources help to reconstruct and interpret historical events. CG -2
- Describe the growth of complexity in early societies and examines the factors contributing to these changes. CG -2

"History is "an unending dialogue between the present and the past ... between the society of today and the society of yesterday. ... We can fully understand the present only in the light of the past." — *E.H. Carr*

AP SCERT



National museum, New Delhi : Such museums preserve objects from the fast, such as statues, coins and ornaments, all of which help iius and undersand out history.

The Big Questions ?

1. *How do we measure historical time?*
2. *How can various sources help us understand history?*
3. *How did early humans live?*

ಅಧ್ಯಾಯ

3

ಇತಿಹಾಸ ಕಾಲಾನುಕ್ರಮ ಮತ್ತು ಆಧಾರಗಳು

J7U8D4

ಕಲಿಕೆಯ ಫಲಗಳು

ವಿದ್ಯಾರ್ಥಿಗಳು ಈ ಕೆಳಗಿನವುಗಳನ್ನು ಮಾಡಲು ಶಕ್ತರಾಗುತ್ತಾರೆ:

- ಇತಿಹಾಸ ಎನ್ನುವ ಪದವನ್ನು ವ್ಯಾಖ್ಯಾನಿಸಿ, ಗತ ಕಾಲವನ್ನು ಅಧ್ಯಯನ ಮಾಡುವ ಪ್ರಾಮುಖ್ಯತೆಯನ್ನು ಮತ್ತು ಐತಿಹಾಸಿಕ ಮೂಲಗಳ ಪ್ರಾಮುಖ್ಯತೆಯನ್ನು ವಿವರಿಸುತ್ತಾರೆ. CG -1
- BC (ಕ್ರಿಸ್ತಪೂರ್ವ) / BCE (ಪೂರ್ವ ಸಾಮಾನ್ಯ ಶಕ) ಮತ್ತು AD (ಅನ್ನೊ ಡೊಮಿನಿ)/CE(ಸಾಮಾನ್ಯ ಶಕ) ನಡುವಿನ ವತ್ಯಾಸವನ್ನು ಗುರುತಿಸಿ ಇತಿಹಾಸದ ಕಾಲಕ್ರಮದಲ್ಲಿ ಅವುಗಳ ಉಪಯೋಗವನ್ನು ವಿವರಿಸುತ್ತಾರೆ. CG -1
- ಐತಿಸಹಾದಿಕ ಘಟನೆಗಳನ್ನು ಪುನಃನಿರ್ಮಿಸಲು ಮತ್ತು ಅರ್ಥ ಮಾಡಿಕೊಳ್ಳಲು ಪುರಾತತ್ವ ಸಂಪನ್ಮೂಲಗಳು/ಆಧಾರಗಳು ಹೇಗೆ ಸಹಾಯ ಮಾಡುತ್ತವೆಯೋ ವಿವರಿಸುತ್ತಾರೆ. CG -2
- ಆರಂಭಿಕ ಸಮಾಜದಲ್ಲಿನ ಸಂಕೀರ್ಣ ಬೆಳವಣಿಗೆಗಳನ್ನು ವಿವರಿಸಿ ಮತ್ತು ಈ ಬದಲಾವಣೆಗೆ ಕಾರಣವಾದ ಅಂಶಗಳನ್ನು ಪರಿಶೀಲಿಸುತ್ತಾರೆ. CG -2

"ಇತಿಹಾಸವು ವರ್ತಮಾನ ಮತ್ತು ಭೂತಕಾಲದ ನಡುವೆ... ಇಂದಿನ ಸಮಾಜಕ್ಕೂ ನಿನ್ನೆಯ ಸಮಾಜಕ್ಕೂ ನಡುವೆ ನಡೆಯುವ ಒಂದು ಅಂತ್ಯವಿಲ್ಲದ ಸಂಭಾಷಣೆ... ಭೂತಕಾಲದ ಬೆಳಕಿನಲ್ಲಿ ಮಾತ್ರ ನಾವು ವರ್ತಮಾನವನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಬಲ್ಲೆವು"

--- E.H. ಕಾರ್



ರಾಷ್ಟ್ರೀಯ ವಸ್ತು ಸಂಗ್ರಹಾಲಯ, ನವದೆಹಲಿ : ಇಂತಹ ವಸ್ತು ಸಂಗ್ರಹಾಲಯಗಳು ಹಿಂದಿನ ಕಾಲಕ್ಕೆ ಸೇರಿದ ವಿಗ್ರಹಗಳು, ನಾಣ್ಯಗಳು ಮತ್ತು ಆಭರಣಗಳಂತಹ ವಸ್ತುಗಳನ್ನು ಸಂರಕ್ಷಿಸುತ್ತವೆ. ಇವೆಲ್ಲವು ನಮ್ಮ ಇತಿಹಾಸವನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತವೆ.

ಪ್ರಮುಖ ಪ್ರಶ್ನೆಗಳು ?

1. ನಾವು ಐತಿಹಾಸಿಕ ಕಾಲವನ್ನು ಹೇಗೆ ಅಳೆಯುತ್ತೇವೆ?
2. ಇತಿಹಾಸವನ್ನು ಅರ್ಥ ಮಾಡಿಕೊಳ್ಳಲು ವಿವಿಧ ಆಧಾರಗಳು ನಮಗೆ ಹೇಗೆ ಸಹಾಯ ಮಾಡುತ್ತವೆ?
3. ಆದಿ ಮಾನವರು ಹೇಗೆ ಜೀವಿಸುತ್ತಿದ್ದರು?

AP SCERT

How Do We Learn About the Past?




THINK ABOUT IT



- What is the earliest memory you can recollect? Do you remember how old you were at that time? Those memories together are a part of your past, maybe going five or six years back.
- How do you think understanding the past will help us contineed understand the present world?

You will discover in Science that the Earth has a very, very long **history**, of which we humans occupy only a tiny part - the most recent one.

History: The study of the human past.



APSCERT

ನಾವು ಭೂತಕಾಲದ ಬಗ್ಗೆ ಹೇಗೆ ತಿಳಿದುಕೊಳ್ಳುತ್ತೇವೆ?




ಆಲೋಚಿಸಿ



- ನೀವು ನೆನಪಿಸಿಕೊಳ್ಳಬಲ್ಲ ಹಳೆಯ ನೆನಪು ಯಾವುದು? ಆ ಸಮಯದಲ್ಲಿ ನಿಮಗೆ ಎಷ್ಟು ವಯಸ್ಸಾಗಿತ್ತು ಎಂಬುದು ನೆನಪಿದೆಯೇ? ಆ ನೆನಪುಗಳೆಲ್ಲವೂ ನಿಮ್ಮ ಭೂತಕಾಲದ ಭಾಗವಾಗಿದೆ. ಬಹುಶಃ ಐದು ಅಥವಾ ಆರು ವರ್ಷಗಳ ಹಿಂದಿನವು ಆಗಿರಬಹುದು.
- ಪ್ರಸ್ತುತ ವಿಶ್ವವನ್ನು ಅರ್ಥಮಾಡಿಕೊಳ್ಳಲು ಭೂತಕಾಲವನ್ನು ಅರ್ಥಮಾಡಿಕೊಳ್ಳುವುದು ನಮಗೆ ಹೇಗೆ ಸಹಾಯಕವಾಗುತ್ತದೆ ಎಂದು ನೀವು ಭಾವಿಸುತ್ತೀರಿ?

ಭೂಮಿಗೆ ಬಹಳ ಸುಧೀರ್ಘವಾದ ಇತಿಹಾಸ ಇದೆಯೆಂದು ಅದರಲ್ಲಿ ಮನುಷ್ಯರ ಪಾತ್ರ ಬಹಳ ಸ್ವಲ್ಪ ಎಂದು ಇತ್ತೀಚಿನ ವಿಜ್ಞಾನ ಸಂಶೋಧನೆಯಲ್ಲಿ ನೀವು ಗ್ರಹಿಸುತ್ತೀರಿ.

ಇತಿಹಾಸ: ಮಾನವನ ಗತಕಾಲದ ಅಧ್ಯಯನ



AP SCERT

Many people study the history of the Earth. Some of them are trained to uncover the secrets left beneath the Earth's surface and help us learn about its past - and also our past.



Fig.3.2.1: Geologists



Fig.3.2.2: Palaeontologists



Fig.3.2.3: Anthropologists



Fig.3.2.4: Archaeologists

Observe these four pictures and the activities involved. From top left:

- **Geologists** (Fig. 3.2.1) study the physical features of the Earth, like the soil, stones, hills, mountains,rivers, seas, oceans and other such parts of the Earth.
- **Palaeontologists** (Fig. 3.2.2) study the remains of plants, animals and humans from millions of years ago in the form of **fossils**.
- **Anthropologists** (Fig. 3.2.3) study human societies and cultures from the oldest times to the present.
- **Archaeologists** (Fig. 3.2.4) study the past by digging up remains that people, plants and animals left behind, such as tools, pots, beads, figurines, toys, bones and teeth of animals and humans, burnt grains, parts of houses or bricks, among others.

Fossils: Impressions of footprints, or parts of plants or animals that are found preserved within layers of soil or rocks.

Era: A distinct period of time.

How Is Time Measured in History?

Each society and culture has had its own ways of measuring time. Major events, such as the birth of an important person or the start of a ruler's reign, have often marked the beginning of a new **era**. At present, the **Gregorian** calender is Commonly world wide.

AP SCERT

ಅನೇಕ ಜನರು ಭೂಮಿಯ ಇತಿಹಾಸವನ್ನು ಅಧ್ಯಯನ ಮಾಡುತ್ತಾರೆ. ಅವರಲ್ಲಿ ಕೆಲವರು ಭೂಮಿಯ ಮೇಲ್ಮೈ ಅಡಿಯಲ್ಲಿ ಅಡಗಿರುವ ರಹಸ್ಯಗಳನ್ನು ಹೊರಹಾಕಲು ತರಬೇತಿಯನ್ನು ಪಡೆದಿದ್ದಾರೆ. ಅವರು ಗತಕಾಲದ ಬಗ್ಗೆ ತಿಳಿಯಲು ಸಹಾಯ ಮಾಡುತ್ತಾರೆ.



ಚಿತ್ರ 3.2.1:
ಭೂವಿಜ್ಞಾನಿಗಳು



ಚಿತ್ರ 3.2.1:
ಪಳೆಯುಳಿಕೆ ತಜ್ಞರು



ಚಿತ್ರ 3.2.3:
ಮಾನವ ವಿಜ್ಞಾನ



ಚಿತ್ರ 3.2.4:
ಪ್ರಾಚೀನ ವಸ್ತು ಶಾಸ್ತ್ರಜ್ಞರು

ಈ ನಾಲ್ಕು ಚಿತ್ರಗಳನ್ನು ಮತ್ತು ಅವು ಒಳಗೊಂಡಿರುವ ಚಟುವಟಿಕೆಗಳನ್ನು ಗಮನಿಸಿ ಎಡದಿಂದ:

- **ಭೂವಿಜ್ಞಾನಿಗಳು:** (ಚಿತ್ರ 3.2.1) ಇವರು ಭೂಮಿಯ ಭೌತಿಕ ಲಕ್ಷಣಗಳಾದ ಮಣ್ಣು, ಕಲ್ಲು, ಬೆಟ್ಟಗಳು, ಪರ್ವತಗಳು, ನದಿಗಳು, ಸಮುದ್ರಗಳು, ಸಾಗರಗಳು ಮತ್ತು ಭೂಮಿಯ ಇತರ ಭಾಗಗಳನ್ನು ಅಧ್ಯಯನ ಮಾಡುತ್ತಾರೆ.
- **ಪಳೆಯುಳಿಕೆ ತಜ್ಞರು** (ಚಿತ್ರ 3.2.2) ಲಕ್ಷಾಂತರ ವರ್ಷಗಳ ಹಿಂದಿನ ಸಸ್ಯಗಳು, ಪ್ರಾಣಿಗಳು ಮತ್ತು ಮಾನವರ ಅವಶೇಷಗಳನ್ನು 'ಪಳೆಯುಳಿಕೆಗಳ' ರೂಪದಲ್ಲಿ ಅಧ್ಯಯನ ಮಾಡುತ್ತಾರೆ.
- **ಮಾನವ ಶಾಸ್ತ್ರಜ್ಞರು** (ಚಿತ್ರ 3.2.3) ಪುರಾತನ ಕಾಲದಿಂದ ಇಂದಿನವರೆಗಿನ ಮಾನವ ಸಮಾಜಗಳು ಮತ್ತು ಸಂಸ್ಕೃತಿಗಳನ್ನು ಅಧ್ಯಯನ ಮಾಡುತ್ತಾರೆ.
- **ಪ್ರಾಚೀನ ವಸ್ತು ಶಾಸ್ತ್ರಜ್ಞರು** (ಚಿತ್ರ 3.2.4) ಪ್ರಜೆಗಳು, ಸಸ್ಯಗಳು, ಮತ್ತು ಪ್ರಾಣಿಗಳು ಬಿಟ್ಟು ಹೋದ ಅವಶೇಷಗಳನ್ನು ಅಗೆಯುವ ಮೂಲಕ ಭೂತಕಾಲವನ್ನು ಅಧ್ಯಯನ ಮಾಡುತ್ತಾರೆ. ಉದಾಹರಣೆಗೆ ಉಪಕರಣಗಳು, ಮಡಿಕೆಗಳು, ಮಣಿಗಳು, ಪ್ರತಿಮೆಗಳು, ಆಟಿಕೆಗಳು, ಪ್ರಾಣಿ ಮತ್ತು ಮಾನವರ ಮೂಳೆಗಳು ಮತ್ತು ಹಲ್ಲುಗಳು, ಸುಟ್ಟ ಧಾನ್ಯಗಳು, ಮನೆಯ ಭಾಗಗಳು ಅಥವಾ ಇಟ್ಟಿಗೆಗಳು ಮುಂತಾದವು.

ಪಳೆಯುಳಿಕೆಗಳು : ಮಣ್ಣು ಅಥವಾ ಬಂಡೆಗಳ ಪದರುಗಳ ಒಳಗೆ ಸಂರಕ್ಷಿಸಲ್ಪಟ್ಟ ಪಾದದ ಗುರುತುಗಳು, ಸಸ್ಯದ ಅಥವಾ ಪ್ರಾಣಿಗಳ ಭಾಗಗಳ ಅವಶೇಷಗಳನ್ನು ಪಳೆಯುಳಿಕೆಗಳು ಎನ್ನುವರು.

ಯುಗ: ಒಂದು ವಿಶಿಷ್ಟವಾದ ಕಾಲ ಅಥವಾ ಸಮಯ

ಇತಿಹಾಸದ ಕಾಲವನ್ನು ಹೇಗೆ ಅಳೆಯುತ್ತಾರೆ (ಲೆಕ್ಕಿಸುತ್ತಾರೆ)?

ಪ್ರತಿಯೊಂದು ಸಮಾಜ ಮತ್ತು ಸಂಸ್ಕೃತಿಯು ಕಾಲವನ್ನು ಅಳೆಯಲು ತಮ್ಮದೇ ಆದ ವಿಧಾನಗಳನ್ನು ಹೊಂದಿವೆ. ಒಬ್ಬ ಪ್ರಮುಖ ವ್ಯಕ್ತಿಯ ಜನನ ಅಥವಾ ಒಬ್ಬ ಆಡಳಿತಗಾರನ ಪ್ರಾರಂಭದಂತಹ ಪ್ರಮುಖ ಘಟನೆಗಳು ಹೆಚ್ಚಾಗಿ ಹೊಸ ಯುಗದ ಆರಂಭವನ್ನು ಸೂಚಿಸುತ್ತವೆ. ಪ್ರಸ್ತುತ ಗೆಗೋರಿಯನ್ ಕ್ಯಾಲೆಂಡರ್ ಅನ್ನು ವಿಶ್ವದಾದ್ಯಂತ ಸಾಮಾನ್ಯವಾಗಿ ಉಂಪಯೋಗಿಸಲಾಗುತ್ತದೆ.

AP SCERT

side by side, Hindu, Muslim, Jewish, Chinese and other calendars are also used for calculating the dates of festivals and other **auspicious** events.

In the West, the conventional year for Jesus Christ's birth has generally been taken to be the starting point for this calendar. Years are counted forward from this point and used to be marked with 'AD' (an abbreviation for a Latin phrase that refers to the years after Jesus' birth). However, this is now called the **Common Era** or **CE** across the world. For example, 1947, the year India gained independence, can be written as 1947 AD (sometimes AD 1947) or 1947 CE.

Similarly, the years before the conventional date for the birth of Jesus are counted backward and used to be marked with BC (or Before Christ). They are now called **Before Common Era** or **BCE**. For example, 560 BCE is an approximate year of birth of Gautama Buddha

Gregorian calendar: The calendar now used the world over; it has 12 months adding up to 365 days, and a leap year every four years. However, century years- for example, 1800, 1900, 2000 - are leap years only if they are multiples of 400; so in the three centenary years above, only 2000 is a leap year.

Auspicious: favourable or bringing luck; for instance, 'an auspicious beginning'.





Fig : 3.4. Time line of some main events since 300,000 BCE

AP SCERT

ಇದರೊಂದಿಗೆ, ಹಿಂದೂ, ಮುಸ್ಲಿಂ, ಯಹೂದಿ, ಚೈನಿಸ್ ಮತ್ತು ಇತರ ಕ್ಯಾಲೆಂಡರ್‌ಗಳನ್ನು ಹಬ್ಬಗಳು, **ಶುಭಕಾರ್ಯಗಳ** ದಿನಾಂಕಗಳನ್ನು ಲೆಕ್ಕ ಹಾಕಲು ಬಳಸುತ್ತಾರೆ.

ಪಾಶ್ಚಾತ್ಯ ದೇಶಗಳಲ್ಲಿ ಯೇಸುಕ್ರಿಸ್ತನು ಜನಿಸಿದ ವರ್ಷವನ್ನು ಈ ಪಂಚಾಂಗಕ್ಕೆ ಆರಂಭದ ಬಿಂದುವಾಗಿ ತೆಗೆದುಕೊಳ್ಳುತ್ತಾರೆ. ಈ ಬಿಂದುವಿನಿಂದ ಮುಂದಕ್ಕೆ ಎಣಿಸುವ ವರ್ಷಗಳನ್ನು **AD** (ಏಸುವಿನ ಜನನದ ನಂತರದ ವರ್ಷಗಳನ್ನು ಸೂಚಿಸುವ ಲ್ಯಾಟಿನ್ ಪದ) ಎಂದು ಗುರುತಿಸಲಾಗುತ್ತಿತ್ತು. ಆದರೆ ಈಗ ಇದನ್ನು ಜಗತ್ತಿನಾದ್ಯಂತ **ಸಾಮಾನ್ಯ ಶಕ** ಅಥವಾ **CE (Common Era)** ಎಂದು ಕರೆಯಲಾಗುತ್ತಿದೆ. ಉದಾಹರಣೆಗೆ ಭಾರತ ಸ್ವತಂತ್ರ್ಯವಾದ ವರ್ಷ 1947ಅನ್ನು 1947 **AD** (ಅಥವಾ **AD** 1947) ಅಥವಾ1947 **CE** ಎಂದು ಬರೆಯಬಹುದು.

ಅದೇರೀತಿ ಯೇಸುಕ್ರಿಸ್ತನ ಜನನಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ವರ್ಷಗಳನ್ನು ಹಿಂದಕ್ಕೆ ಎಣಿಸಲಾಗುತ್ತದೆ. ಅವುಗಳನ್ನು ಇದಕ್ಕೆ ಮೊದಲು **BC** (ಅಥವಾ ಕ್ರಿಸ್ತಪೂರ್ವ)ಎಂದು ಗುರುತಿಸಲಾಗುತ್ತಿತ್ತು. ಈಗ ಅವುಗಳನ್ನು **ಸಾಮಾನ್ಯ ಶಕ ಪೂರ್ವ** ಅಥವಾ **BCE(Before Common Era)** ಎನ್ನುತ್ತಾರೆ. ಉದಾಹರಣೆಗೆ ಗೌತಮಬುದ್ಧನು ಅಂದಾಜು 560 **BCE** ರಲ್ಲಿ ಜನಿಸಿದ್ದಾರೆ.



ಚಿತ್ರ : 3.4. 3,00,000 **BCE** ಹಿಂದಿನ ಮುಖ್ಯವಾದ ಘಟನೆಗಳ ಕಾಲಕ್ರಮ

ಗ್ರೇಗೋರಿಯನ್ ಕ್ಯಾಲೆಂಡರ್: ಜಗತ್ತಿನಾದ್ಯಂತ ಈಗ ಬಳಸಲಾಗುತ್ತಿರುವ ಕ್ಯಾಲೆಂಡರ್ 12 ತಿಂಗಳುಗಳನ್ನು ಹೊಂದಿದ್ದು, ಒಟ್ಟು 365 ದಿನಗಳನ್ನು ಒಳಗೊಂಡಿದೆ. ಮತ್ತು ಪ್ರತಿ ನಾಲ್ಕು ವರ್ಷಕ್ಕೊಮ್ಮೆ ಒಂದು ಅಧಿಕ ವರ್ಷ ಬರುತ್ತದೆ. ಆದರೆ ಶತಮಾನದ ವರ್ಷಗಳು (ಉದಾಹರಣೆಗೆ 1800, 1900, 2000) ಅಧಿಕ ವರ್ಷವಾಗಲು 400 ರಿಂದ ವಿಶೇಷವಾಗಿ ಭಾಗಿಸ್ಪಡಬೇಕು. ಆದ್ದರಿಂದ ಮೇಲೆ ತಿಳಿಸಲಾದ ಮೂರು ಶತಮಾನದ ವರ್ಷಗಳಲ್ಲಿ 2000 ಮಾತ್ರ ಅಧಿಕ ವರ್ಷವಾಗಿದೆ.

ಶುಭಪ್ರದ: ಶುಭಪ್ರದವಾದ, ಶುಭಕರವಾದ ಅದೃಷ್ಟವನ್ನು ತರುವಂತಹುದು

AP SCERT

(whom we will meet in Chapter 5). Can you calculate how many years ago that was?

LET'S EXPLORE

→ Such calculations are simple, but there is a catch. In the Gregorian calendar, there is no 'year zero'. The year 1 CE follows immediately the year 1 BCE. Draw a simple timeline marking every year from 2 BCE to 2 CE; you will see that because of the absence of a year zero, only 3 years have passed between those two dates.

→ So to calculate the number of years between a BCE date and a CE date, you should add them but subtract 1 - in the above case, 2 + 2 - 1 = 3.

→ Practice a few examples with your classmates. For example, to return to the question about the Buddha, suppose we are now in the year 2024 CE, then the Buddha was born 560 + 2024 - 1 = 2,583 years ago.

APSCERT




Fig: 3.3 Timeline of some main events since 300,000 BCE


(ಇದನ್ನು ನಾವು 5ನೇ ಅಧ್ಯಾಯದಲ್ಲಿ ನೋಡುತ್ತೇವೆ). ಆ ವರ್ಷದಿಂದ ಇಂದಿಗೆ ಎಷ್ಟು ವರ್ಷಗಳು ಗತಿಸಿವೆಯೋ ನೀವು ಎಣಿಸಬಲ್ಲಿರಾ?

ಅನ್ವೇಷಿಸೋಣ

→ ಈ ಲೆಕ್ಕಗಳು ಸರಳವಾಗಿರುತ್ತವೆ. ಆದರೆ ಒಂದು ಸಮಸ್ಯೆ ಇದೆ, ಗ್ರೆಗೋರಿಯನ್ ಕ್ಯಾಲೆಂಡ್‌ನಲ್ಲಿ 'ಸೊನ್ನೆ ವರ್ಷ' ಎನ್ನುವುದು ಇಲ್ಲ. 1 **CE** ವರ್ಷ ಕೂಡಲೇ 1 **BCE** ವರ್ಷ ಬರುತ್ತದೆ. 2 **BCE** ರಿಂದ 2 **CE** ವರೆಗೆ ಪ್ರತಿ ವರ್ಷವನ್ನು ಗುರುತಿಸುತ್ತಾ ಸರಳವಾದ ಕಾಲಾನುಕ್ರಮ ರೇಖೆಯನ್ನು ಎಳೆಯಿರಿ; ಸೊನ್ನೆ ವರ್ಷ ಇಲ್ಲದಿರುವುದರಿಂದ ಆ ಎರಡು ದಿನಾಂಕಗಳ ಮಧ್ಯ ಕೇವಲ 3 ವರ್ಷಗಳು ಮಾತ್ರವೇ ಗತಿಸಿವೆ ಎಂದು ನೀವು ತಿಳಿಯುತ್ತೀರಿ.

→ ಆದ್ದರಿಂದ, ಒಂದು **BCE** ದಿನಾಂಕ ಮತ್ತು ಒಂದು **CE** ದಿನಾಂಕದ ನಡುವಿನ ಒಟ್ಟು ವರ್ಷಗಳನ್ನು ಲೆಕ್ಕ ಹಾಕಲು, ಎರಡು ಸಮಸ್ಯೆಗಳನ್ನು ಕೂಡಿಸಿ 1ನ್ನು ಕಳೆಯಬೇಕು. ಮೇಲಿನ ಉದಾಹರಣೆಯಲ್ಲಿ 2 + 2 – 1 = 3.


→ ನಿಮ್ಮ ಸಹಪಾಠಿಗಳೊಂದಿಗೆ ಇಂತಹ ಉದಾಹರಣೆಗಳನ್ನು ಅಭ್ಯಾಸ ಮಾಡಿರಿ. ಉದಾಹರಣೆಗೆ ಬುದ್ಧನ ಕುರಿತಾದ ಪ್ರಶ್ನೆಗೆ ಹಿಂದಿರುಗುವುದಾದರೆ ನಾವು ಈಗ 2024 **CE** ವರ್ಷದಲ್ಲಿ ಇದ್ದೇವೆ ಎಂದು ಅಂದುಕೊಳ್ಳಿ. ಆದರೆ ಬುದ್ಧನು ಜನಿಸಿದ ವರ್ಷ 560 + 2024 – 1 = 2,583 ವರ್ಷಗಳ ಹಿಂದೆ ಆಗುತ್ತದೆ.



ಚಿತ್ರ 3.3. BCE (ಸಾಮಾನ್ಯಶಕ ಪೂರ್ವ) 300,000 ರಿಂದ ಕೆಲವು ಪ್ರಮುಖ ಘಟನೆಗಳ ಕಲಾನುಕ್ರಮ

APSCERT

A timeline (see Fig. 3.3 on pages 78) is a convenient tool to mark such events, as it shows a sequence of dates and events covering any particular period. It runs from the beginning of humanity to the present, with a few important landmarks. Note that the dotted portion marks a skipped period; otherwise, this timeline would have to be almost 3 metres long!



A timeline also helps in understanding the order in which historical events take place. For example, even without looking at dates, you can now see that the birth of Buddha occurs before that of Jesus

AP SCERT




DON'T MISS OUT



Along with a year and a decade (a period of ten years), we often use other terms to understand longer durations of time. Two of these are quite commonly used when learning about history.

1. **Century:** It is any period of 100 years. In history, specific centuries are counted every 100 years starting from the year 1 CE. For instance, we are currently in the 21st century CE, which runs from 2001 to 2100.

ಕಾಲಾನುಕ್ರಮ ರೇಖೆ (ಚಿತ್ರ 3.3 ಅನ್ನು 79 ಪುಟದಲ್ಲಿ ನೋಡಿ) ಯಂತಹ ಸಾಧನವು ಮುಖ್ಯವಾದ ಘಟನೆಗಳನ್ನು ಗುರುತಿಸಲು ಅನುಕೂಲವಾಗಿದೆ. ಏಕೆಂದರೆ ಇದು ಯಾವುದೇ ನಿರ್ದಿಷ್ಟ ಅವಧಿಯ ದಿನಾಂಕಗಳು ಮತ್ತು ಘಟನೆಗಳ ಅನುಕ್ರಮವನ್ನು ತೋರಿಸುತ್ತದೆ. ಇದು ಮಾನವ ಕುಲದ ಆರಂಭದಿಂದ ಇಂದಿನವರೆಗೆ ಕೆಲವು ಮುಖ್ಯವಾದ ಮೈಲಿಗಲ್ಲುಗಳೊಂದಿಗೆ ಸಾಗುತ್ತದೆ. ಚುಕ್ಕೆಗಳಿಂದ ತೋರಿಸಿದ ಭಾಗವು ಮಧ್ಯದ ಅವಧಿಯನ್ನು ಬಿಟ್ಟು ಹೋದ ಅವಧಿಯನ್ನಾಗಿ ಸೂಚಿಸುತ್ತದೆ ಎಂಬುದನ್ನು ಗಮನಿಸಿರಿ. ಇಲ್ಲದಿದ್ದರೆ ಈ ಕಾಲರೇಖೆಯು ಸುಮಾರು 3 ಮೀಟರ್ ಉದ್ದವಿರಬೇಕಾಗುತ್ತಿತ್ತು.



ಒಂದು ಕಾಲಾನುಕ್ರಮ ರೇಖೆ ಇತಿಹಾಸದಲ್ಲಿ ನಡೆದ ಘಟನೆಗಳ ಅನುಕ್ರಮವನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಉದಾಹರಣೆಗೆ ದಿನಾಂಕಗಳನ್ನು ನೋಡದೆಯೇ ಬುದ್ಧನ ಜನನವು ಯೇಸುವಿನ ಜನನಕ್ಕಿಂತ ಮೊದಲು ಸಂಭವಿಸಿದೆ ಎಂದು ಈಗ ನೀವು ನೋಡಬಹುದಾಗಿದೆ.

AP SCERT

ತಪ್ಪದೇ ತಿಳಿದುಕೊಳ್ಳಿ

ಒಂದು ವರ್ಷ, ದಶಕ (ಹತ್ತು ವರ್ಷಗಳ ಅವಧಿ) ದೊಂದಿಗೆ, ದೀರ್ಘಕಾಲದ ಅವಧಿಗಳನ್ನು ಅರ್ಥ ಮಾಡಿಕೊಳ್ಳಲು ಇನ್ನೂ ಕೆಲವೊಂದು ಪದಗಳನ್ನು ಬಳಸುತ್ತೇವೆ. ಇತಿಹಾಸವನ್ನು ಅಧ್ಯಯನ ಮಾಡುವಾಗ ಈ ಎರಡನ್ನು ಹೆಚ್ಚಾಗಿ ಬಳಸುತ್ತಾರೆ.

1. ಶತಮಾನ: ಶತಮಾನ ಎನ್ನುವುದು 100 ವರ್ಷಗಳ ಅವಧಿಯನ್ನು ಸೂಚಿಸುತ್ತದೆ. ಇತಿಹಾಸದಲ್ಲಿ ನಿರ್ದಿಷ್ಟ ಶತಮಾನಗಳನ್ನು 1 **CE** ರಿಂದ ಪ್ರತಿ 100 ವರ್ಷಗಳಿಗೆ ಎಣಿಸಲಾಗುತ್ತದೆ. ಉದಾಹರಣೆಗೆ, ನಾವು ಪ್ರಸ್ತುತ 21ನೇ ಶತಮಾನದಲ್ಲಿದ್ದೇವೆ, ಇದು 2001 ರಿಂದ 2100 ವರೆಗೆ ಇರುತ್ತದೆ.

The centuries BCE are calculated beginning from the year 1 BCE and keep going back in time. For example, the 3rd century BCE would include the years 300 BCE to 201 BCE.

2. **Millennium:** It is any period of 1,000 years. In history, specific centuries are counted every 1,000 years from the year 1 CE. For instance, we are currently in the 3rd millennium CE, which began in 2001 CE and will go up to 3000 CE.
As with centuries, millenniums BCE are also calculated beginning from 1 BCE and go backwards. So the 1st millennium BCE would include the years 1 BCE to 1000 BCE.
In the timeline given on page 78 (Fig. 3.3), can you mark the beginning of the 8th millennium BCE? (Note: In English, the plural of 'millennium' is 'millenniums' or 'millennia'; both are correct.)



LET'S EXPLORE



Create a timeline stretching from 1900 CE to the current year and place the dates of birth of your grandparents, parents, siblings and yourself. Also, mark the years that the 20th century CE begins with and ends with.



DON'T MISS OUT



Do you know how calendars have been traditionally made in India? Many Indian calendars rely on the positions of the sun and the moon to define the months of the year. A 'panchanga' is a book of tables which lists the days of each month along with related astronomical data; for instance, it precisely predicts events like solar and lunar eclipses, times for sunrise and sunset, etc. Panchangas, still widely used in India, often also give weather predictions for the year, dates and timings of festivals, and more...

What Are the Sources of History?



LET'S EXPLORE



Can you collect information about at least three generations of your family on your mother's and father's sides? Create a family tree with your parents, grandparents and great-grandparents. Find out their names, what they did for a living and where they were born. Also, write the sources from where you got this information.

Source of history: A place, person, text or an object from which we gather information about some past event or period.

APSCERT

BCE ಶತಮಾನಗಳು 1 **BCE** ರಿಂದ ಎಣಿಸಲಾಗುತ್ತದೆ ಮತ್ತು ಅವಧಿಯನ್ನು ಹಿಂದಕ್ಕೆ ಎಣಿಸುತ್ತಾರೆ. ಉದಾರಹಣೆಗೆ ಕ್ರಿಸ್ತಪೂರ್ವ 3ನೇ ಶತಮಾನ ಎಂದರೆ 300 **BCE** ರಿಂದ 201 **BCE** ವರೆಗೆ ಇರುವ ವರ್ಷಗಳನ್ನು ಒಳಗೊಂಡಿರುತ್ತದೆ.

2. **ಸಹಸ್ರಮಾನ :** ಇದು 1,000 ವಷಗಳ ಅವಧಿ. ಇತಿಹಾಸದಲ್ಲಿ ಪ್ರತಿ 1,000 ವರ್ಷಗಳಿಗೆ ಒಂದು ಸಾರಿ ಸಹಸ್ರಮಾನಗಳನ್ನು ಎಣಿಸುತ್ತಾರೆ. ಇದು 1 **CE**ದಿಂದ ಆರಂಭವಾಗುತ್ತದೆ. ಉದಾಹರಣೆಗೆ ನಾವು ಈಗ ಸಾ.ಶ. 3ನೇ ಸಹಸ್ತಮಾನದಲ್ಲಿದ್ದೇವೆ. ಇದು ಸಾ.ಶ. 2001ರಲ್ಲಿ ಪ್ರಾರಂಭವಾಗಿ ಸಾ.ಶ. 3000 **CE** ವರೆಗೆ ಇರುತ್ತದೆ. ಶತಮಾನಗಳಂತೆ ಸಾ.ಶ.ಪೂ ಸಹಸ್ರಮಾನಗಳನ್ನು ಸಹ ಸಾ.ಶ.ಪೂ, 1 **BCE** ರಿಂದ ಪ್ರಾರಂಭಿಸಿ ಹಿಂದಕ್ಕೆ ಲೆಕ್ಕ ಹಾಕಲಾಗುತ್ತದೆ. ಆದ್ದರಿಂದ 1ನೇ ಸಹಸ್ರಮಾನವು 1 **BCE** ರಿಂದ 1000 **BCE** ವರೆಗೆ ವರ್ಷಗಳನ್ನು ಒಳಗೊಂಡಿರುತ್ತದೆ.

ಪುಟ 79ರಲ್ಲಿ ನೀಡಿರುವ ಕಾಲಗಣನೆ ರೇಖೆಯಲ್ಲಿ (ಚಿತ್ರ 3.3)ರಲ್ಲಿ ನೀವು ಸಾ.ಶ.ಪೂ **BCE** 8ನೇ ಸಹಸ್ರಮಾನದ ಪ್ರಾರಂಭವನ್ನು ಗುರುತಿಸಬಲ್ಲಿರಾ? (ಸೂಚನೆ: ಇಂಗ್ಲೀಷ್‌ನಲ್ಲಿ '**millennium**' ನ ಬಹುವಚನ '**millenniums or millennia**'; ಇವೆರಡೂ ಸರಿಯಾಗಿವೆ.)

ಅನ್ವೇಷಿಸೋಣ

1900 CE ರಿಂದ ಪ್ರಸ್ತುತ ವರ್ಷದವರೆಗೆ ಒಂದು ಕಾಲಾನುಕ್ರಮ ರೇಖೆಯನ್ನು ರಚಿಸಿರಿ ಮತ್ತು ನಿಮ್ಮ ಅಜ್ಜ, ತಂದೆ–ತಾಯಿ, ಸಹೋದರರು, ಸಹೋದರಿಯರು ಮತ್ತು ನಿಮ್ಮ ಜನ್ಮ ದಿನಾಂಕಗಳನ್ನು ಗುರ್ತಿಸಿರಿ. ಅದೇ ರೀತಿ ಕ್ರಿಸ್ತಶಕ 20ನೇ ಶತನಮಾನ ಯಾವಾಗ ಪ್ರಾರಂಭವಾಯಿತು. ಯಾವಾಗ ಕೊನೆಗೊಂಡಿತು ಎನ್ನುವುದನ್ನು ಗುರುತಿಸಿ.

ತಪ್ಪದೇ ತಿಳಿದುಕೊಳ್ಳಿ

ಭಾರತದಲ್ಲಿ ಕ್ಯಾಲೆಂಡರ್‌ಗಳನ್ನು ಸಾಂಪ್ರದಾಯಿಕವಾಗಿ ಹೇಗೆ ತಯಾರಿಸಲಾಗುತ್ತದೆ ಎಂದು ನಿಮಗೆ ತಿಳಿದಿದೆಯೇ? ಅನೇಕ ಭಾರತೀಯ ಕ್ಯಾಲೆಂಡರ್‌ಗಳು ವರ್ಷದ ತಿಂಗಳುಗಳನ್ನು ನಿರ್ಧರಿಸಲು ಸೂರ್ಯ ಮತ್ತು ಚಂದ್ರನ ಸ್ಥಿತಿಗಳನ್ನು ಆಧಾರವಾಗಿ ತೆಗೆದುಕೊಳ್ಳುತ್ತವೆ. **'ಪಂಚಾಂಗ'** ಎಂಬುದು ಪ್ರತಿ ತಿಂಗಳಿನ ದಿನಗಳನ್ನು ಮತ್ತು ಸಂಬಂಧಿತ ಖಗೋಳ ಮಾಹಿತಿಯನ್ನು ಕೋಷ್ಟಕಗಳ ರೂಪದಲ್ಲಿ ತೋರಿಸುವ ಪುಸ್ತಕ. ಉದಾಹರಣೆಗೆ, ಇದು ಸೂರ್ಯ ಗ್ರಹಣ, ಚಂದ್ರ ಗ್ರಹಣ, ಸೂರ್ಯೋದಯ ಮತ್ತು ಸೂರ್ಯಾಸ್ತಮದ ಸಮಯಗಳನ್ನು ನಿಖರವಾಗಿ ಮೊದಲೇ ಹೇಳುತ್ತದೆ. ಭಾರತದಲ್ಲಿ ಪಂಚಾಂಗಗಳನ್ನು ಇಂದಿಗೂ ವ್ಯಾಪಕವಾಗಿ ಉಪಯೋಗಿಸಲಾಗುತ್ತಿದೆ. ಇವು ಒಂದು ವರ್ಷಕ್ಕೆ ಸಂಬಂಧಿಸಿದ ಹವಾಮಾನ ಮುನ್ಸೂಚನೆಗಳು, ಹಬ್ಬಗಳ ದಿನಾಂಕಗಳು ಮತ್ತು ಸಮಯಗಳು ಹಾಗೂ ಇನ್ನಿತರ ಮಾಹಿತಿಯನ್ನು ನೀಡುತ್ತವೆ.

ಇತಿಹಾಸದ ಆಧಾರಗಳು ಯಾವುವು?

ಇತಿಹಾಸದ ಆಧಾರ: ಗತ ಕಾಲದ ಘಟನೆಯ ಬಗ್ಗೆ ನಾವು ಒಬ್ಬ ವ್ಯಕ್ತಿ, ಬರವಣಿಗೆ, ಸ್ಥಳ, ವಸ್ತುಗಳಿಂದ ಸಂಗ್ರಹಿಸಿದ ಮಾಹಿತಿ.

ಅನ್ವೇಷಿಸೋಣ

ನೀವು, ನಿಮ್ಮ ತಾಯಿ ಅಥವಾ ತಂದೆಯ ಕಡೆಯ ಕನಿಷ್ಟ ಮೂರು ತಲೆಮಾರುಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಬಲ್ಲಿರಾ? ನಿಮ್ಮ ತಂದೆ–ತಾಯಿಗಳ, ಅಜ್ಜ, ಮುತ್ತಜ್ಜರ ವಿವರಗಳನ್ನೊಳಗೊಂಡ ವಂಶವೃಕ್ಷ **(family tree)** ರಚಿಸಿರಿ. ಅವರ ಹೆಸರುಗಳು ಅವರು ಜೀವನೋಪಾಯಕ್ಕಾಗಿ ಏನು ಮಾಡುತ್ತಿದ್ದರು ಮತ್ತು ಅವರು ಎಲ್ಲಿ ಜನಿಸಿದರು ಎನ್ನುವ ಮಾಹಿತಿಯನ್ನು ತಿಳಿದುಕೊಳ್ಳಿರಿ. ನಿಮಗೆ ಈ ಮಾಹಿತಿ ದೊರೆತ ಮೂಲಗಳನ್ನು ಕೂಡ ಬರೆಯಿರಿ.

APSCERT

Relation	Name	Occupation	Place of birth	Source of information
Grandparents (paternal)				
Grandparents (maternal)				
Relation Great-grandparents (paternal)				
Great-grandparents (maternal)				

AP SCERT

How did you find details about your family's past? Did you rely on things like photographs, diaries, ID cards or memories from your parents and relatives?



THINK ABOUT IT



Have you ever seen old coins, books, clothes, jewellery or utensils in and around your house? What type of information can we gain from such objects? Or from old houses or buildings?

Every object or structure tells a story and is like a piece in a jigsaw puzzle. The objects that you see around your house convey something of the history of your family. Similarly, we can put together historical events through a variety of sources. But keep in mind that in the case of history, quite a few pieces of the puzzle may remain missing!

Observe the figure in the next page. It brings together the main sources of history. You do not need to remember them all now; we will use some of them as we go along.

ಸಂಬಂಧ	ಹೆಸರು	ವೃತ್ತಿ	ಹುಟ್ಟಿದ ಸ್ಥಳ	ಮಾಹಿತಿಯ ಮೂಲ (ಆಧಾರ)
ಅಜ್ಜ–ಅಜ್ಜಿಯರು (ತಂದೆಯ ಕಡೆ)				
ಅಜ್ಜ–ಅಜ್ಜಿಯರು (ತಾಯಿಯ ಕಡೆ)				
ಮುತ್ತಜ್ಜ–ಮುತ್ತಜ್ಜಿಯರು (ತಂದೆಯ ಕಡೆ)				
ಮುತ್ತಜ್ಜ–ಮುತ್ತಜ್ಜಿಯರು (ತಾಯಿಯ ಕಡೆ)				

ನಿಮ್ಮ ಕುಟುಂಬದ ಗತ ಕಾಲದ ಬಗ್ಗೆ ವಿವರಗಳನ್ನು ನೀವು ಹೇಗೆ ಕಂಡುಕೊಂಡಿರಿ? ಭಾವಚಿತ್ರಗಳು, ದಿನಚರಿಗಳು, ಗುರುತಿನ ಚೀಟಿಗಳು, ಅಥವಾ ನಿಮ್ಮ ತಂದೆ–ತಾಯಿಗಳು ಮತ್ತು ಸಂಬಂಧಿಕರು ಹೇಳಿದ ನೆನಪುಗಳಂತಹ ವಿಷಯಗಳೂ ನಿಮಗೆ ಹೇಗೆ ಸಹಾಯಕವಾದವು?




ಆಲೋಚಿಸಿ



ನೀವು ಎಂದಾದರೂ ನಿಮ್ಮ ಮನೆ ಮತ್ತು ಮನೆಯ ಸುತ್ತಮುತ್ತಲ ಹಳೆಯ ನಾಣ್ಯಗಳು, ಪುಸ್ತಕಗಳು, ಬಟ್ಟೆಗಳು, ಆಭರಣಗಳು ಅಥವಾ ಪಾತ್ರೆಗಳನ್ನು ನೋಡಿದ್ದೀರಾ? ಅಂತಹ ವಸ್ತುಗಳಿಂದ ಮತ್ತು ಹಳೆಯ ಮನೆ ಅಥವಾ ಕಟ್ಟಡಗಳಿಂದ ನಾವು ಎಂತಹ ಮಾಹಿತಿಯನ್ನು ಪಡೆಯಬಹುದು?

ಪ್ರತಿಯೊಂದು ವಸ್ತು ಅಥವಾ ಕಟ್ಟಡ ಒಂದು ಕತೆಯನ್ನು ಹೇಳುತ್ತದೆ ಮತ್ತು ಅದು ಜಿಗ್ಸಾ ಫಜಲ್‌ನ ಒಂದು ತುಣುಕಿನಂತೆ ಇರುತ್ತದೆ. ನಿಮ್ಮ ಮನೆಯ ಸುತ್ತಮುತ್ತ ನೀವು ನೋಡುವ ವಸ್ತುಗಳು ನಿಮ್ಮ ಕುಟುಂಬದ ಇತಿಹಾಸದ ಯಾವುದೋ ವಿಷಯವನ್ನು ತಿಳಿಸುತ್ತವೆ. ಅದೇ ರೀತಿ ನಾವು ವಿವಿಧ ರೀತಿಯ ಆಕರಗಳ ಮೂಲಕ ಐತಿಹಾಸಿಕ ಘಟನೆಗಳನ್ನು ಒಟ್ಟುಗೂಡಿಸಬಹುದು. ಆದರೆ ಇತಿಹಾಸದ ವಿಷಯದಲ್ಲಿ ಫಜಲ್‌ನ ಕೆಲವು ತುಣುಕುಗಳು ಕಾಣೆಯಾಗುವ ಅವಕಾಶವಿದೆ! ಮುಂದಿನ ಪುಟದಲ್ಲಿರುವ ಚಿತ್ರವನ್ನು ಗಮನಿಸಿ ಇದು ಇತಿಹಾಸದ ಪ್ರಮುಖ ಆಧಾರಗಳನ್ನು ಒಂದು ಕಡೆ ಸೇರಿಸಿ ತೋರಿಸುತ್ತದೆ. ಆ ಪದಗಳನ್ನು ನೀವು ಈಗಲೇ ನೆನಪಿಟ್ಟುಕೊಳ್ಳುವ ಅಗತ್ಯವಿಲ್ಲ. ಅವುಗಳಲ್ಲಿ ಕೆಲವನ್ನು ಮೊದಲು ಬಳಸುತ್ತಾರೆ.

AP SCERT



When historians study, say, a king or queen of 1,500 years ago, an ancient monument, a war or some items of trade, they take great care to gather information from as many sources as they can find and consult. Sometimes, the sources confirm each other (the jigsaw pieces match); at other times, sources may give contradictory information (the jigsaw pieces don't match), in which case they need to decide which source they can trust more. That is how they try to re-create the history of the period they are studying.


Historian: A person who studies and writes about the past.

Who contributes to all these sources of history? Historians themselves, but also archaeologists, epigraphists (who study ancient inscriptions), anthropologists (who study human societies and their cultures), experts in literature and languages, and some more. In addition, in the last 50 years or so, scientific studies have been contributing more and more to the reconstruction of the past.

Genetics : The branch of biology that studies how, in plants, animals or humans, certain features and characteristics get passed down from one generation to the next

For example, studies of ancient climates, chemical studies of excavated materials and studies of the genetics of ancient people have provided fresh insights, which supplement the more usual sources. And when historians study recent history (which usually means the last two or three centuries), another source is newspapers; for the last few decades, electronic media (television, the internet, etc.) can also be consulted.

APSCERT



ಉದಾಹರಣೆಗೆ, ಇತಿಹಾಸಕಾರರು, 1,500 ವರ್ಷಗಳ ಹಿಂದಿನ ಒಬ್ಬ ರಾಜ ಅಥವಾ ರಾಣಿಯ ಬಗ್ಗೆ ಒಂದು ಪ್ರಾಚೀನ ಸ್ಮಾರಕ, ಒಂದು ಯುದ್ಧ ಅಥವಾ ವ್ಯಾಪಾರ ಸಂಬಂಧಿ ವಸ್ತುಗಳ ಬಗ್ಗೆ ಅಧ್ಯಯನ ಮಾಡುವಾಗ, ಅವರು ಎಲ್ಲಾ ಆಧಾರಗಳಿಂದ ಮಾಹಿತಿಯನ್ನು ಸಂಗ್ರಹಿಸಲು, ಎಷ್ಟೋ ಜನರನ್ನು ಸಂಪರ್ಕಿಸಲು ಪ್ರಯತ್ನಿಸುತ್ತಾರೆ. ಕೆಲವೊಮ್ಮೆ ಈ ಆಧಾರಗಳು ಒಂದನ್ನೊಂದು ದೃಢೀಕರಿಸುತ್ತವೆ. (ಜಿಗ್ಸಾ ತುಣುಕುಗಳು ಹೊಂದಿಕೊಳ್ಳುತ್ತವೆ) ಇನ್ನು ಕೆಲವು ಸಂದರ್ಭದಲ್ಲಿ ಆಧಾರಗಳು ಪರಸ್ಪರ ವಿರುದ್ಧವಾದ ಮಾಹಿತಿ ನೀಡುತ್ತವೆ (ಜಿಗ್ಸಾ ತುಣುಕುಗಳು ಹೊಂದಾಣಿಕೆಯಾಗುವುದಿಲ್ಲ). ಆಗ ಅವರು ಯಾವ ಮೂಲವನ್ನು ಆಧಾರವಾಗಿ ಮಾಡಿಕೊಳ್ಳಬೇಕು ಎಂಬ ವಿಷಯವನ್ನು ನಿರ್ಧರಿಸಿಕೊಳ್ಳಬೇಕು. ಈ ರೀತಿಯಾಗಿ ಅವರು ತಾವು ಅಧ್ಯಯನ ಮಾಡುತ್ತಿರುವ ಕಾಲದ ಇತಿಹಾಸವನ್ನು ಮರುಸೃಷ್ಟಿಸಲು ಪ್ರಯತ್ನಿಸುತ್ತಾರೆ.

ಇತಿಹಾಸಕಾರ: ಗತ ಕಾಲವನ್ನು ಅಧ್ಯಯನ ಮಾಡಿ ಬರೆಯುವ ವ್ಯಕ್ತಿ.

ಈ ಎಲ್ಲಾ ಇತಿಹಾಸದ ಆಧಾರಗಳಿಗೆ ಯಾರು ಕೊಡುಗೆ ನೀಡಿದ್ದಾರೆ? ಇತಿಹಾಸಕಾರರೊಂದಿಗೆ ಪುರಾತತ್ವ ಶಾಸ್ತ್ರಜ್ಞರು, ಶಿಲಾ ಶಾಸನ ಶಾಸ್ತ್ರಜ್ಞರು (ಪ್ರಾಚೀನ ಶಾಸನಗಳನ್ನು ಅಧ್ಯಯನ ಮಾಡುವವರು) ಮಾನವಶಾಸ್ತ್ರಜ್ಞರು (ಮಾನವ ಸಮಾಜ ಮತ್ತು ಅವುಗಳು ಸಂಸ್ಕೃತಿಯನ್ನು ಅಧ್ಯಯನ ಮಾಡುವವರು) ಸಾಹಿತ್ಯ ಮತ್ತು ಭಾಷಾ ತಜ್ಞರು ಹಾಗೆಯೇ ಬಹಳ ಜನರು ಇದಕ್ಕಾಗಿ ಸಹಕರಿಸುತ್ತಾರೆ. ಇದಲ್ಲದೇ ಕಳೆದ 50 ವರ್ಷಗಳಿಂದ ವೈಜ್ಞಾನಿಕ ಅಧ್ಯಯನಗಳು ಗತಕಾಲದ ಪುನರ್ನಿರ್ಮಾಣಕ್ಕೆ ಹೆಚ್ಚಿನ ಕೊಡುಗೆ ನೀಡುತ್ತವೆ.

ತಳಶಾಸ್ತ್ರ: ಸಸ್ಯ ಅಥವಾ ಜೀವಿಗಳ ಗುಣಲಕ್ಷಣ ಗಳು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಹೇಗೆ ಹರಡುತ್ತವೆ ಎಂಬುದನ್ನು ಅಧ್ಯಯನ ಮಾಡುವ ಜೀವಶಾಸ್ತ್ರದ ಶಾಖೆ.

ಉದಾಹರಣೆಗೆ, ಪ್ರಾಚೀನ ಕಾಲದ ಪರಿಸ್ಥಿತಿಗಳ ಬಗ್ಗೆ ಅಧ್ಯಯನಗಳು ಉತ್ಖನನಗಳಲ್ಲಿ ದೊರೆತ ವಸ್ತುಗಳ ಬಗೆಗಿನ ಅಧ್ಯಯನಗಳು, ಪ್ರಾಚೀನ ಜನರ ತಳಿಶಾಸ್ತ್ರದ ಅಧ್ಯಯನಗಳಿಂದ ಬೆಳಕಿಗೆ ಬಂದ ವಿಷಯಗಳು ಸಾಮಾನ್ಯ ಮಾಹಿತಿಗೆ ಪೂರಕವಾಗಿ ಇರುತ್ತವೆ. ಇತಿಹಾಸಕಾರರು ಇತ್ತೀಚಿನ ಇತಿಹಾಸವನ್ನು (ಸಾಮಾನ್ಯವಾಗಿ ಗತಿಸಿದ ಎರಡು ಅತವಾ ಮೂರು ಶತಮಾನಗಳು) ಅಧ್ಯಯನ ಮಾಡಿದಾಗ ಉಪಯೋಗಕ್ಕೆ ಬಂದ ಮತ್ತೊಂದು ಸಂಪನ್ಮೂಲ ವಾರ್ತಾ ಪತ್ರಿಕೆಗಳು. ಕಳೆದ ಕೆಲ ದಶಕಗಳಿಂದ ಎಲೆಕ್ಟ್ರಾನಿಕ್ ಮೀಡಿಯಾ (ದೂರದರ್ಶನ, ಅಂತರ್ಜಾಲ ಮುಂತಾದವು)ವನ್ನು ಸಹಿತ ಪರಿಗಣಿಸಬಹುದು.

AP SCERT

LET'S EXPLORE

There are a few images of different sources of history on the next page. Who and what do you think the objects show? Write down in the boxes next to the images any information that you get from these objects.

1



2



3



© SCERT

ಅನ್ವೇಷಿಸೋಣ

ಮುಂದಿನ ಪುಟದಲ್ಲಿ ಇತಿಹಾಸಕ್ಕೆ ಸಂಬಂಧಿಸಿದ ವಿವಿಧ ಆಧಾರಗಳ ಚಿತ್ರಗಳು ಇವೆ. ಈ ವಸ್ತುಗಳು ಯಾರವು ಮತ್ತು ಏನನ್ನು ತೋರಿಸುತ್ತವೆ ಎಂದು ನೀವು ಭಾವಿಸುತ್ತೀರಿ. ಈ ವಸ್ತುಗಳಿಂದ ನೀವು ಪಡೆದ ಮಾಹಿತಿಯನ್ನು ಮುಂದಿನ ಚಿತ್ರಗಳ ಬಾಕ್ಸ್‌ನಲ್ಲಿ ಬರೆಯಿರಿ.

1



2



3



© NCERT

The Beginnings of Human History

Modern humans (Homo sapiens) have walked the planet for about 300,000 (three lakh) years. This appears to be a very long time, yet it is only a tiny fraction of the Earth's history. Let us have a quick look at our early history.



APSCERT

LET'S EXPLORE

In the above picture, look at some activities of early humans in a rock shelter. Which ones can you recognise? Give a brief description for each.

Early humans faced many challenges from nature and lived in bands or groups to help each other. They were constantly seeking shelter and food, and were mainly hunters and gatherers; this means that they relied on hunting and collecting edible plants and fruits for their survival. Our early ancestors also had certain beliefs about the natural elements and possibly also some notion of afterlife.

Afterlife: A life that begins after death.

ಮಾನವ ಇತಿಹಾಸ ಆರಂಭ

ಆಧುನಿಕ ಮಾನವರು (ಹೋಮೊ ಸೆಪಿಯನ್ಸ್) ಸುಮಾರು 3,00,000 (ಮೂರು ಲಕ್ಷ) ವರ್ಷಗಳಿಂದ ಈ ಭೂಮಿಯ ಮೇಲೆ ವಾಸಿಸುತ್ತಿದ್ದಾರೆ. ಇದು ಬಹಳ ಸುದೀರ್ಘ ಅವಧಿ ಎಂದು ತೋರಿದರೂ, ಭೂಮಿಯ ಇತಿಹಾಸದಲ್ಲಿ ಇದು ಭಾಗವಾಗಿದೆ. ನಮ್ಮ ಪ್ರಾಚೀನ ಇತಿಹಾಸವನ್ನು ಒಂದು ಸಾರಿ ಸಂಕ್ಷಿಪ್ತವಾಗಿ ಪರಿಶೀಲಿಸೋಣ.



APSCERT

ಅನ್ವೇಷಿಸೋಣ

"ಮೇಲಿನ ಚಿತ್ರದಲ್ಲಿ ಬೆಟ್ಟದ ಗುಹೆಯಲ್ಲಿ (ಶಿಲಾ ಆಶ್ರಯ) ಆದಿ ಮಾನವರು ಮಾಡುತ್ತಿರುವ ಕೆಲವು ಚಟುವಟಿಕೆಗಳನ್ನು ಗಮನಿಸಿ. ಅವುಗಳಲ್ಲಿ ನೀವು ಯಾವುದನ್ನು ಗುರುತಿಸಬಲ್ಲಿರಿ? ಅವುಗಳ ಪ್ರತಿಯೊಂದರ ಕುರಿತು ಸಂಕ್ಷಿಪ್ತವಾಗಿ ವಿವರಿಸಿರಿ.

ಆದಿ ಮಾನವರು ಪ್ರಕೃತಿಯಿಂದ ಅನೇಕ ಸವಾಲುಗಳನ್ನು ಎದುರಿಸಿದರು. ಪರಸ್ಪರ ಸಹಾಯ ಮಾಡಲು ಗುಂಪುಗಳಾಗಿ ವಾಸಿಸುತ್ತಿದ್ದರು. ಅವರು ನಿರಂತರವಾಗಿ ಆಹಾರ ಮತ್ತು ವಸತಿಗಳಿಗಾಗಿ ಹುಡುಕುತ್ತಿದ್ದರು. ಅವರು ಮುಖ್ಯವಾಗಿ ಬೇಟೆಗಾರರಾಗಿ ಮತ್ತು ಸಂಗ್ರಹಕರಾಗಿ ಇದ್ದರು. ಅಂದರೆ ಅವರು ತಮ್ಮ ಉಳಿವಿಗಾಗಿ ಪ್ರಾಣಿಗಳನ್ನು ಬೇಟೆಯಾಡುವುದು, ತಿನ್ನಬಹುದಾದ ಗಿಡಮೂಲಿಕೆಗಳು; ಹಣ್ಣುಗಳನ್ನು ಸಂಗ್ರಹಿಸುವುದರ ಮೇಲೆ ಅವಲಂಬಿಸಿದ್ದರು. ನಮ್ಮ ಪೂರ್ವಜರಿಗೆ ಪ್ರಕೃತಿ ಶಕ್ತಿಗಳ ಬಗ್ಗೆ ಮತ್ತು ಬಹುಶಃ ಮರಣಾನಂತರದ ಜೀವನದ ಬಗ್ಗೆಯೂ ಕೆಲವು ನಂಬಿಕೆಗಳು ಮತ್ತು ಕಲ್ಪನೆಗಳು ಇದ್ದವು.

ಮರಣಾನಂತರದ ಜೀವನ : ಸಾವಿನ ನಂತರ ಪ್ರಾರಂಭವಾಗುವ ಜೀವನ.

These groups lived in temporary camps, rock shelters or caves, and communicated with each other using languages that are now lost. They used fire and started making objects that made their lives easier, like improved stone axes and blades, arrowheads and other tools. Aspects of their life are visible in rock paintings found in hundreds of caves all over the world. Some of those paintings depict simple figures or a few symbols; others are more detailed and represent scenes with animals or humans. In time, these early humans learned to make simple ornaments such as stone or shell beads, pendants made of animal teeth, and sometimes exchanged them with other groups.

The First Crops

Over long ages, the Earth's climate has gone through many changes. At certain times, it was very cold and much of the Earth was covered with ice - this is called an 'Ice Age', as you will learn in greater detail in Science. Later, when the climate warmed up, this ice partly melted, and the resulting waters swelled the existing rivers and eventually drained into the oceans. The last Ice Age lasted from over 100,000 (one lakh) years ago to around 12,000 years ago.

Afterwards, living conditions improved for humans; in many parts of the world, they started settling down and cultivating cereals and grains. They also domesticated animals such as cattle, goats, etc. With more food available, these communities grew in size and number, and often settled down near rivers. This was not only because of the availability of water, but also because the soil would be more fertile there. It made the process of growing crops easier.

AP SCERT



LET'S EXPLORE



"Observe the scene on the next page. It depicts an agricultural community from a few millenniums ago. List the main activities you can identify"

ಈ ಗುಂಪುಗಳು ತಾತ್ಕಾಲಿಕ ನಿವಾಸಗಳಲ್ಲಿ, ಬಂಡೆಗಳ ಆಶ್ರಯದಲ್ಲಿ ಅಥವಾ ಗುಹೆಗಳಲ್ಲಿ ವಾಸಿಸುತ್ತಿದ್ದರು. ಪ್ರಸ್ತುತ ಅಳಿದು ಹೋದ ಅವರ ಭಾಷೆಯನ್ನು ಉಪಯೋಗಿಸಿ ಒಬ್ಬರಿಗೊಬ್ಬರು ಮಾತನಾಡುತ್ತಿದ್ದರು. ಅವರು ಬೆಂಕಿಯನ್ನು ಬಳಸಿದರು. ಅವರ ಜೀವನವನ್ನು ಸುಲಭಗೊಳಿಸುವ ವಸ್ತುಗಳಾದ ಉತ್ತಮವಾದ ಕಲ್ಲಿನ ಕೊಡಲಿಗಳು, ಬ್ಲೇಡುಗಳು, ಬಾಣದ ಮೊನಚುಗಳು ಮತ್ತು ಇತರ ಸಾಧನಗಳನ್ನು ತಯಾರಿಸಲು ಪ್ರಾರಂಭಿಸಿದರು. ಅವರ ಜೀವನದ ವಿವಿಧ ಆಯಾಮಗಳು ಪ್ರಪಂಚದಾದ್ಯಮತ ನೂರಾರು ಗುಹೆಗಳಲ್ಲಿ ಕಂಡು ಬರುವ ಶಿಲಾ ವರ್ಣಚಿತ್ರಗಳಲ್ಲಿ ಗೋಚರಿಸುತ್ತವೆ. ಆ ವರ್ಣಚಿತ್ರಗಳಲ್ಲಿ ಕೆಲವು ಸರಳ ಆಕೃತಿಗಳು ಅಥವಾ ಚಿಹ್ನೆಗಳು ಇರುತ್ತವೆ. ಇನ್ನು ಕೆಲವು ಪ್ರಾಣಿಗಳು ಅಥವಾ ಮಾನವರಿಂದ ಕೂಡಿದ ದೃಶ್ಯಗಳನ್ನು ವಿವರವಾಗಿ ತೋರಿಸುತ್ತವೆ. ಕಾಲಾನಂತರದಲ್ಲಿ, ಈ ಆದಿ ಮಾನವರು ಕಲ್ಲಿನ ಮಣಿಗಳು, ಚಿಪ್ಪಿನ ಮಣಿಗಳೂ, ಪ್ರಾಣಿಗಳ ದಂತಗಳಿಂದ ಮಾಡಿದ ಕಂಠ ಆಭರಣಗಳಂತಹ ಸರಳವಾದ ಆಭರಣಗಳನ್ನು ತಯಾರಿಸುವುದನ್ನು ಕಲಿತರು. ಕೆಲವೊಮ್ಮೆ ಅವುಗಳನ್ನು ಇತರ ಗುಂಪುಗಳೊಂದಿಗೆ ವಿನಿಮಯ ಮಾಡಿಕೊಳ್ಳುತ್ತಿದ್ದರು.

ಮೊದಲ ಬೆಳೆಗಳು

ಬಹಳ ಯುಗಗಳಿಂದ ಭೂಮಿಯ ಹವಾಮಾನವು ಅನೇಕ ಬದಲಾವಣೆಗೆ ಒಳಗಾಗಿದೆ, ಕೆಲವು ಸಮಯದಲ್ಲಿ ಭೂಮಿ ಬಹಳ ತಂಪಾಗಿರುತ್ತಿತ್ತು ಮತ್ತು ಭೂಮಿಯ ಬಹುಭಾಗವು ಹಿಮದಿಂದ ಆವೃತ್ತವಾಗಿತ್ತು. ಇದನ್ನು **'ಹಿಮಯುಗ'** ಎಂದು ಕರೆಯುತ್ತಿದ್ದರು. ನೀವು ಇದರ ಬಗ್ಗೆ ವಿಜ್ಞಾನಶಾಸ್ತ್ರದಲ್ಲಿ ಮತ್ತಷ್ಟು ವಿವರವಾಗಿ ತಿಳಿದುಕೊಳ್ಳುತ್ತೀರಿ. ನಂತರ ಹವಾಮಾನವು ಬದಲಾವಣೆ ಹೊಂದಿ ಬಿಸಿಯಾದಾಗ ಈ ಮಂಜು (ಹಿಮ) ಭಾಗಶಃ ಕರಗಿತು ಇದರಿಂದ ಎರ್ಪಟ್ಟ ನೀರು ನದಿಗಳಲ್ಲಿ ಪ್ರವಹಿಸಿ ಕೊನೆಗೆ ಸಾಗರವನ್ನು ಸೇರಿತು. ಕೊನೆಯ ಹಿಮ ಯುಗವು ಸುಮಾರು 1,00,000 ವರ್ಷಗಳ ಹಿಂದಿನಿಂದ ಸುಮಾರು 12,000 ವರ್ಷಗಳ ಹಿಂದಿನವರೆಗೂ ಮುಂದುವರೆದಿತ್ತು.

ಆ ನಂತರ ಮಾನವರಿಗೆ ಜೀವನ ಪರಿಸ್ಥಿತಿಗಳು ಸುಧಾರಿಸಿದವು. ಪ್ರಪಂಚದ ಅನೇಕ ಭಾಗಗಳಲ್ಲಿ ಅವರು ನೆಲೆಸಲು ಮತ್ತು ಧಾನ್ಯಗಳನ್ನು ಬೆಳೆಸಲು ಪ್ರಾರಂಭಿಸಿದರು. ಅವರು ದನ ಕರುಗಳನ್ನು, ಮೇಕೆಗಳನ್ನು, ಎತ್ತುಗಳನ್ನು ಮುಂತಾದ ಪ್ರಾಣಿಗಳನ್ನು ಪಳಗಿಸಿದರು. ಹೆಚ್ಚಿನ ಆಹಾರ ಲಭ್ಯವಾದಂತೆ ಆ ಸಮುದಾಯಗಳು ಗಾತ್ರ ಮತ್ತು ಸಂಖ್ಯೆಯಲ್ಲಿ ಬೆಳೆದವು. ಅವರು ಹೆಚ್ಚಾಗಿ ನದಿಗಳ ಬಳಿ ನೆಲೆಸಿದರು. ಇದು ಕೇವಲ ನೀರಿನ ಲಭ್ಯತೆಯಿಂದಾಗಿ ಮಾತ್ರವಲ್ಲದೆ, ಅಲ್ಲಿನ ಮಣ್ಣು ಹೆಚ್ಚಿನ ಫಲವತ್ತತ್ವಾಗಿರುತ್ತಿತ್ತು ಎಂಬ ಕಾರಣಕ್ಕೂ ಆಗಿತ್ತು. ಇದು ಬೆಳೆಗಳನ್ನು ಬೆಳೆಯುವ ಪ್ರಕ್ರಿಯೆಯನ್ನು ಸುಲಭಗೊಳಿಸಿತು.

ಅನ್ವೇಷಿಸೋಣ

"ಮುಂದಿನ ಪುಟದಲ್ಲಿರುವ ದೃಶ್ಯವನ್ನು ಗಮನಿಸಿ, ಇದು ಕೆಲವು ಸಾವಿರ ವರ್ಷಗಳ ಹಿಂದೆ ಇದ್ದ ವ್ಯವಸಾಯ ಸಮಾಜವನ್ನು ತೋರಿಸುತ್ತದೆ. ಇದರಲ್ಲಿ ನೀವು ಗುರುತಿಸಬಹುದಾದ ಮುಖ್ಯ ಚಟುವಟಿಕೆಗಳನ್ನು ಪಟ್ಟಿ ಮಾಡಿ."

AP SCERT



THINK ABOUT IT

- Both in the earlier picture of a rock shelter and in this one, men and women are given certain roles. While they may appear to be 'natural', they are not necessarily accurate and do not cover all situations. For instance, in a rock shelter, women may have helped prepare colours for painting the rock or may have done some of the painting. In both scenes, men may have done some of the cooking or may have helped take care of children.
- Keeping in mind that we have only limited information, think about such roles and situations, and discuss in class.

As communities grew, so did their social complexity. Leaders or **'chieftains'** were responsible for the well-being of the people, and everyone collectively worked towards the community's **welfare**. For example, there was no sense of individual ownership; the lands were collectively sowed and harvested.

Welfare: Health, prosperity and well-being.

AP SCERT



ಆಲೋಚಿಸಿ

- ಹಿಂದಿನ ಶಿಲಾಶ್ರಯದ (ಗುಹೆ) ಚಿತ್ರದಲ್ಲಿ, ಅದೇ ರೀತಿ ಈ ಚಿತ್ರದಲ್ಲಿ ಪುರುಷರು ಮತ್ತು ಮಹಿಳೆಯರಿಗೆ ಕೆಲವು ನಿರ್ದಿಷ್ಟ ಕೆಲಸಗಳನ್ನು ನೀಡಲಾಗಿದೆ. ಅವು ನಮಗೆ ಸಹಜವಾದವುಗಳು ಎಂದು ಕಂಡುಬಂದರು ಅವು ನಿಖರವಾದವುಗಳಾಗಿ ಆಗದಿರಬಹುದು. ಅವು ಎಲ್ಲಾ ಸಂದರ್ಭಗಳಿಗೆ ಅನ್ವಯಿಸುವುದಿಲ್ಲ. ಉದಾಃರಣೆಗೆ, ಒಂದು ಕಲ್ಲಿನ ಗುಹೆಯಲ್ಲಿ ಮಹಿಳೆಯರು ಬಣ್ಣಗಳ ತಯಾರಿಯಲ್ಲಿ ಅಥವಾ ವರ್ಣಚಿತ್ರಗಳನ್ನು ಬಿಡಿಸುವಲ್ಲಿ ಸಹಾಯ ಮಾಡಿರಬಹುದು. ಅದೇ ರೀತಿ ಈ ಎರಡೂ ದೃಶ್ಯಗಳಲ್ಲಿ ಪುರುಷರು ಅಡುಗೆ ಮಾಡುವಲ್ಲಿ ಅತವಾ ಮಕ್ಕಳ ಆರೈಕೆಯಲ್ಲಿ ಸಹಾಯ ಮಾಡಿರಬಹುದು.
- ನಮ್ಮ ಬಳಿ ಸೀಮಿತ ಮಾಹಿತಿ ಮಾತ್ರ ಇದೆ. ಎಂದು ನೆನಪಿನಲ್ಲಿಟ್ಟುಕೊಂಡು ಅಂತಹ ಪಾತ್ರಗಳು ಮತ್ತು ಸನ್ನಿವೇಶಗಳ ಬಗ್ಗೆ ಯೋಚಿಸಿ ಮತ್ತು ತರಗತಿಯಲ್ಲಿ ಚರ್ಚಿಸಿರಿ.

ಸಮುದಾಯಗಳು ಬೆಳೆದಂತೆಲ್ಲಾ ಅವುಗಳ ಸಾಮಾಜಿಕ ಸಂಕ್ಲಿಷ್ಟತೆಯೂ ಹೆಚ್ಚಾಯಿತು. ನಾಯಕರು ಅಥವಾ **ಮುಖ್ಯಸ್ಥರು** ಜನರ ಯೋಗಕ್ಷೇಮಕ್ಕೆ ಜವಾಬ್ದಾರರಾಗಿದ್ದರು ಮತ್ತು ಪ್ರತಿಯೊಬ್ಬರು ಸಮುದಾಯ **ಕಲ್ಯಾಣಕ್ಕಾಗಿ** ಒಟ್ಟಾಗಿ ಕೆಲಸ ಮಾಡುತ್ತಿದ್ದರು. ಉದಾಹರಣೆ ಆಗ ವೈಯಕ್ತಿಕ ಮಾಲೀಕತ್ವದ ಭಾವನೆ ಇರಲಿಲ್ಲ. ಭೂಮಿಯನ್ನು ಸಮೂಹಿಕವಾಗಿ ಬಿತ್ತನೆ ಮಾಡಿ ಮತ್ತು ಕೊಯ್ಲು ಮಾಡುತ್ತಿದ್ದರು.

ಕಲ್ಯಾಣ: ಆರೋಗ್ಯ, ಸಂವೃದ್ಧಿ ಸಂಪತ್ತು ಮತ್ತು ಸಂತೋಷದಿಂದ ಇರುವುದು.

AP SCERT

As time went by, **hamlets** grew into sizeable villages that exchanged goods - mostly food, clothing and tools. Slowly, networks of communication and exchange were established among those villages, and some of them grew into small towns. New technologies appeared - for example pottery, for making pots and other clay objects; and the use of metal (copper first, iron later), which helped make durable tools, objects of daily use and ornaments.

Hamlet: A small settlement or small village.

We will see in Chapter 2 semister 2 (The begging of Indian Civilisation) how this stage prepared for the emergence of what is called **'civilisation'**. For now, it is important to remember that this early progress of humanity had to face many challenges. At some critical times, humanity could have almost disappeared, as some earlier species did. We will never know those early humans to whose courage and persistence we owe our existence today.

AP SCERT



Before we move on ...

- We have explored some ways to learn more about our pasts. The concept of a timeline helps us understand the sequence of historical events at different times.
- There are different ways of measuring time: years, decades, centuries, millenniums.
- Sources of history are many; they help us reconstruct and interpret historical events.
- We have also had a brief look into the lives of early humans and how human societies grew more complex in time.

ಕಾಲಕ್ರಮೇಣ, ಕುಗ್ರಾಮಗಳು ದೊಡ್ಡ ಗ್ರಾಮಗಳಿಗಾಗಿ ಬದಲಾದವು. ಇವು ಮುಖ್ಯವಾಗಿ ಆಹಾರ, ಬಟ್ಟೆ ಮತ್ತು ಉಪಕರಣಗಳಂತಹ ವಸ್ತುಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಿದ್ದವು. ನಿಧಾನವಾಗಿ ಆ ಗ್ರಾಮಗಳ ನಡುವೆ ಮಾಹಿತಿ ವಿನಿಮಯ ಮತ್ತು ವಸ್ತು ವಿನಿಮಯದಂತಹ ಸಂಬಂಧಗಳು ಏರ್ಪಟ್ಟವು. ಅವುಗಳಲ್ಲಿ ಕೆಲವು ಸಣ್ಣ ಪಟ್ಟಣಗಳಾಗಿ ಅಭಿವೃದ್ಧಿ ಹೊಂದಿದವರು, ಹೊಸ ತಂತ್ರಜ್ಞಾನಗಳು ಬಳಕೆಗೆ ಬಂದವು. ಉದಾಹರಣೆಗೆ ಮಣ್ಣಿನ ಪಾತ್ರೆಗಳು ಮತ್ತು ಮಣ್ಣಿನ ವಸ್ತುಗಳನ್ನು ತಯಾರಿಸಲು ಮಡಿಕೆ ತಯಾರಿ ವಿಧಾನ ಕುಂಬಾರಿಕೆ, ಹಾಗೆಯೇ ಬಾಳಿಕೆ ಬರುವ ಉಪಕರಣಗಳು, ದಿನಬಳಕೆಯ ವಸ್ತುಗಳು ಮತ್ತು ಆಭರಣಗಳ ತಯಾರಿಕೆಯಲ್ಲಿ ಲೋಹಗಳು (ಮೊದಲು ತಾಮ್ರ ನಂತರ ಕಬ್ಬಿಣ) ಬಳಕೆ ಇದಕ್ಕೆ ಉದಾಹರಣೆಗಳಾಗಿವೆ.

ಕುಗ್ರಾಮ :
ಒಂದು ಸಣ್ಣ ವಸತಿ ಪ್ರದೇಶ ಅಥವಾ ಚಿಕ್ಕ ಗ್ರಾಮ

ನಾವು ಎರಡನೇ ಸೆಮಿಸ್ಟರ್‌ನ ಎರಡನೆ ಅಧ್ಯಾಯನದಲ್ಲಿ (ಭಾರತೀಯ ನಾಗರಿಕತೆಯ ಪ್ರಾರಂಭ) ಈ ಹಂತವು ನಾಗರಿಕತೆಯ ಉದಯಕ್ಕೆ ಹೇಗೆ ಸಿದ್ಧವಾಯಿತು ಎಂಬುದನ್ನು ನೋಡಲಿದ್ದೇವೆ. ಇಂದಿಗೂ ಮಾನವ ಜನಾಂಗದ ಈ ಆರಂಭಿಕ ಪ್ರಗತಿಯು ಅನೇಕ ಸವಾಲುಗಳನ್ನು ಎದುರಿಸಿದೆ ಎಂಬ ವಿಷಯವನ್ನು ನೆನಪಿಟ್ಟುಕೊಳ್ಳುವುದು ಬಹಳ ಮುಖ್ಯ. ಕೆಲವು ಕಠಿಣ ಪರಿಸ್ಥಿತಿಗಳಲ್ಲಿ ಮಾನವ ಜನಾಂಗ ಕೂಡ ಕೆಲವು ಪೂರ್ವಜನಾಂಗಗಳಂತೆ ಅಳಿದು ಹೋಗುವ ಪರಿಸ್ಥಿತಿಯನ್ನು ತಲುಪಿತ್ತು. ಯಾರ ಧೈರ್ಯ ಮತ್ತು ಹಿಡಿತದ ಪ್ರಯತ್ನದಿಂದಾಗಿ ನಾವು ಇಂದು ಅಸ್ತಿತ್ವದಲ್ಲಿದ್ದೇವೆಯೋ, ಆ ಕಾಲದ ಆರಂಭಿಕ ಮಾನವರ ಬಗ್ಗೆ ನಮಗೆ ಯಾವಾಗಲೂ ಪೂರ್ತಿಯಾಗಿ ತಿಳಿಯದೆ ಇರಬಹುದು.



ಮುಗಿಸುವ ಮುನ್ನ ...

→ ನಾವು ನಮ್ಮ ಇತಿಹಾಸವನ್ನು ತಿಳಿದುಕೊಳ್ಳಲು ಕೆಲವು ಮಾರ್ಗಗಳನ್ನು ಅನ್ವೇಷಿಸಿದ್ದೇವೆ. ಕಾಲಾನುಕ್ರಮ ರೇಖೆ ಎಂಬ ಪರಿಕಲ್ಪನೆಯು ವಿವಿಧ ಕಾಲಘಟ್ಟಗಳಲ್ಲಿ ನಡೆದ ಐತಿಹಾಸಿಕ ಘಟನೆಗಳ ಕ್ರಮವನ್ನು ಅರ್ಥ ಮಾಡಿಕೊಳ್ಳಲು ನಮಗೆ ಸಹಾಯ ಮಾಡುತ್ತದೆ.

→ ನಮಗೆ ಕಾಲವನ್ನು ಅಳೆಯಲು ವಿವಿಧ ಮಾರ್ಗಗಳಿವೆ, ವರ್ಷಗಳು, ದಶಕಗಳು, ಶತಮಾನಗಳು ಮತ್ತು ಸಹಸ್ರಮಾನಗಳು

→ ಇತಿಹಾಸಕ್ಕೆ ಅನೇಕ ಆಧಾರಗಳಿವೆ; ಅವು ನಮಗೆ ಐತಿಹಾಸಿಕ ಘಟನೆಗಳನ್ನು ಪುನರ್ನಿರ್ಮಿಸಲು ಮತ್ತು ವಿವರಿಸಲು ಸಹಾಯ ಮಾಡುತ್ತವೆ.

→ ಆರಂಭಿಕ ಮಾನವರ ಜೀವನದ ಬಗ್ಗೆ ಮತ್ತು ಕಾಲಕ್ರಮೇಣ ಮಾನವ ಸಮಾಜಗಳು ಹೇಗೆ ಸಂಕೀರ್ಣವಾಗಿ ಬದಲಾದವು ಎಂಬುದನ್ನು ಕೂಡ ನಾವು ಸಂಕ್ಷಿಪ್ತವಾಗಿ ಪರಿಶೀಲಿಸಿದ್ದೇವೆ.

AP SCERT

Questions, activities and projects

1. Describe the ways early humans communicated with each other before written language was developed?
2. Can we compare historians to detectives? Give reasons for your answers.
3. A few exercises with dates:
   i) Place these dates chronologically on the timeline: 323 CE, 323 BCE, 100 CE, 100 BCE, 1900 BCE, 1090 CE, 2024 CE.)
   ii) If King Chandragupta was born in 320 CE, which century did he belong to? And how many years was that after the Buddha's birth?
   iii) Rani of Jhansi was born in 1828 C.E. Which century did she belong to? How many years was that before India's Independence?
   iv) Turn '12,000 years ago' into a date.
4. Invite to your school an archaeologist or a historian and ask them to speak on the history of your region and why it's important to know it.
5. As a project, write the history of your family or village if you live in one, using sources of history at your disposal. Ask your teacher to guide you.
6. Plan a visit to a nearby museum: the visit should be prepared with some prior research on the kind of exhibits the museum holds. Keep notes during the visit. Write a brief report afterwards, highlighting what was unexpected / interesting / fun about the visit and the exhibits.

Write down the kind of exbits in the museum



AP SCERT

ಪ್ರಶ್ನೆಗಳು, ಚಟುವಟಿಕೆಗಳು ಮತ್ತು ಯೋಜನಾಕಾರ್ಯಗಳು

1. ಲಿಖಿತ ಭಾಷೆ ಅಭಿವೃದ್ಧಿ ಹೊಂದುವ ಮೊದಲು ಪ್ರಾಚೀನ ಮಾನವರು ಒಬ್ಬರಿಗೊಬ್ಬರು ಹೇಗೆ ಸಂವಹನ ನಡೆಸುತ್ತಿದ್ದರು ಅಥವಾ ಮಾಹಿತಿಯನ್ನು ಹೇಗೆ ವಿನಿಮಯ ಮಾಡಿಕೊಳ್ಳುತ್ತಿದರು ಎಂಬುದನ್ನು ವಿವರಿಸಿರಿ.

2. ಇತಿಹಾಸಕಾರನ್ನು ಅಪರಾಧ ತನಿಖಾಧಿಕಾರಿಗಳಿಗೆ ಹೋಲಿಸಬಹುದೆ? ನಿಮ್ಮ ಉತ್ತರಗಳಿಗೆ ಕಾರಣಗಳನ್ನು ನೀಡಿ.

3. ದಿನಾಂಕಗಳೊಂದಿಗೆ ಕೆಲವು ಅಭ್ಯಾಸಗಳು:

   i) ಕೆಳಗಿನ ದಿನಾಂಕಗಳನ್ನು ಕಾಲಾನುಕ್ರಮದಲ್ಲಿ ಕಾಲಾನುಕ್ರಮ ರೇಖೆಯ ಮೇಲೆ ತೋರಿಸಿರಿ: 323 **CE**, 323 **BCE**, 100 **CE**, 100 **BCE**, 1900 **BCE**, 1090 **CE**, 2024 **CE**.)

   ii) ಒಂದುವೇಳೆ ಚಂದ್ರಗುಪ್ತನು ಸಾ.ಶ. 320 ರಲ್ಲಿ ಜನಿಸಿದ್ದರೆ, ಆತನು ಯಾವ ಶತಮಾನಕ್ಕೆ ಸೇರಿದವನು? ಇದು ಬುದ್ಧನ ಜನನದ ನಂತರ ಎಷ್ಟು ವರ್ಷಗಳ ಕಾಲಾವಧಿಯ ನಂತರ ಆಗಿರಬಹುದು?

   iii) ಝಾನ್ಸಿರಾಣಿ ಸಾ.ಶ. 1828ರಲ್ಲಿ ಜನಿಸಿದಳು. ಆಕೆಯು ಯಾವ ಶತಮಾನಕ್ಕೆ ಸೇರಿದವಳು? ಭಾರತಕ್ಕೆ ಸ್ವಾತಂತ್ರ ಬರುವ ಎಷ್ಟು ವರ್ಷಗಳ ಮೊದಲು ಆಕೆಯು ಜನಿಸಿದ್ದಳು?

   iv) '2,000 ವರ್ಷಗಳ ಹಿಂದೆ ಎಂಬುದನ್ನು ದಿನಾಂಕವಾಗಿ ಬದಲಾಯಿಸಿ ಬರೆಯಿರಿ.

4. ಪುರಾತತ್ವ ಶಾಸ್ತ್ರಜ್ಞ ಅಥವಾ ಇತಿಹಾಸಕಾರರನ್ನು ನಿಮ್ಮ ಶಾಲೆಗೆ ಆಹ್ವಾನಿಸಿ ನಿಮ್ಮ ಪ್ರದೇಶದ ಇತಿಹಾಸ ಮತ್ತು ಅದರ ಬಗ್ಗೆ ತಿಳಿದುಕೊಳ್ಳುವುದು ಏಕೆ ಮುಖ್ಯ ಎಂಬುದರ ಕುರಿತು ಮಾತನಾಡುವಂತೆ ಅವರನ್ನು ಕೋರಿರಿ.

5. ಯೋಜನಾ ಕಾರ್ಯದ ಭಾಗವಾಗಿ, ನಿಮ್ಮ ಬಳಿ ಇರುವ ಐತಿಹಾಸಿಕ ಆಧಾರಗಳನ್ನು ಬಳಸಿ ನಿಮ್ಮ ಕುಟುಂಬ ಅಥವಾ ನೀವು ವಾಸಿಸುವ ಗ್ರಾಮದ ಇತಿಹಾಸವನ್ನು ಬರೆಯಿರಿ. ನಿಮಗೆ ಮಾರ್ಗದರ್ಶನ ನೀಡುವಂತೆ ನಿಮ್ಮ ಶಿಕ್ಷಕರನ್ನು ಕೇಳಿ.

6. ಹತ್ತಿರದ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಲು ಯೋಜನೆಯನ್ನು ಸಿದ್ಧಪಡಿಸಿ ಅಲ್ಲಿರುವ ಪ್ರದರ್ಶನ ವಸ್ತುಗಳ ಬಗ್ಗೆ ಮುಂಚಿತವಾಗಿ ಸ್ವಲ್ಪ ಸಂಶೋಧನೆ ನಡೆಸಿ ಭೇಟಿಗೆ ಸಿದ್ಧರಾಗಿ. ಭೇಟಿಯ ಸಮಯದಲ್ಲಿ ಮುಖ್ಯ ಅಂಶಗಳನ್ನು ದಾಖಲಿಸಿಕೊಳ್ಳಿ. ನಂತರ ಅಲ್ಲಿ ನೋಡಿದ ಆಸಕ್ತಿದಾಯಕ ಅಥವಾ ಅನಿರೀಕ್ಷಿತ ವಿಷಯಗಳ ಬಗ್ಗೆ ಸಂಕ್ಷಿಪ್ತ ವರದಿಯನ್ನು ಬರೆಯಿರಿ.

ವಸ್ತು ಸಂಗ್ರಹಾಲಯದಲ್ಲಿ ನೀವು ಗಮನಿಸಿದ ವಸ್ತುಗಳನ್ನು ಇಲ್ಲಿ ದಾಖಲಿಸಿ.



AP SCERT

CHAPTER

4

INDIA, THAT IS BHARAT

Learning Outcomes

The student will be able to-

- Identify the names of places of inhabitants mentioned in ancient texts and inhabitants. CG -1
- Explain how the foreign visitors and invaders named the country. CG -1
- Understand the history behind the names Bharata and Jambudvipa. CG -1
- Know that India had many names like Sindhu, Hindustan, Bharat, Jambudvipa in the course of its history. CG -1

"In India at a very early time the spiritual and cultural unity was made complete and became the very stuff of the life of all this great surge of humanity between the Himalayas and the two seas." *- Sri Aurobindo*



Fig. 4.1 A scene from rural India bout 2,300 years ago (north gate of teh Great Sanchi Stupa)

The Big Questions ?

1. *How do we define India?*
2. *What were the ancient names for India?*

© SCERT

ಅಧ್ಯಾಯ

4

ಇಂಡಿಯ ಎಂದರೆ ಭಾರತದೇಶ

M3C2V1

ಕಲಿಕೆಯ ಫಲಗಳು

ವಿದ್ಯಾರ್ಥಿಗಳು ಈ ಕೆಳಗಿನವುಗಳನ್ನು ಮಾಡುತ್ತಾರೆ:

- ಪ್ರಾಚೀನ ಗ್ರಂಥಗಳು ಮತ್ತು ವಾಸಸ್ಥಾನಗಳಲ್ಲಿ ಪ್ರಸ್ತಾಪಿಸಲಾದ ವಾಸಸ್ಥಳಗಳ ಹೆಸರುಗಳನ್ನು ಗುರುತಿಸುತ್ತಾರೆ CG -1
- ವಿದೇಶಿ ಪ್ರವಾಸಿಗರು ಹಾಗೂ ಆಕ್ರಮಣಕಾರರು ನಮ್ಮ ದೇಶಕ್ಕೆ ಹೇಗೆ ಹೆಸರುಗಳನ್ನು ಇಟ್ಟರೆಂಬುದನ್ನು ವಿವರಿಸುವರು CG -1
- ಭಾರತದೇಶ ಹಾಗೂ ಜಂಬೂದ್ವೀಪದ ಹೆಸರಿನ ಹಿಂದಿರುವ ಇತಿಹಾಸವನ್ನು ಅರ್ಥಮಾಡಿಕೊಳ್ಳುವರು.CG -1
- ಭಾರತ ದೇಶದ ಅಂದಿನ ಇತಿಹಾಸದಲ್ಲಿ ಸಿಂಧೂ, ಹಿಂದುಸ್ಥಾನ, ಭಾರತ, ಜಂಬೂದ್ವೀಪದಂತಹ ಅನೇಕ ಹೆಸರುಗಳು ಇರುವುವು ಎಂಬುದನ್ನು ತಿಳಿದುಕೊಳ್ಳುವರು.CG -1

"ಭಾರತದೇಶದಲ್ಲಿ ಆದಿಕಾಲದಿಂದಲೂ ಆಧ್ಯಾತ್ಮಿಕ, ಸಾಂಸ್ಕೃತಿಕ ಐಕ್ಯತೆ ಸಂಪೂರ್ಣವಾಗಿ ಉಂಟಾಗಿದೆ. ಹಿಮಾಲಯಗಳು, ಎರಡು ಸಮುದ್ರಗಳ ನಡುವೆ ವಿಸ್ತರಿಸಿರುವ ಈ ಭೂಭಾಗವು ಮಹೋನ್ನತ ಮಾನವನ ಜೀವನ ಪ್ರವಾಹದಲ್ಲಿ ಒಂದು ಅವಿಭಾಜ್ಯ ಅಂಗವಾಗಿ ಬದಲಾಗಿದೆ"

— ಶ್ರೀ ಅರವಿಂದ ಘೋಷ್




ಚಿತ್ರ 4.1: ಸುಮಾರು 2,300 ವರ್ಷಗಳ ಹಿಂದಿನ ಪ್ರಾಚೀನ ಭಾರತದೇಶದ ದೃಶ್ಯ [ಮಹಾ ಸಾಂಚಿ ಸ್ತೂಪದ ಉತ್ತರದ ಬಾಗಿಲು]

ಪ್ರಮುಖ ಪ್ರಶ್ನೆಗಳು ?


1. ನಮ್ಮ ಭಾರತ ದೇಶವನ್ನು ಹೇಗೆ ವ್ಯಾಖ್ಯಾನಿಸಲಾಗಿದೆ?
2. ಭಾರತ ದೇಶಕ್ಕೆ ಇರುವ ಕೆಲವು ಪ್ರಾಚೀನ ಹೆಸರುಗಳು ಯಾವುವು?

© NCERT



AP SCERT

Fig.4.2 A physical map of the Indian sub continent, with some of its rivers.



AP SCERT

ಚಿತ್ರ 4.2 ಭಾರತದ ಉಪಖಂಡದಲ್ಲಿ ಕೆಲವು ನದಿಗಳಿಂದ ಕೂಡಿದ ಭೌಗೋಳಿಕ ನಕ್ಷೆ

Today, the India we know is a modern nation, with defined borders, defined states and a known population. However, it was very different 500 years ago, 2,000 years ago or even 5,000 years ago. This region of the world, which we often call the 'Indian Subcontinent', has had many different names and shifting boundaries. We can learn about India's past and evolution from many different sources. Let us explore.



THINK ABOUT IT



Consider the physical map of the Indian Subcontinentat the start of the chapter. What are its natural boundaries that you can make out?

In the course of history, India has been called by many names - both by its **inhabitants** and by visitors from outside. These names come to us from ancient texts, accounts of travellers and pilgrims, and inscriptions.

How Indians Named India

The Rig Veda is India's most ancient text; as we will see in Chapter 5, (Indias, cultural roots) it is several thousand years old. It gives the northwest region of the Subcontinent the name 'Sapta Sindhava', that is, the 'land of the seven rivers'. The word 'Sindhava' comes from 'Sindhu', which refers to the Indus River, or at times to a river in general.




Fig.4.3 The north west region of the Indian sub-continent

Inhabitants: People who live in a particular place.

© NCERT

ಈಗ ನಮಗೆ ಕಂಡುಬರುವ ಭಾರತದೇಶವು ಒಂದು ಆಧುನಿಕ ದೇಶವಾಗಿದೆ. ನಿರ್ದಿಷ್ಟ ಗಡಿರೇಖೆಗಳು, ರಾಜ್ಯಗಳು ಹಾಗೂ ನಿರ್ದಿಷ್ಟವಾದ ಜನಸಂಖ್ಯೆಯೊಂದಿಗೆ ಇದು ಸಮಗ್ರ ದೇಶವಾಗಿದೆ. ಆದರೆ 500 ವರ್ಷಗಳ ಹಿಂದೆ, 2,000 ವರ್ಷಗಳ ಹಿಂದೆ ಅಥವಾ 5,000 ವರ್ಷಗಳ ಹಿಂದೆ ಸಂಪೂರ್ಣವಾಗಿ ಭಿನ್ನವಾಗಿಯೇ ಇತ್ತು. ಪ್ರಪಂಚದಲ್ಲಿ ಈ ಪ್ರಾಂತ್ಯವನ್ನು ನಾವು ಹಲವು ಬಾರಿ 'ಭಾರತ ಉಪಖಂಡ' ಎಂದೇ ಹೇಳುತ್ತೇವೆ. ಇದಕ್ಕೆ ಅನೇಕ ವಿಷಯಗಳು ಇದ್ದವು. ಹಾಗೆಯೇ ಗಡಿರೇಖೆಗಳು ಎಲ್ಲಿಯೂ ಕಾಲಕ್ಕೆ ತಕ್ಕಂತೆ ಬದಲಾಗುತ್ತಾ ಹೋದವು. ಭಾರತದೇಶವು ಕಳೆದ ಅಭಿವೃದ್ಧಿಯನ್ನು ಕುರಿತು ನಾವು ವಿವಿಧ ಆಧಾರ, ಪುರಾವೆಗಳ ಮೂಲಕ ತಿಳಿದುಕೊಳ್ಳಬಹುದು. ಈಗ ಆ ವಿಷಯವನ್ನು ಪರಿಗಣಿಸೋಣ.



ಆಲೋಚಿಸಿರಿ




ಈ ಅಧ್ಯಾಯದ ಪ್ರಾರಂಭದಲ್ಲಿ ಇರುವ ಭಾರತ ಉಪಖಂಡವು ಹೊಂದಿರುವ ಭೌತಿಕ ನಕ್ಷೆಯನ್ನು ಪರಿಶೀಲಿಸಿರಿ. ನಿಮಗೆ ಕಂಡುಬರುವ ನೈಸರ್ಗಿಕ ಗಡಿ ಮತ್ತು ಪ್ರಾಂತ್ಯಗಳು ಯಾವುವು?

ಇತಿಹಾಸ ಕ್ರಮದಲ್ಲಿ, ಭಾರತ ದೇಶದ ನಿವಾಸಿಗಳು ಹಾಗೂ ವಿದೇಶಗಳಿಂದ ಆಗಮಿಸಿದ ಪ್ರವಾಸಿ, ಯಾತ್ರಿಕರು ಭಾರತ ದೇಶವನ್ನು ಹಲವು ಹೆಸರುಗಳಿಂದ ಕರೆದರು. ಈ ಹೆಸರುಗಳು ಪ್ರಾಚೀನ ಗ್ರಂಥಗಳು, ಯಾತ್ರಿಕರು, ಅವರ ಕಥನಗಳು, ಶಾಸನಗಳಂತಹ ಅನೇಕ ಸಂಪನ್ಮೂಲಗಳ ಮೂಲಕ ನಮಗೆ ತಿಳಿಯಪಡಿಸಿವೆ.

ಭಾರತ ದೇಶಕ್ಕೆ ಭಾರತೀಯರು ಇಟ್ಟ ಹೆಸರು

ಋಗ್ವೇದವು ಭಾರತ ದೇಶದಲ್ಲಿ ಅತ್ಯಂತ ಪ್ರಾಚೀನವಾದ ಗ್ರಂಥ. ನೀವು 5ನೇ ಅಧ್ಯಾಯದಲ್ಲಿ [ಭಾರತ ದೇಶದ ಒಂದು ಸಾಂಸ್ಕೃತಿಕ ಮೂಲಗಳು] ನೋಡಬಹುದಾಗಿದೆ. ಇದು ಸಾವಿರಾರು ವರ್ಷಗಳಷ್ಟು ಪುರಾತನವಾದದ್ದು. ಈ ಗ್ರಂಥವು ಉಪಖಂಡದ ವಾಯುವ್ಯ ಪ್ರಾಂತ್ಯವನ್ನು 'ಸಪ್ತ ಸಿಂಧವ' ಎಂದು ಕರೆದಿದೆ. ಅಂದರೆ 'ಏಳು ನದಿಗಳ ಬೀಡು' ಎಂಬ ಅರ್ಥವನ್ನು ಒಳಗೊಂಡಿದೆ. 'ಸಿಂಧವ' ಎಂಬ ಪದವು 'ಸಿಂಧು' ನಿಂದ ಉಗಮವಾಗಿದೆ. 'ಸಿಂಧು' ಎಂಬುದು ಇಂದು ನದಿಯನ್ನು ಸೂಚಿಸಲು ಅಥವಾ ಕೆಲವು ಸಂದರ್ಭಗಳಲ್ಲಿ ಯಾವ ನದಿಯನ್ನಾದರೂ ಉದ್ದೇಶಿಸಲು ಉಪಯೋಗಿಸಲಾಗಿದೆ ಎನ್ನಬಹುದು.



ಚಿತ್ರ 4.3 : ಭಾರತ ಉಪಖಂಡದ ವಾಯುವ್ಯ ಪ್ರಾಂತ್ಯ

ನಿವಾಸಿಗಳು: ಒಂದು ಪ್ರದೇಶದಲ್ಲಿ ವಾಸಿಸುವಂತಹ ಪ್ರಜೆಗಳು.

© NCERT

Moving on in time, we see names for other parts of India appear in the literature. The Mahabharata is one of India's most famous texts (we read about it in the theme 'Our Cultural Heritage and Knowledge Traditions'). Interestingly, it lists many regions, such as Kashmera (more or less today's Kashmir), Kurukehetra (parts of Haryana today), Vanga (parts of Bengal), Pragjyotisha (roughly today's Assam), Kaccha (today's Kutch), Kerala (more or less today's Kerala), and so on.



LET'S EXPLORE



Do you recognise the names of any regions given in the map (Fig. 4.4) Page 108. List the ones that you have heard.

But when do we come across a name for the entire Indian Subcontinent? Because ancient Indian texts are difficult to date, this is not an easy question to answer. The Mahabharata uses the terms 'Bhartavarsha' and 'Jambudveipa', and scholars generally agree that this long poem was written from a few centuries BCE onward.

The first term, **'Bharatavarsha'**, clearly extends to the entire Subcontinent, and the text includes the names of numerous rivers and peoples. 'Bharatavarsha' means 'the country of the Bharatas'. 'Bharata' is a name that first appears in the Rig Veda, where it refers to one of the main Vedic groups of people. In later literature, several kings named 'Bharata' are mentioned.

The second term, **'Jambudvepa'**, means 'the island of the fruit of the jamun tree'. This is indeed a common tree native to India, also called 'jambul tree', 'Malabar plum tree', etc. 'Jambudvepa' came to mean the Indian Subcontinent.

In fact, we get a good clue from an Indian emperor - his name is Ashoka and we will meet him later; for now, we can take his date to be about 250 BCE. As we will see, he left us many inscriptions. In one of them, he used the same name **'Jambudvepa'** to describe the whole of India, which at the time included what is today Bangladesh, Pakistan, as well as parts of Afghanistan.

AP SCERT

ಕಾಲಾನುಕ್ರಮದಲ್ಲಿ ಮುಂದಕ್ಕೆ ಸಾಗುತ್ತಿರುವಾಗ, ಭಾರತ ದೇಶದಲ್ಲಿರುವ ಇತರೆ ಪ್ರಾಂತ್ಯಗಳ ಹೆಸರುಗಳು ಸಾಹಿತ್ಯದಲ್ಲಿ ಕಂಡುಬಂದಿವೆ. ಮಹಾಭಾರತವು ಭಾರತ ದೇಶದ ಅತ್ಯಂತ ಪ್ರಸಿದ್ಧ ಗ್ರಂಥಗಳಲ್ಲಿ ಒಂದಾಗಿದೆ. (ನಾವು 'ನಮ್ಮ ಸಾಂಸ್ಕೃತಿಕ ಪರಂಪರೆ ಮತ್ತು ಜ್ಞಾನ ಪರಂಪರೆಗಳು' ಎಂಬ ವಿಷಯದಲ್ಲಿ ಇದನ್ನು ಕುರಿತು ತಿಳಿದುಕೊಂಡಿದ್ದೇವೆ). ಆಸಕ್ತಿಕರವಾದ ವಿಷಯವೇನೆಂದರೆ, ಇದರಲ್ಲಿ ಕಾಶ್ಮೀರ (ಇಂದಿನ ಕಾಶ್ಮೀರ ಪ್ರಾಂತ್ಯ), ಕುರುಕ್ಷೇತ್ರ (ಇಂದಿನ ಹರಿಯಾಣ ಪ್ರಾಂತ್ಯ), ವಂಗ (ಇಂದಿನ ಬಂಗಾಳ ಪ್ರಾಂತ್ಯ), ಪ್ರಾಗ್ಜ್ಯೋತಿಷ (ಇಂದಿನ ಅಸ್ಸಾಂ ಪ್ರಾಂತ್ಯ), ಕಚ್ಛ (ಇಂದಿನ ಕಚ್ಛ ಪ್ರಾಂತ್ಯ), ಕೇರಳ (ಸುಮಾರು ಇಂದಿನ ಕೇರಳ ಪ್ರಾಂತ್ಯ) ಹೀಗೆ ಅನೇಕ ಪ್ರಾಂತ್ಯಗಳ ಹೆಸರುಗಳನ್ನು ಒಳಗೊಂಡಿದೆ.

ಅನ್ವೇಷಿಸೋಣ

(ಚಿತ್ರ 4.4) 109 ನೆಯ ಪುಟದಲ್ಲಿ ನೀಡಿದ ಪ್ರಾಂತ್ಯಗಳ ಹೆಸರುಗಳಲ್ಲಿ ಯಾವುದನ್ನಾದರೂ ನಕ್ಷೆಯಲ್ಲಿ ಗುರುತಿಸಬಲ್ಲಿರಾ? ನೀವು ಕೇಳದ ಪ್ರಾಂತ್ಯದ ಬಗ್ಗೆ ಹೆಸರುಗಳ ಪಟ್ಟಿಯನ್ನು ತಯಾರಿಸಿ.


ಆದರೆ ಒಟ್ಟಾರೆಯಾಗಿ ಭಾರತ ಉಪಖಂಡಕ್ಕೆ ಒಂದು ಹೆಸರು ಇರುವುದು ನಮಗೆ ಯಾವಾಗ ಕಂಡುಬರುತ್ತದೆ? ಈ ಪ್ರಶ್ನೆಗೆ ಉತ್ತರವನ್ನು ಹೇಳುವುದು ಸುಲಭ ಸಾಧ್ಯವಲ್ಲ. ಏಕೆಂದರೆ ಭಾರತೀಯ ಪ್ರಾಚೀನ ಗ್ರಂಥಗಳಿಗೆ ಕಾಲ ನಿರ್ಧರಿಸುವುದು ಕಷ್ಟ. ಮಹಾಭಾರತದಲ್ಲಿ 'ಭರತವರ್ಷ' ಹಾಗೂ 'ಜಂಬೂದ್ವೀಪ' ಎಂಬ ಪದಗಳನ್ನು ಬಳಸುತ್ತದೆ. ಈ ಬೃಹತ್ ಕಾವ್ಯವು ಪೂರ್ವ ನಿರ್ಧಾರಿತ ಶಕ ವರ್ಷ (ಪೂ.ಸಾ.ಶ – BCE) ಕೆಲವು ಶತಮಾನಗಳಿಂದಲೂ ರಚಿಸುತ್ತಾ ಬಂದಿದೆ ಎಂದು ಪಂಡಿತರು ಸಾಮಾನ್ಯವಾಗಿ ಅಂಗೀಕರಿಸುತ್ತಾರೆ.

'ಭರತವರ್ಷ' ಎಂಬ ಮೊದಲ ಪದವು ಸ್ಪಷ್ಟವಾಗಿ ಸಮಗ್ರ ಉಪಖಂಡವನ್ನು ಸೂಚಿಸುತ್ತದೆ. ಈ ಗ್ರಂಥದಲ್ಲಿ ಅನೇಕ ನದಿಗಳು, ಪ್ರಜೆಗಳ ಹೆಸರುಗಳಿವೆ. 'ಭರತವರ್ಷ' ಎಂದರೆ 'ಭರತರ ದೇಶ' ಎಂಬ ಅರ್ಥವಿದೆ. 'ಭರತ' ಎಂಬ ಹೆಸರು ಪ್ರಥಮ ಬಾರಿಗೆ ಋಗ್ವೇದದಲ್ಲಿ ಕಂಡುಬರುತ್ತದೆ. ಇಲ್ಲಿ ಅದು ಪ್ರಧಾನ ವೇದಜನ ಸಮುದಾಯವನ್ನು ಸೂಚಿಸುತ್ತದೆ. ಅನಂತರದ ಸಾಹಿತ್ಯಗಳಲ್ಲಿ 'ಭರತ' ಎಂಬ ಹೆಸರುಳ್ಳ ಹಲವು ರಾಜರುಗಳನ್ನು ಕುರಿತು ಹೇಳಲಾಗಿದೆ.

ಎರಡನೆಯ ಪದವು 'ಜಂಬೂದ್ವೀಪ' ಎಂದರೆ 'ನೇರಳೆ ವೃಕ್ಷಗಳನ್ನೊಳಗೊಂಡ ದ್ವೀಪ' ಎಂಬ ಅರ್ಥ. ನೇರಳೆ ಹಣ್ಣಿನ ಮರಗಳು ಭಾರತ ದೇಶಕ್ಕೆ ಸೇರಿದ ಸಾಧಾರಣ ವೃಕ್ಷ. ಇದನ್ನು 'ಜಂಬಲ ವೃಕ್ಷ' ಎಂದೂ, 'ಮಲಬಾರ್ ಪ್ಲಮ್ ವೃಕ್ಷ' ಎಂದೂ ಸಹ ಕರೆಯುತ್ತಾರೆ. 'ಜಂಬೂದ್ವೀಪ' ಎಂಬ ಪದವು ನಂತರದಲ್ಲಿ ಭಾರತ ಉಪಖಂಡವನ್ನು ಸೂಚಿಸುವದಾಗಿ ಬದಲಾಯಿತು.


ವಾಸ್ತವಕ್ಕೆ ಇದಕ್ಕೆ ಉತ್ತಮ ಆಧಾರವೆಂದರೆ ಭರತ ಚಕ್ರವರ್ತಿಯಿಂದ ಲಭಿಸುತ್ತದೆ. ಆತನ ಹೆಸರು ಅಶೋಕ. ನಾವು ಆತನ ಕುರಿತು ನಂತರದಲ್ಲಿ ಸವಿಸ್ತಾರವಾಗಿ ತಿಳಿದುಕೊಳ್ಳೋಣ. ಪ್ರಸ್ತುತವಾಗಿ ಆತನ ಕಾಲವನ್ನು ಸುಮಾರು 250 BCE ಯಾಗಿ ತೆಗೆದುಕೊಳ್ಳಬಹುದು. ಆತನು ಅನೇಕ ಶಿಲಾಶಾಸನಗಳನ್ನು ಬರೆಯಿಸಿದನು. ಇವುಗಳಲ್ಲಿನ ಒಂದು ಶಾಸನದಲ್ಲಿ ಆತನು ಒಮ್ಮೆ ಸಮಗ್ರ ಭಾರತವನ್ನು ಸೂಚಿಸಲು ಇದೇ ಪದವಾದ 'ಜಂಬೂದ್ವೀಪ' ಎಂಬ ಪದವನ್ನು ಉಪಯೋಗಿಸಿದ್ದಾನೆ. ಆತನ ಕಾಲದಲ್ಲಿ ಭಾರತವೆಂದರೆ ಇಂದಿನ ಬಾಂಗ್ಲಾದೇಶ, ಪಾಕಿಸ್ತಾನ, ಅಫಘಾನಿಸ್ತಾನಗಳ ಕೆಲವು ಭಾಗಗಳನ್ನೊಳಗೊಂಡ ವಿಸ್ತೃತ ಭೂಭಾಗವಾಗಿದೆ.

AP SCERT



AP SCERT

Fig. 4.4. Map of a few regions listed in the Mahabharata. (Many of them are also mentioned in the text as kingdoms.) You do not need to remember those regions, but notice how they cover the entire geography of the Subcontinent.



APSCERT

ಚಿತ್ರ 4.4 ಮಹಾಭಾರತದಲ್ಲಿ ಉಲ್ಲೇಖಿಸಿದ ಕೆಲವು ಪ್ರಾಂತ್ಯಗಳ ನಕ್ಷೆ (ಇವುಗಳಲ್ಲಿ ಬಹುತೇಕ ರಾಜ್ಯಗಳಾಗಿಯೂ ಸಹ ಪ್ರಸ್ತಾಪಿಸಲ್ಪಟ್ಟಿವೆ) ನೀವು ಈ ಪ್ರಾಂತ್ಯಗಳನ್ನು ಗುರುತಿಸಿಕೊಳ್ಳುವ ಅವಶ್ಯಕತೆಯಿಲ್ಲ. ಆದರೆ ಇವು ಉಪಖಂಡದ ಭೌಗೋಳಿಕ ಪ್ರಾಂತ್ಯಗಳನ್ನು ಹೇಗೆ ತಿಳಿಯಪಡಿಸುತ್ತವೆಯೋ ಎಂಬುದನ್ನು ಗಮನಿಸಿ.

A few centuries later, **'Bharata'** became the name generally used for the Indian Subcontinent. For instance, in an ancient text called the **Viishnu Purana**, we read:

uttaram yat samudrasya himâdreúcaiva
dakshinam varcham tad bhâratam nâma ...
"The country that lies north of the ocean and south of the snowy mountains is called Bhârata."

This name, 'Bharata' remains in use even today. In north India, it is generally written as 'Bharat', while in south India, it is often **'Bharatam'**.



THINK ABOUT IT



Have you identified the 'snowy mountains'? Do you think this brief description of Bharata is correct?

It is interesting to note that different parts of the country adopted a similar definition for India. For instance, a poem of ancient Tamil literature, from about 2,000 years ago, praises a king whose name is known "from [Cape] Kumari in the south, from the great mountain in the north, from the oceans on the east and on the west..." You can now recognise 'the great mountain in the north', and it should not be difficult to identify 'Cape Kumari'. It looks like ancient Indians knew their geography well!

AP SCERT

ಕೆಲವು ಶತಮಾನಗಳು ಕಳೆದ ನಂತರ, 'ಭಾರತ' ಎಂಬ ಹೆಸರು ಉಪಖಂಡವನ್ನು ಸೂಚಿಸುವುದಕ್ಕೆ ವಿಸ್ತೃತವಾಗಿ ಉಪಯೋಗಿಸಲ್ಪಟ್ಟಿದೆ. ಉದಾಹರಣೆಗೆ, ವಿಷ್ಣುಪುರಾಣವೆಂಬ ಪ್ರಾಚೀನ ಗ್ರಂಥದಲ್ಲಿ ಹೀಗೆ ಇದೆ.

" ಉತ್ತರಂ ಯತ್ ಸಮುದ್ರಸ್ಯ ಹಿಮಾದ್ರೇಶ್ಚೈವ

ದಕ್ಷಿಣಂ ವರ್ಷ ತತ್ ಭಾರತಂ ನಮ...

ಸಮುದ್ರಕ್ಕೆ ಉತ್ತರವಾಗಿ, ಹಿಮಾಲಯಗಳಿಗೆ ದಕ್ಷಿಣವಾಗಿ

ಇರುವ ಈ ದೇಶವನ್ನು ಭಾರತದೇಶವೆಂದು ಕರೆಯುವರು"

ಭಾರತ ದೇಶವೆಂಬ ಈ ಹೆಸರು ಈಗಾಗಲೇ ಬಳಕೆಯಲ್ಲಿದೆ, ರೂಢಿಯಲ್ಲಿದೆ. ಉತ್ತರ ಭಾರತ ದೇಶದಲ್ಲಿ ಇದನ್ನು ಸಾಧಾರಣವಾಗಿ 'ಭಾರತ' ಎಂದು ಬರೆಯುವುದು ಹೆಚ್ಚಾಗಿ ಕಂಡುಬರುತ್ತದೆ.



ಆಲೋಚಿಸಿರಿ



ನೀವು ಈ "ಮಂಜು ಪರ್ವತಗಳು" ಯಾವುವೆಂದು ಗುರುತಿಸುವಿರಾ? ಭಾರತವನ್ನು ಕುರಿತು ನೀಡಿರುವ ಈ ಸಂಕ್ಷಿಪ್ತವಾದ ವಿವರಣೆ ಸರಿಯಾದುದೆಂದು ನೀವು ಅಂದುಕೊಳ್ಳುತ್ತೀರಾ?

ದೇಶದಲ್ಲಿ ವಿವಿಧ ಪ್ರಾಂತ್ಯಗಳು ಭಾರತ ದೇಶಕ್ಕೆ ಇಂತಹ ವ್ಯಾಖ್ಯಾನಗಳನ್ನು ಸ್ವೀಕರಿಸುವುದು ತುಂಬಾ ಕುತೂಹಲಕಾರಿಯೆನಿಸುತ್ತದೆ. ಉದಾಹರಣೆಗೆ ಸುಮಾರು 2,000 ವರ್ಷಗಳ ಹಿಂದೆ ಹಿಂದಿನ ತಮಿಳು ಸಾಹಿತ್ಯದಲ್ಲಿ ಒಂದು ಕವಿತೆ "ದಕ್ಷಿಣದಲ್ಲಿ ಕನ್ಯಾಕುಮಾರಿಯಿಂದ, ಉತ್ತರಕ್ಕೆ ಹಿಮವತ್ ಪರ್ವತದಿಂದ, ಪೂರ್ವ ಹಾಗೂ ಪಶ್ಚಿಮಕ್ಕೆ ಸಮುದ್ರಗಳವರೆಗೂ" ಪ್ರಸಿದ್ಧನಾಗಿದ್ದ ಒಬ್ಬ ರಾಜನನ್ನು ಕೀರ್ತಿಸುತ್ತದೆ. ಈಗ ನೀವು "ಉತ್ತರದಲ್ಲಿರುವ ಆ ಹಿಮವತ್ ಪರ್ವತ" ಯಾವುದೋ ಅದನ್ನು ಗುರುತಿಸಬಹುದು. ಹಾಗೆಯೇ "ಕನ್ಯಾಕುಮಾರಿ"ಯನ್ನು ಗುರುತಿಸುವುದು ಕಷ್ಟವೇನಲ್ಲ. ಇದನ್ನು ಆಧರಿಸಿ ಪ್ರಾಚೀನ ಭಾರತೀಯರಿಗೆ ತಮ್ಮ ಭೂಭಾಗವು ತುಂಬಾ ಪರಿಚಿತವೆಂದು ನಮಗೆ ಅರ್ಥವಾಗುತ್ತದೆ.

AP SCERT

DON'T MISS OUT

The Indian Constitution, which was first written in English, uses the phrase 'India, that is Bharat' right at the beginning. Similarly, the Hindi version of the Constitution mentions the same as *'Bhārat arthāth India'*.

LET'S EXPLORE

In this reproduction of the first page of the original Constitution of India in Fig. 4.5 (page 114), can you make out the phrase 'India, that is Bharat'?

How Foreigners Named India?

The first foreigners to mention India were the Persians, the ancient inhabitants of Iran. In the 6th century BCE, a Persian emperor launched a military campaign and gained control of the region of the Indus River, which, as we saw, was earlier called 'Sindhu'. So, it is no surprise that in their earliest records and stone inscriptions, the Persians referred to India as 'Hind', 'Hidu' or 'Hindu', which are adaptations in their language of 'Sindhu'. (Note that in ancient Persian, 'Hindu' is a purely geographical term; it does not refer here to the Hindu religion.)

Based on these Persian sources, the ancient Greeks named the region 'Indoi' or 'Indike'. They dropped the initial letter 'h' of 'Hindu' because this letter did not exist in their Greek language.

Sindhu → Hindhu → Indoi / Indike

The ancient Chinese also interacted with India. In several texts, they refer to India as 'Yintu' or 'Yindu'. This word also originally comes from 'Sindhu', in the following manner:

Sindhu → Hindhu → Indu → Yindu

AP SCERT

ತಪ್ಪದೇ ತಿಳಿದುಕೊಳ್ಳಿ

ಮೊದಲು ಇಂಗ್ಲಿಷ್‌ನಲ್ಲಿ ಬರೆಯಲಾದ ಭಾರತದ ಸಂವಿಧಾನದ ಪ್ರಾರಂಭದಲ್ಲಿಯೇ 'ಇಂಡಿಯಾ ಅಂದರೆ ಭಾರತ ದೇಶ' ಎಂಬ ಪದಬಂಧಗಳನ್ನು ಉಪಯೋಗಿಸಿದೆ. ಇದೇ ರೀತಿ ಸಂವಿಧಾನದ ಒಂದು ಹಿಂದಿಯ ರೂಪದಲ್ಲಿ 'ಭಾರತ ಅರ್ಥಾತ್ ಇಂಡಿಯಾ' ಎಂದು ಕರೆಯಲಾಗಿದೆ.

ಅನ್ವೇಷಿಸೋಣ

ಭಾರತ ಸಂವಿಧಾನ ನೈಜ ಪ್ರತಿಯಲ್ಲಿ ಮೊದಲ ಪುಟದ (ಚಿತ್ರ 4.5 ಪುಟ 115) ಪುನರ್ ಮುದ್ರಿಸಿದ ಈ ಚಿತ್ರದಲ್ಲಿ, 'ಇಂಡಿಯಾ ಅಂದರೆ ಭಾರತ ದೇಶ' ಎಂಬ ಪದಬಂಧವನ್ನು ನೀವು ಅರ್ಥ ಮಾಡಿಕೊಳ್ಳುವಿರಾ?

ವಿದೇಶಿಯರು ಭಾರತ ದೇಶಕ್ಕೆ ಹೇಗೆ ಹೆಸರಿಟ್ಟರು?

ಭಾರತ ದೇಶವನ್ನು ಕುರಿತು ಪ್ರಸ್ತಾಪಿಸಿದ ಮೊಟ್ಟಮೊದಲ ವಿದೇಶಿಯರು ಇರಾನ್‌ಗೆ ಸೇರಿದ ಪರ್ಷಿಯನ್ನರು. 6ನೇ ಶತಮಾನದಲ್ಲಿ, BCE ಯಲ್ಲಿ ಒಬ್ಬ ಪರ್ಷಿಯದ ಚಕ್ರವರ್ತಿಯು ದಂಡಯಾತ್ರೆಯನ್ನು ಕೈಗೊಂಡು, ಸಿಂಧೂ ನದಿ ಪ್ರಾಂತ್ಯದ ಮೇಲೆ ಹಿಡಿತವನ್ನು ಸಾಧಿಸಿದನು. ಈ ನದಿಯನ್ನು ಹಿಂದೆ 'ಸಿಂಧು' ಎಂದಾಗಿ ಕರೆಯಲಾಗುತ್ತಿತ್ತು. ಆದ್ದರಿಂದ ತಮ್ಮ ಮೊದಲ ದಾಖಲೆಗಳು ಮತ್ತು ಶಿಲಾ ಶಾಸನಗಳಲ್ಲಿ ಪರ್ಷಿಯನ್ನರು ಭಾರತವನ್ನು 'ಹಿಂದ್, ಹಿಂದೂ' ಅಥವಾ 'ಹಿಂದೂ' ಎಂದು ಕರೆಯುತ್ತಿದ್ದುದು ಆಶ್ಚರ್ಯವೇನೂ ಇಲ್ಲ. ಇವೆಲ್ಲವನ್ನೂ ಅವರ ಭಾಷೆಯಲ್ಲಿ 'ಸಿಂಧು' ಎಂಬ ಪದಕ್ಕೆ ಇರುವ ಇತರ ರೂಪಾಂತರಗಳೇ. [ಸೂಚನೆ: ಪ್ರಾಚೀನ ಪರ್ಷಿಯನರಲ್ಲಿ 'ಹಿಂದೂ' ಎಂಬ ಪದ ಸಂಪೂರ್ಣವಾಗಿ ಒಂದು ಭೌಗೋಳಿಕ ಪದ ಮಾತ್ರವೇ; ಇದು ಹಿಂದೂ ಧರ್ಮವನ್ನು ಸೂಚಿಸದು]


ಪರ್ಷಿಯನ್ ಆಧಾರಗಳ ಪ್ರಕಾರ, ಪ್ರಾಚೀನ ಗ್ರೀಕರು ಈ ಪ್ರಾಂತ್ಯವನ್ನು 'ಇಂಡೋಯಿ' ಅಥವಾ 'ಇಂಡಿಕೇ' ಎಂದು ಕರೆದರು. ತಮ್ಮ ಗ್ರೀಕ್ ಭಾಷೆಯಲ್ಲಿ 'ಹ' ಎಂಬ ಅಕ್ಷರವು ಇಲ್ಲದಿರುವುದರಿಂದ, ಅವರು 'ಹಿಂದೂ' ಎಂಬ ಪದದಲ್ಲಿ ಮೊದಲಿರುವ 'ಹ' ಎಂಬ ಶಬ್ದವನ್ನು ಬಿಟ್ಟುಬಿಟ್ಟರು.

ಸಿಂಧು → ಹಿಂದು → ಇಂಡೋಯಿ/ಇಂಡಿಕೇ

ಪ್ರಾಚೀನ ಚೀನೀಯರು ಕೂಡ ಭಾರತ ದೇಶದೊಂದಿಗೆ ಸಂಬಂಧವನ್ನು ಹೊಂದಿದ್ದರು. ಅನೇಕ ಗ್ರಂಥಗಳಲ್ಲಿ ಅವರು ಭಾರತವನ್ನು 'ಯಿಂತು' ಅಥವಾ 'ಯಿಂಟು' ಎಂದು ಕರೆಯುತ್ತಿದ್ದರು. ಇದು ಕೂಡ ಪ್ರಾಥಮಿಕವಾಗಿ 'ಸಿಂಧು' ಎಂಬ ಪದದಿಂದಲೇ ಉಗಮವಾಗಿದೆ. ಬದಲಾವಣೆ ಈ ರೀತಿಯಾಗಿ ನಡೆದಿದೆ:

ಸಿಂಧು → ಹಿಂದು → ಇಂದು → ಯಿಂದು

AP SCERT



Part I

The Union and its Territory

Name and territory of the Union.

1. (1) India, that is Bharat, shall be a Union of States.

(2) The States and the territories thereof shall be the States and their territories specified in Parts A, B and C of the First Schedule.

(3) The territory of India shall comprise—

(a) the territories of the States;

(b) the territories specified in Part D of the First Schedule; and

(c) such other territories as may be acquired.

Admission or establishment of new States.

2. Parliament may by law admit into the Union, or establish, new States on such terms and conditions as it thinks fit.

Formation of new States and alteration of areas, boundaries or names of existing States.

3. Parliament may by law—

(a) form a new State by separation of territory from any State or by uniting two or more States or part of States or by uniting any territory to a part of any State;

(b) increase the area of any State;

(c) diminish the area of any State;

(d) alter the boundaries of any State;

(e) alter the name of any State:


Provided that no Bill for the purpose shall be introduced in either House of Parliament except on the recommendation of the President and unless, where the proposal contained in the Bill affects

समर्पण

7

APSCERT

Fig.4.5 First page of the constitution of India (source: Reprint of the origineal constitution of India, Ministry of Culture, Government of India, 2000)



Part I

The Union and its Territory

Name and territory of the Union.

1. (1) India, that is Bharat, shall be a Union of States.

(2) The States and the territories thereof shall be the States and their territories specified in Parts A, B and C of the First Schedule.

(3) The territory of India shall comprise—

(a) the territories of the States;

(b) the territories specified in Part D of the First Schedule; and

(c) such other territories as may be acquired.

Admission or establishment of new States.

2. Parliament may by law admit into the Union, or establish, new States on such terms and conditions as it thinks fit.

Formation of new States and alteration of areas, boundaries or names of existing States.

3. Parliament may by law—

(a) form a new State by separation of territory from any State or by uniting two or more States or part of States or by uniting any territory to a part of any State;

(b) increase the area of any State;

(c) diminish the area of any State;

(d) alter the boundaries of any State;

(e) alter the name of any State:

Provided that no Bill for the purpose shall be introduced in either House of Parliament except on the recommendation of the President and unless, where the proposal contained in the Bill affects

समर्पण


7

APSCERT

ಚಿತ್ರ 4.5 ಭಾರತದ ಸಂವಿಧಾನದ ಮೊದಲ ಪುಟ [ಮೂಲ: ಭಾರತ ಸಂವಿಧಾನದ ಒಂದು ನೈಜ ಪ್ರತಿಯ ಮುದ್ರಣ ಸಾಂಸ್ಕೃತಿಕ ಸಚಿವಾಲಯ / ಇಲಾಖೆ, ಭಾರತ ಸರ್ಕಾರ 2000]

DON'T MISS OUT

Xuanzang (formerly spelt Hiuen Tsang, Hsuan Tsang, etc.) travelled from China to India in the 7th century CE. He visited many parts of India, met scholars, collected Buddhist texts, and returned to China after 17 years. There, he translated the manuscripts he took back with him from Sanskrit into Chinese. Several other Chinese scholars visited India over the centuries.



Another Chinese word, also derived from 'Sindhu', was 'Tianzhu'; but this word could also be understood as 'heavenly master'. This reflects the respect the ancient Chinese had for India as the land of the Buddha.

You are probably quite familiar with a more recent term, 'Hindustan', but you may not know that it was first used in a Persian inscription some 1,800 years ago! Later on, this became the term used by most invaders of India to describe the Indian Subcontinent.

APSCE

LET'S EXPLORE

Can you complete this table of the many names of India?


Persian	
Greek	
Latin	India
Chinese	
Arabic & Persian	
English	India
French	India

ತಪ್ಪದೇ ತಿಳಿದುಕೊಳ್ಳಿ

ಹ್ಯೂಯೆನ್ ತ್ಸಾಂಗ್ / ಯುವಾನ್ ಚಾಂಗ್ ಎಂದು ಕರೆಯಲ್ಪಡುವ ಒಬ್ಬ ಯಾತ್ರಿಕ 7ನೆಯ ಶತಮಾನ CE ನಲ್ಲಿ ಚೀನಾ ದೇಶದಿಂದ ಭಾರತ ದೇಶಕ್ಕೆ ಆಗಮಿಸಿದನು. ಆತನು ಭಾರತ ದೇಶದಲ್ಲಿ ಅನೇಕ ಸ್ಥಳಗಳಿಗೆ ಭೇಟಿ ನೀಡಿದನು. ಅನೇಕ ವಿದ್ವಾಂಸರನ್ನು ಭೇಟಿಯಾದನು. ಬೌದ್ಧ ಗ್ರಂಥಗಳನ್ನು ಸಂಗ್ರಹಿಸಿದನು ಹಾಗೂ 17 ವರ್ಷಗಳ ನಂತರ ಚೀನಾ ದೇಶಕ್ಕೆ ಮರಳಿದನು. ಅಲ್ಲಿ ತಾನು ಕೊಂಡೊಯ್ದಿದ್ದ ಸಂಸ್ಕೃತ ಬರಹ, ಲಿಪಿಗಳ ಹಸ್ತಪ್ರತಿಗಳನ್ನು ಚೀನಾ ಭಾಷೆಗೆ ಅನುವಾದಿಸಿದನು. ಶತಮಾನಗಳ ಕಾಲಾಂತರದಲ್ಲಿ ಇನ್ನೂ ಕೆಲವು ಚೀನಾ ದೇಶದ ಪಂಡಿತ, ವಿದ್ವಾಂಸರೂ ಸಹ ಭಾರತವನ್ನು ಸಂದರ್ಶಿಸಿದರು.

ಪ್ರಾಚೀನ ಚೀನಿಯರು ಉಪಯೋಗಿಸಿದ ಇನ್ನೊಂದು ಪದ 'ಟಿಯಾಂಜು' ಸಹ 'ಸಿಂಧು' ನಿಂದಲೇ ಉಗಮಿಸಿದೆ. ಆದರೆ ಈ ಪದವು 'ದಿವ್ಯಗುರು' (heavenly master) ಎಂದು ಸಹ ಅರ್ಥೈಸಿಕೊಳ್ಳಬಹುದು. ಚೀನಾ ದೇಶದ ಪ್ರಜೆಗಳು ಭಾರತ ದೇಶವನ್ನು ಎಷ್ಟು ಗೌರವಿಸುತ್ತಿದ್ದರೆಂಬುದು ಇಲ್ಲಿ ವೇದ್ಯವಾಗುತ್ತದೆ. ಇದಕ್ಕೆ ಕಾರಣ ಇದು ಬುದ್ಧನ ಜನ್ಮಭೂಮಿಯಾಗಿದ್ದರಿಂದಲೇ.

ನಿಮಗೆ ಬಹುಶಃ ಪರಿಚಯವುಳ್ಳ ಮತ್ತೊಂದು ಪದ 'ಹಿಂದೂಸ್ಥಾನ್'. ಆದರೆ ಇದು ಮೊದಲ ಬಾರಿಗೆ ಸುಮಾರು 1,800 ವರ್ಷಗಳ ಹಿಂದೆ ಒಂದು ಪರ್ಷಿಯನ್ ಶಾಸನದಲ್ಲಿ ಬಳಕೆಯಾಯಿತೆಂದು ನಿಮಗೆ ಗೊತ್ತೆ? ನಂತರ ಭಾರತ ಉಪಖಂಡವನ್ನು ಸೂಚಿಸಲು ಬಹಳ ವಿದೇಶಿ ಆಕ್ರಮಣಕಾರರು ಈ ಪದವನ್ನು ಉಪಯೋಗಿಸಿದರು.



ಅನ್ವೇಷಿಸೋಣ

ಭಾರತ ದೇಶಕ್ಕೆ ಇರುವ ಅನೇಕ ಹೆಸರುಗಳ ಪಟ್ಟಿಯನ್ನು ನೀವು ಪೂರ್ಣಗೊಳಿಸಬಲ್ಲಿರಾ?

ಪರ್ಷಿಯನ್
ಗ್ರೀಕ್
ಲ್ಯಾಟಿನ್
ಚೈನೀಸ್
ಅರೇಬಿಕ್ ಮತ್ತು ಪರ್ಷಿಯನ್
ಇಂಗ್ಲೀಷ್ ಇಂಡಿಯಾ
ಫ್ರೆಂಚ್ ಇಂಡಿಯಾ

AP SCI



Before we move on ...

- India is an ancient land, which has had many names in the course of its history.
- The names given by the ancient inhabitants of India include 'Jambudvipa' and 'Bharata'. The latter became widespread in time and is the name of India in most Indian languages.
- Foreign visitors to, or invaders of, India mostly adopted names derived from the Sindhu or Indus River; this resulted in names like 'Hindu', 'Indoi', and eventually 'India'.

Questions, activities and projects

1. True or false?
   - The Rig Veda describes the entire geography of India.
   - The Vishnu Purana describes the entire Subcontinent.
   - In Ashoka's time, 'Jambudvipa' included what is today India, parts of Afghanistan, Bangladesh and Pakistan.
   - The Mahabharata lists many regions, including Kashmir, Kutch, and Kerala.
   - The term 'Hindustan' first appeared in a Greek inscription more than 2,000 years ago.
   - In ancient Persian, the word 'Hindu' refers to the Hindu religion.
   - Bharata' is a name given to India by foreign travellers.
2. Discuss what could be the meaning of the quotation at the start of the chapter.
3. Why did people travel to India from various parts of the world in ancient times? What could be their motivations in undertaking such long journeys?

   (Hint: There could be at least four or five motivations)
4. If you were born some 2,000 years ago and had the chance to name our country, what name or names might you have chosen, and why? Use your imagination!

AP SCERT



ಮುಗಿಸುವ ಮುನ್ನ ...

→ಭಾರತ ದೇಶವು ಒಂದು ಪುರಾತನ ಭೂಭಾಗ. ತನ್ನ ಚರಿತ್ರೆ, ಇತಿಹಾಸದಲ್ಲಿ ಅದು ಅನೇಕ ಹೆಸರುಗಳಿಂದ ಕರೆಯಲ್ಪಟ್ಟಿದೆ.

→ ಭಾರತೀಯರ ಬಳಕೆಯಲ್ಲಿದ್ದ ಹೆಸರುಗಳಲ್ಲಿ 'ಜಂಬೂದ್ವೀಪ' ಮತ್ತು 'ಭಾರತ' ಕೂಡ ಇವೆ. 'ಭಾರತ' ಎಂಬ ಹೆಸರು ಕಾಲಕ್ರಮೇಣ ವಿಸ್ತೃತವಾಗಿ ಬಳಕೆಯಲ್ಲಿ ಬಂದಿದೆ. ಈ ದಿನಗಳಲ್ಲಿ ಭಾರತದೇಶದಲ್ಲಿ ಬಹಳಷ್ಟು ಭಾಷೆಗಳಲ್ಲಿ ನಮ್ಮ ದೇಶಕ್ಕೆ ಇದೇ ಹೆಸರು ಇದೆ.

→ ಭಾರತದೇಶಕ್ಕೆ ಬಂದಂತಹ ವಿದೇಶಿ ಪ್ರವಾಸಿಗರು ಅಥವಾ ಆಕ್ರಮಣಕಾರರು ಹೆಚ್ಚಾಗಿ ಸಿಂಧು (ಇಂಡಸ್) ನದಿಯ ಹೆಸರಿಂದ ಉಂಟಾದ ಪದವನ್ನು ಬಳಸಿದರು. ಅದಕ್ಕಾಗಿ 'ಹಿಂದು', 'ಇಂಡೋಯಿ' ಕೊನೆಗೆ 'ಇಂಡಿಯಾ' ನಂತಹ ಪದಗಳು ಬಳಕೆಗೆ ಬಂದವು.

ಪ್ರಶ್ನೆಗಳು, ಚಟುವಟಿಕೆ ಹಾಗೂ ಯೋಜನಾಕಾರ್ಯಗಳು

1. ಸರಿ ಅಥವಾ ತಪ್ಪು

   → ಋಗ್ವೇದವು ಭಾರತದೇಶದ ಒಟ್ಟು ಭೌಗೋಳಿಕ ಸ್ವರೂಪವನ್ನು ವಿವರಿಸುತ್ತದೆ.

   → ವಿಷ್ಣುಪುರಾಣವು ಒಟ್ಟು ಉಪಖಂಡವನ್ನು ಕುರಿತು ವಿವರಿಸುತ್ತದೆ

   → ಅಶೋಕನ ಕಾಲದಿಂದಲೂ 'ಜಂಬೂದ್ವೀಪ'ದಲ್ಲಿ ಇಂದಿನ ಭಾರತ ದೇಶ, ಅಫ್ಘಾನಿಸ್ತಾನ, ಬಾಂಗ್ಲಾದೇಶ ಹಾಗೂ ಪಾಕಿಸ್ತಾನದಲ್ಲಿ ಕೆಲವು ಭಾಗಗಳು ಇವೆ.

   → ಮಹಾಭಾರತದಲ್ಲಿ ಅನೇಕ ಪ್ರಾಂತ್ಯಗಳ ಪಟ್ಟಿಯಲ್ಲಿ ಕಾಶ್ಮೀರ, ಕಚ್, ಕೇರಳಂ ಇವೆ.

   → ಹಿಂದುಸ್ಥಾನ' ಎಂಬ ಪದವು ಮೊದಲು 2000 ವರ್ಷಗಳ ಹಿಂದಿನ ಗ್ರೀಕ್ ಶಾಸನಗಳಲ್ಲಿ ಕಂಡು ಬಂದಿದೆ.

   → ಪ್ರಾಚೀನ ಪರ್ಷಿಯನ್ ಭಾಷೆಯಲ್ಲಿ 'ಹಿಂದು' ಎಂಬ ಪದವು ಹಿಂದೂ ಧರ್ಮವನ್ನು ಸೂಚಿಸುತ್ತದೆ.

   → 'ಭಾರತ' ಎಂಬುದು ವಿದೇಶಿ ಯಾತ್ರಿಕರು ಭಾರತಕ್ಕೆ ಇಟ್ಟ ಹೆಸರು.

2. ಅಧ್ಯಾಯದ ಪ್ರಾರಂಭದಲ್ಲಿರುವ ಉಲ್ಲೇಖ [ಸೂಕ್ತಿ] ಅರ್ಥವೇನು ಎಂಬುದನ್ನು ಚರ್ಚಿಸಿರಿ.

3. ಪ್ರಾಚೀನ ಕಾಲದಲ್ಲಿ ಪ್ರಪಂಚದ ವಿವಿಧ ಪ್ರಾಂತ್ಯಗಳಿಂದ ಪ್ರಜೆಗಳು ಭಾರತ ದೇಶಕ್ಕೆ ಏಕೆ ಬಂದರು? ಇಂತಹ ಸುದೀರ್ಘ ಪ್ರಯಾಣ / ಪರ್ಯಟನೆ ಮಾಡಲು ಅವರಿಗೆ ಪ್ರೇರಕವಾದ ಅಂಶಗಳು ಯಾವುವು?
   [ಸೂಚನೆ: ಕನಿಷ್ಠ ನಾಲ್ಕು ಅಥವಾ ಐದು ಪ್ರೇರಕಾಂಶಗಳನ್ನು ಒಳಗೊಂಡಿರಲಿ]

4. ನೀವು 2000 ವರ್ಷಗಳ ಹಿಂದೆ ಜನನ ಹೊಂದಿ, ನಮ್ಮ ದೇಶಕ್ಕೆ ಹೆಸರಿಡುವ ಅವಕಾಶ ಹೊಂದಿದ್ದರೆ, ನೀವು ಯಾವ ಹೆಸರನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಿರಿ? ಏಕೆ? ನಿಮ್ಮ ಊಹಾಶಕ್ತಿಯನ್ನು ಉಪಯೋಗಿಸಿರಿ.

AP SCERT

CHAPTER

5

INDIA'S CULTURAL ROOTS

Learning Outcomes

The student will be able to-

- Identify the Vedas as the earliest texts. CG -1
- Learn about the emergence of new schools of thought namely Jainism and Buddhism and analyse their core principles. CG -1
- Explain about the interaction of the tribal belief systems and art with Hinduism over millennia. CG - 4

"That which cannot be stolen; that which cannot be confiscated by rulers; ... that which is not a burden as it does not weigh anything; that which, though it is used, only grows every day - that is the greatest wealth of all, the wealth of true knowledge."

- Subhashita (Wise Saying)

A rishi (from Hampi, Karnataka) | The Buddha (from Bhutan) | Mahavira (from Bihar)



© NCERT not to be republished

The Big Questions

1. *What are the Vedas? What is their message?*
2. *What new schools of thought emerged in India in the 1st millennium BCE? What are their core principles?*
3. *What is the contribution of folk and tribal traditions to Indian culture?*

ಅಧ್ಯಾಯ

5

ಭಾರತದೇಶದ ಸಾಂಸ್ಕೃತಿಕ ಮೂಲಗಳು

Y9C8B9

ಕಲಿಕೆಯ ಫಲಗಳು

ವಿದ್ಯಾರ್ಥಿಗಳು ಈ ಕೆಳಗಿನವುಗಳನ್ನು ಮಾಡುವರು

- ವೇದಗಳನ್ನು ಮೊದಲ ಗ್ರಂಥಗಳಾಗಿ ಗುರುತಿಸಿರುವರು. CG -1
- ಜೈನಧರ್ಮ ಮತ್ತು ಬೌದ್ಧಧರ್ಮ ಎಂಬ ಹೊಸ ಆಲೋಚನೆಗಳ ವಿಧಾನಗಳ ಉಗಮದ ಕುರಿತು ತಿಳಿದುಕೊಳ್ಳುವರು. ಅವುಗಳ ಪ್ರಮುಖ ಸೂತ್ರಗಳನ್ನು ವಿಶ್ಲೇಷಿಸುವರು. CG -1
- ಸಾವಿರಾರು ವರ್ಷಗಳ ಆದಿವಾಸಿಗಳ ವಿಶ್ವಾಸ ವ್ಯವಸ್ಥೆ ಹಾಗು ಕಲೆ ಹಿಂದೂ ಧರ್ಮದೊಂದಿಗಿನ ಪರಸ್ಪರ ಕ್ರಮಗಳ ಕುರಿತು ವಿವರಿಸುತ್ತಾರೆ. CG -4

"ಯಾರೂ ಸಹ ಅಪರಹಿಸಲಾರದ, ಯಾವ ರಾಜನೂ ಸ್ವಾಧೀನ ಮಾಡಿಕೊಳ್ಳಲಾರದ, ತೂಕವಿರದ ಕಾರಣ ಭಾರವಲ್ಲದ್ದು, ಉಪಯೋಗಿಸಿದಂತೆಲ್ಲಾ ಅಭಿವೃದ್ಧಿ ಹೊಂದುವ ಅದೇ ದೊಡ್ಡ ಸಂಪತ್ತು, ನಿಜವಾದ ಜ್ಞಾನ ಸಂಪತ್ತು – ಸುಭಾಷಿತ (ಸೂಕ್ತಿ)

ಒಬ್ಬ ಋಷಿ (ಹಂಪಿ, ಕರ್ನಾಟಕದಿಂದ)/ ಬುದ್ಧ (ಭೂತಾನ್‌ದಿಂದ)/ ಮಹಾವೀರ (ಬಿಹಾರದಿಂದ)



ಪ್ರಮುಖ ಪ್ರಶ್ನೆಗಳು ?

1. ವೇದಗಳೆಂದರೇನು? ಅವುಗಳ ಸಂದೇಶ ಏನು?
2. ಒಂದನೇ ಸಹಸ್ರಮಾನದಲ್ಲಿ ಭಾರತದೇಶದಲ್ಲಿ ಉಗಮಿಸಿದ ಹೊಸ ತತ್ವ ಧೋರಣೆಗಳು ಯಾವುವು? ಅವುಗಳ ಮೌಲಿಕ ಸೂತ್ರಗಳು ಯಾವುವು?
3. ಭಾರತೀಯ ಸಾಂಸ್ಕೃತಿಕ ವಿಕಾಸಕ್ಕೆ ಜಾನಪದ ಆದಿವಾಸಿಗಳ ಸಂಪ್ರದಾಯಗಳು ಹೇಗೆ ಪೂರಕವಾಗಿವೆ?

KSCERT

Indian culture, by any estimate, is several millenniums old. Like any ancient tree, it has many roots and many branches. The roots nurture a common trunk. And from the trunk emerge many branches, which are different manifestations of Indian culture, yet united by a common trunk.

Some of these branches are about art, literature, science, medicine, religion, the art of governance, martial arts, and so on. There are also 'schools of thought', by which we mean groups of thinkers or **spiritual seekers** who share similar ideas about human life, the world, etc.

Spiritual: Concerned with the spirit or soul (atman in Sanskrit and many Indian languages). Spirituality is the search for a deeper or higher dimension beyond our current personality.

Many archaeologists and scholars have pointed out that some of India's cultural roots go all the way to the Indus or Harappan or Sindhu-Sarasvati civilisation (which we visit in Chapter 6). Later on, over time, hundreds of **schools of thought** emerged in India. We will see here a few early schools, which have shaped India into a country with a unique personality. By understanding them and their roots, we can understand **'India, that is Bharat'** better.

Seeker: Someone who seeks the truths of this world. This could be a sage, a saint, a yogi, a philosopher, etc.

AP SCERT

The Vedas and Vedic Culture

a. What are the Vedas?

The word **"Veda"** comes from the Sanskrit **vid** which means **'knowledge'** (hence vidya, for instance). We briefly mentioned the Rig Veda in earlier chapters. In fact, there are four Vedas - the Rig Veda, the Yajur Veda, the Sama Veda and the Atharva Veda. They are the most ancient texts of India, and indeed among the most ancient in the world.

The Vedas consist of thousands of hymns - prayers in the form of poems and songs - that were recited orally, not written. Those hymns were composed in the Sapta Sindhava region (which we visit in Chapter 5). It is difficult to say when exactly the Rig Veda, the most ancient of the four, was composed; experts have proposed dates ranging from the 5th to the 2nd millennium BCE.

ಯಾವ ಅಂದಾಜಿನ ಪ್ರಕಾರವಾದರೂ ಭಾರತೀಯ ಸಂಸ್ಕೃತಿ ಅನೇಕ ಸಾವಿರ ವರ್ಷಗಳಷ್ಟು ಒಂದು ಪ್ರಾಚೀನ ಕಾಲದ ಹೆಮ್ಮರದ ರೀತಿ ಇದಕ್ಕೆ ಅನೇಕ ಬೇರುಗಳು, ಕೊಂಬೆಗಳು ಇವೆ. ಎಲ್ಲಾ ಬೇರುಗಳು ಸೇರಿ ಒಂದೇ ಕಾಂಡಕ್ಕೆ ಪೋಷಕವಾಗಿರುತ್ತವೆ. ಈ ಕಾಂಡದಿಂದ ಅನೇಕ ಕೊಂಬೆಗಳು ಉಂಟಾಗಿವೆ. ಇವು ಭಾರತೀಯ ಸಂಸ್ಕೃತಿಯ ಒಂದು ವಿಭಿನ್ನ ವ್ಯಕ್ತೀಕರಣಗಳು ಆದರೂ ಸಹ ಒಂದು ಸಾಧಾರಣ ಕಾಂಡದ ಮೂಲಕ ಏಕವಾಗಿವೆ.

ಈ ಕೊಂಬೆಗಳಲ್ಲಿ ಕೆಲವು ಕಲೆ, ಸಾಹಿತ್ಯ, ವಿಜ್ಞಾನ, ವೈದ್ಯ, ಧರ್ಮ, ಆಡಳಿತ, ಯುದ್ಧ ನೈಪುಣ್ಯಗಳು ಮುಂತಾದವಿವೆ. ಮಾನವ ಜೀವನ, ಜಗತ್ತಿನ ಆರಂಭದ ಕುರಿತು ಒಂದೇ ವಿಧವಾದ ಆಲೋಚನೆ, ಚಿಂಥನೆಗಳನ್ನು ಹಂಚಿಕೊಳ್ಳುವ ಆಲೋಚನೆಗಳು ಮತ್ತು ಆಧ್ಯಾತ್ಮಿಕ ಸಾಧಕರ ಒಂದು ತಾತ್ವಿಕ ಧೋರಣೆಗಳು (**schools of thought**) ಸಹ ಇದರಲ್ಲಿ ಕೂಡಿವೆ.

ಭಾರತ ದೇಶದ ಒಂದು ಸಾಂಸ್ಕೃತಿಕ ಮೂಲಗಳು ಸಿಂಧು, ಹರಪ್ಪ, ಸಿಂಧು–ಸರಸ್ವತಿ ನಾಗರೀಕತೆಯ ಕಾಲದವರೆಗೂ ವಿಸ್ತರಿಸಿವೆ ಎಂದು ಹಲವು ಪ್ರಾಚೀನ ವಸ್ತು ಶಾಸ್ತ್ರಜ್ಞರು ಹಾಗೂ ವಿದ್ವಾಂಸರು ಭಾವಿಸಿದ್ದಾರೆ. (ಇದನ್ನು 6ನೇ ಅಧ್ಯಾಯದಲ್ಲಿ ನಾವು ತಿಳಿದುಕೊಳ್ಳಬಹುದು) ಕಾಲಕ್ರಮದಲ್ಲಿ ನೂರಾರು ತಾತ್ವಿಕ ಧೋರಣೆಗಳು (School of thought) ಭಾರತ ದೇಶದಲ್ಲಿ ಉಗಮಿಸಿದವು. ಭಾರತ ದೇಶವನ್ನು ಒಂದು ವಿಶಿಷ್ಟ ವ್ಯಕ್ತಿತವವನ್ನು ಹೊಂದಿದ ದೇಶವನ್ನಾಗಿ ರೂಪಿಸಲು ಕೆಲವು ಆರಂಭಿಕ ಧೂರಣೆಗಳನ್ನು ನಾವು ಇಲ್ಲಿ ನೋಡುತ್ತೇವೆ. ಅವುಗಳನ್ನು ಅವುಗಳ ಮೂಲಗಳನ್ನು ಅರ್ಥ ಮಾಡಿಕೊಳ್ಳುವ ಮೂಲಕ ಇಂಡಿಯಾ ಎಂದು ಕರೆಯಲ್ಪಡುವ ಭಾರತದೇಶದ ಕುರಿತು ನಾವು ಉತ್ತಮವಾಗಿ ಅರ್ಥ ಮಾಡಿಕೊಳ್ಳಬಹುದು.

ಆಧ್ಯಾತ್ಮಿಕ: **spirit** ಅಥವಾ **soul** ಗೆ ಸಂಬಂಧಿಸಿದ್ದದು (ಸಂಸ್ಕೃತದಲ್ಲಿ ಹಾಗೂ ಭಾರತೀಯ ಭಾಷೆಗಳಲ್ಲಿ ಆತ್ಮ) ಆಧ್ಯಾತ್ಮಿಕತೆ ಎಂದರೆ ನಮ್ಮ ಭೌತಿಕ ವ್ಯಕ್ತಿತ್ವಕ್ಕೆ ಮಿಗಿಲಾದ ಉನ್ನತವಾದ ಮತ್ತು ಆಳವಾದ ಕೋನವನ್ನು ಅನ್ವೇಷಿಸುವುದೇ ಆಗಿದೆ.

ಸಾಧಕ: ಜಗತ್ತಿನ ಸತ್ಯಗಳನ್ನು ಅನ್ವೇಷಿಸುವ ವ್ಯಕ್ತಿ ಆತನು ಒಬ್ಬ ಋಷಿ ಆಗಬಹುದು, ಒಬ್ಬ ಸನ್ಯಾಸಿಯೂ ಆಗಿ, ಯೋಗಿಯೂ ಆಗಿ ಮತ್ತು ತತ್ವಜ್ಞಾನಿ ಮುಂತಾದವರೂ ಆಗಬಹುದು.

ವೇದಗಳು, ವೈದಿಕ ಸಂಸ್ಕೃತಿ

ಎ. ವೇದಗಳು ಎಂದರೇನು?

ವೇದ ಎಂಬ ಪದ 'ವಿದ್' ಎನ್ನುವ ಸಂಸ್ಕೃತ ಮೂಲದಿಂದ ಬಂದಿದೆ. 'ವಿದ್' ಎಂದರೆ 'ಜ್ಞಾನ' (ಉದಾ: ಶಿಕ್ಷಣ/ವಿದ್ಯೆ). ಮೊದಲನೆ ಅಧ್ಯಾಯದಲ್ಲಿ ಋಗ್ವೇದವನ್ನು ಕುರಿತು ಸಂಕ್ಷಿಪ್ತವಾಗಿ ತಿಳಿದುಕೊಂಡೆವು. ವಾಸ್ತವಕ್ಕೆ ವೇದಗಳು ನಾಲ್ಕು. ಅವು ; ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ. ಇವು ಭಾರತದೇಶದ ಅತ್ಯಂತ ಪುರಾತನವಾದ ಗ್ರಂಥಗಳು. ವಾಸ್ತವತೆಗೆ ಇವು ಜಗತ್ತಿನಲ್ಲಿ ಅತ್ಯಂತ ಪ್ರಾಚೀನವಾದವುಗಳು.

ವೇದಗಳಲ್ಲಿ ಸಾವಿರಾರು ಶ್ಲೋಕಗಳಿವೆ. ಇವು ಪದ್ಯ ಹಾಗೂ ಹಾಡುಗಳ ರೂಪದಲ್ಲಿರುವ ಪ್ರಾರ್ಥನೆಗಳು. ಅವು ಮೌಖಿಕವಾಗಿ ಪಠಣೆ ಮಾಡಿದವುಗಳಾಗಿವೆ. ಆದರೆ ಬರೆಯಲಾಗಿಲ್ಲ. ಆ ಶ್ಲೋಕಗಳೆಲ್ಲವೂ ಸಪ್ತಸಿಂಧು ಪ್ರಾಂತ್ಯಗಳಲ್ಲಿ ಸಂಯೋಜಿಸಲಾಗಿದೆ. (ಇದನ್ನು ನಾವು 5ನೇ ಅಧ್ಯಾಯದಲ್ಲಿ ನೋಡಬಹುದು). ಈ ನಾಲ್ಕರಲ್ಲಿ ಅತ್ಯಂತ ಪಾಚೀನವಾದುದೆಂದರೆ ಋಗ್ವೇದ ಯಾವ ಕಾಲದಲ್ಲಿ ಸಂಯೋಜಿಸಲ್ಪಟ್ಟಿವೆ ಎಂಬುದನ್ನು ಹೇಳುವುದು ಕಷ್ಟ ಸಾಧ್ಯ. ಆದರೂ ನಿಪುಣರು ಪೂರ್ವ ಸಾಧಾರಣ ಶಕ 5ನೇ ಸಹಸ್ರಮಾನದಿಂದ ಹಿಡಿದು 2ನೇ ಸಹಸ್ರಮಾನದವರೆಗೂ ಇರಬಹುದೆಂದು ಇವುಗಳ ಕಾಲವನ್ನು ಪ್ರತಿಪಾದಿಸಿದ್ದಾರೆ.

AP SCERT

UNESCO: UNESCO stands for 'United Nations Educational, Scientific and Cultural Organization'. It promotes dialogue between people and nations through education, science and culture.

So, for anything between 100 and 200 generations, these texts have been committed to memory through rigorous training and passed on orally with hardly any alterations!



DON'T MISS OUT



This meticulous transmission over thousands of years explains why, in 2008, UNESCO recognised Vedic chanting as 'a masterpiece of the oral and intangible heritage of humanity'.

Cosmos: The world or the universe as an ordered and harmonious system.

The Vedic hymns were composed by rishis (male seers or sages) and rishikas (female ones) in an early form of the Sanskrit language. They were addressed in poetical form to many deities (gods or goddesses), such as Indra, Agni, Varuna, Mitra, Sarasvati, Ushas, and many more. Together with the seers, these deities sustained ritam, or truth and order in human life and in the 'cosmos'.The early rishis and rishikas saw those **gods and goddesses** as one, not separate beings. As one famous hymn puts it,

ekam sat vipra bahudha vadanti ...

-Rigveda

The Existent [that is, the supreme reality] is one, but sages give it many names.

(This conveys the profound meaning with in Indian Philosophy - it means that although God or Supreme Truth is one, people worship it in various forms and by different names according to their own understanding)

Worldview: A certain view or under-standing of the world, its origin, or its workings.

In this worldview, some values were especially important, beginning with 'Truth', which was often another name for God. The last mantras (verses) of the Rig Veda also call for unity among people:

AP SCERT

ಈ ಗ್ರಂಥಗಳು ಕಠಿಣವಾದ ಶಿಕ್ಷಣದ ಮೂಲಕ ಕಂಠಪಾಠ ಮಾಡಲ್ಪಟ್ಟು ಯಾವುದೇ ಬದಲಾವಣೆಗಳನ್ನೊಳಗೊಳ್ಳದೆ ಮೌಖಿಕವಾಗಿ 100 ರಿಂದ 200 ರ ತಲೆಮಾರಿನವರೆಗೂ ಸಾಗಿಬಂದವು.

ಯುನೆಸ್ಕೋ: ಯುನೆಸ್ಕೊ ಎಂದರೆ ವಿಶ್ವ ಸಂಸ್ಥೆಯಲ್ಲಿನ ಶಿಕ್ಷಣ, ಶಾಸ್ತ್ರೀಯ ಹಾಗೂ ಸಾಂಸ್ಕೃತಿಕ ಸಂಸ್ಥೆ ಇದು ವಿಜ್ಞಾನ, ಶಿಕ್ಷಣ ಮತ್ತು ಸಂಸ್ಕೃತಿಯ ಮೂಲಕ ಪ್ರಜೆಗಳು ಹಾಗೂ ದೇಶಗಳ ನಡುವೆ ಸಂಬಂಧಗಳನ್ನು ಪ್ರೋತ್ಸಾಹಿಸುವುದಾಗಿದೆ

ತಪ್ಪದೇ ತಿಳಿದುಕೊಳ್ಳಿ

ಸಾವಿರಾರು ವರ್ಷಗಳಿಂದಲೂ ಅತ್ಯಂತ ಖಚಿತವಾಗಿ ಸಂಕ್ರಮಿಸಿದ ವೇದ ಪಠನೆಯನ್ನು ಮಾನವ ಜನಾಂಗದ ಅತಿ ಶ್ರೇಷ್ಠ ಮೌಖಿಕ, ಅಗೋಚರವಾದ ಪರಂಪರೆಯ ಕಾಲಖಂಡವನ್ನಾಗಿ 2008 ರಲ್ಲಿ **UNESCO** ಗುರ್ತಿಸಿದೆ.

ವೈದಿಕ ಶ್ಲೋಕಗಳನ್ನು ಋಷಿಗಳು (ಪುರುಷ ಸಾಧುಗಳು) ಋಷಿ ಕನ್ಯೆಯರು (ಬ್ರಹ್ಮವಾದಿನಿಯರು) ಸಂಸ್ಕೃತ ಭಾಷೆಯ ಮೊದಲ ರೂಪದಲ್ಲಿ ಸಂಯೋಜಿಸಿದರು. ಇಂದ್ರ, ಅಗ್ನಿ, ವರುಣ, ಮಿತ್ರ, ಸರಸ್ವತಿ, ಉಷಸ್ ಮುಂತಾದ ದೇವತೆಗಳನ್ನು (ದೇವರು ಅಥವಾ ದೇವತೆಗಳನ್ನು) ಕವಿತೆಯ ರೂಪದಲ್ಲಿ ಸಂಬೋಧಿಸಿದರು. ಋಷಿಗಳೊಂದಿಗೆ ಈ ದೇವತೆಗಳು ಈ ಜಗತ್ತಿನಲ್ಲಿಯೂ ಮಾನವರ ಜೀವನದಲ್ಲಿಯೂ ಧರ್ಮವನ್ನು, ಸತ್ಯವನ್ನು ಸ್ಥಾಪಿಸಿ, ಸ್ಥಿರವಾಗುವಂತೆ ಮಾಡಿದರು. ಮೊದಲ ಋಷಿಗಳು ಹಾಗೂ ಋಷಿ ಸ್ತ್ರೀಯರು ಈ **ದೇವ ದೇವತೆಗಳನ್ನು** ಬೇರೆ ಬೇರೆಯಾಗಿ ಅಲ್ಲದೆ ಒಂದೇ ತತ್ವದ ವ್ಯಕೀಕರಣವಾಗಿ ನೋಡಿದರು. ಒಂದು ಪ್ರಸಿದ್ಧ ಶ್ಲೋಕವೊಂದು ಹೀಗಿದೆ.

ವಿಶ್ವಂ : ಒಂದು ಕ್ರಮಬದ್ಧವಾದ ಸಾಮರಸ್ಯ ಪೂರಕವಾದ ಪ್ರಪಂಚದ ಒಂದು ವ್ಯವಸ್ಥೆ

ಪ್ರಾಪಂಚಿಕ ದೃಷ್ಟಿಕೋನ : ಜಗತ್ತು ಹಾಗೂ ಅದರ ಉಗಮ ಕಾರ್ಯ ನಿರ್ವಹಿಸುವ ವಿಧಾನವನ್ನು ಕುರಿತಾದ ಒಂದು ನಿರ್ದಿಷ್ಟ ದೃಷ್ಟಿಕೋನ ಅಥವಾ ತಿಳುವಳಿಕೆ ಜೊತೆಯಾಗಿ ಬಾಳುವ ಹಾಗೂ ಮಾತನಾಡಿಕೊಳ್ಳುವ ವ್ಯವಸ್ಥೆ

"ಏಕಂ ಸತ್ ವಿಪ್ರಾ ಬಹುದಾ ವದಂತಿ" -- ಋಗ್ವೇದ

ಸತ್ಯವು ಒಂದೇ.
ಪಂಡಿತರು ಅದನ್ನು ಅನೇಕ ಹೆಸರುಗಳಿಂದ ಕರೆದರು.

(ಇದು ಭಾರತೀಯ ತತ್ವಶಾಸ್ತ್ರದಲ್ಲಿ ಆಳವಾದ ಅರ್ಥವನ್ನು ತಿಳಿಸುತ್ತದೆ
-ಅಂದರೆ ದೇವರು ಅಥವಾ ಪರಮ ಸತ್ಯವು ಒಂದೇ ಆದಗ್ಯೂ,
ಮನುಷ್ಯರು ಅವರ ತಿಳುವಳಿಕೆಯನ್ನು ಆಧರಿಸಿ ಬೇರೆ ಬೇರೆ ರೂಪಗಳಲ್ಲಿ,
ಬೇರೆ ಬೇರೆ ಹೆಸರುಗಳಿಂದ ಆರಾಧಿಸುತ್ತಾರೆ ಎಂಬುದು ಇದರ ಸಾರ)


ಈ ಪ್ರಾಪಂಚಿಕ ದೃಷ್ಟಿಕೋನದಲ್ಲಿ 'ಸತ್ಯ' ದೊಂದಿಗೆ ಮೊದಲುಗೊಳ್ಳುವ ಕೆಲವು ಮೌಲ್ಯಗಳು ಬಹಳ ಮುಖ್ಯವಾದವುಗಳು. ಈ ಸತ್ಯಕ್ಕೆ ಬೇರೊಂದು ಹೆಸರೇ ಭಗವಂತ. ಋಗ್ವೇದದಲ್ಲಿ ಕೊನೆಯ ಮಂತ್ರಗಳು (ಶ್ಲೋಕಗಳು) ಪ್ರಜೆಗಳ ನಡುವೆ ಐಕ್ಯತೆ ಇರಬೇಕೆಂದು ಹೇಳುತ್ತದೆ.

AP SCERT

Come together, speak together;
common be your mind, may your thoughts agree ...
United be your purpose, united your heart ...
may your thoughts be united, so all may agree!

b. Vedic society

Early Vedic society was organised in different **Janas** or **'clans'**, that is, larger groups of people. The Rig Veda alone lists over 30 such **Janas** - for instance, the Bharatas, the Purus, the Kurus, the Yadus, the Turvashas etc. Each clan was associated with a particular region of the northwest part of the Subcontinent.




AP SCERT

ಜೊತೆಗೂಡಿ ಬಾಳಿರಿ, ಜೊತೆಯಾಗಿ ಮಾತನಾಡಿ.
ನಿಮ್ಮ ಮನಸ್ಸುಗಳು ಏಕವಾಗಿರಲಿ, ನಿಮ್ಮ ಆಲೋಚನೆಗಳು ಏಕೀಕೃತವಾಗಿರಲಿ.
ನಿಮ್ಮ ಗುರಿ ಏಕವಾಗಿರಲಿ, ನಿಮ್ಮ ಹೃದಯಗಳು ಏಕವಾಗಿರಲಿ.
ನಿಮ್ಮ ಆಲೋಚನೆಗಳು ಸಮೈಕ್ಯವಾಗಿರಲಿ, ನೀವೆಲ್ಲರೂ ಸಮನ್ವಯತೆಯಿಂದ ಇರಿ.

ಬಿ. ವೇದಗಳ ಕಾಲದ ಸಮಾಜ

ವೇದಗಳ ಕಾಲದ ಮೊದಲ ಸಮಾಜ **'ಜನರು'** ಅಥವಾ **'ಸಮೂಹಗಳಾಗಿ'** ದೊಡ್ಡ ಪ್ರಜಾ ಸಮೂಹಗಳಾಗಿ ಕ್ರಮಬದ್ಧೀಕರಿಸಿ ಇರುತ್ತಿತ್ತು. ಋಗ್ವೇದದಲ್ಲಿಯೇ ಅಂತಹ ಮೂವತ್ತಕ್ಕೂ ಹೆಚ್ಚು **'ಜನರ'** ಕುರಿತು ಪ್ರಸ್ತಾಪಿಸಲಾಗಿದೆ. ಉದಾಹರಣೆಗೆ ಭರತರು, ಪುರುಗಳು, ಕುರುಗಳು, ಯದುಗಳು, ತುರ್ವಶರು ಮುಂತಾದವು. ಪ್ರತಿ ಜನಾಂಗವು ಭಾರತ ಉಪಖಂಡದ ವಾಯುವ್ಯ ಭಾಗದಲ್ಲಿ ಒಂದು ನಿರ್ದಿಷ್ಟ ಪ್ರಾಂತ್ಯದೊಂದಿಗೆ ಸಂಬಂಧ ಹೊಂದಿದೆ.



AP SCERT

Healer: Someone who uses traditional practices to relieve or heal diseases.

Not much is known of how these **'janas'** governed their society. The Vedas only give us a few clues through words like raja (a king or ruler), sabha and samithi, both of which refer to a collective gathering or assembly.

Many professions are mentioned in the Vedic texts, such as agriculturist, weaver, potter, builder, carpenter, healer, dancer, barber, priest, etc.



LET'S EXPLORE



Do you know the term for a society where people select their leaders? How do you think people can benefit from such a situation? What could happen if they live under leaders that they did not choose? (Hint: Think back to what you're learning in the theme 'Governance and Democracy'!) Write your thoughts in a paragraph of 100-150 words.

c. Vedic schools of thought

Vedic culture also developed many rituals (yajna, often read as 'yagya') directed towards various deities (gods or goddesses) for individual or collective benefit and wellbeing. Daily rituals were generally in the form of prayers and offerings to Agni, the deity associated with fire, but those rituals became more and more complex in the course of time.

A group of texts known as **'Upanishads'** built upon Vedic concepts and introduced new ones, such as Rebirth (taking birth again and again) and karma (our actions or their results). According to one school of thought, generally known as 'Vedanta', everything - human life, nature and the universe - is one divine essence called brahman (not to be confused with the god Brahma) or sometimes just tat ('that'). Two well-known mantras express this in a simple but profound way:

aham brahmasmi
"I am brahman" (that is to say, I am divine)
tat tvam asi...
"You are That"

AP SCERT

ಈ 'ಜನರು' (ಸಮಾಜವನ್ನು/ರಾಜ್ಯವನ್ನು) ತಮ್ಮ ಪ್ರಾಂತ್ಯಕ್ಕೆ ಹೇಗೆ ಆಳ್ವಿಕೆ ಮಾಡಿಕೊಂಡರೆಂಬುದು ಹೆಚ್ಚು ತಿಳಿದಿಲ್ಲ. ರಾಜ (ರಾಜ ಅಥವಾ ಪಾಲಕ) 'ಸಭ', 'ಸಮಿತಿ' ಯಂತಹ ಕೆಲವು ಆಧಾರಗಳನ್ನು ಸೂಚಿಸುತ್ತವೆ. ಸಭ, ಸಮಿತಿಗಳು ಸಾಮೂಹಿಕ ಸಭೆಗಳನ್ನು ತಿಳಿಯಪಡಿಸುತ್ತವೆ.

ವ್ಯವಸಾಯಗಾರ, ನೇಕಾರರು, ಕುಂಬಾರಿಕೆ ಮಾಡುವವರು (ಕಟ್ಟಡ ನಿರ್ಮಾಣ ಮಾಡುವವರು) ಬಡಿಗರು, ವೈದ್ಯರು, ನರ್ತಕರು, ಕ್ಷೌರಿಕರು, ಪೂಜಾರಿ/ಅರ್ಚಕರಂತಹ ವಿವಿಧ ರೀತಿಯ ವೃತ್ತಿಗಳನ್ನು ವೇದ ಗ್ರಂಥಗಳಲ್ಲಿ ಉಲ್ಲೇಖಿಸಿದ್ದಾರೆ.

ಚಿಕಿತ್ಸಕ: ರೋಗಗಳಿಂದ ಉಪಶಮನ ಅಥವಾ ವಾಸಿ ಮಾಡುವುದಕ್ಕೆ ಸಂಪ್ರದಾಯಿಕ ಪದ್ಧತಿಗಳನ್ನು ಉಪಯೋಗಿಸುವ ವ್ಯಕ್ತಿ.

ಅನ್ವೇಷಿಸೋಣ

ಪ್ರಜೆಗಳು ತಾವೇ ತಮ್ಮ ನಾಯಕರನ್ನು ಆಯ್ಕೆ ಮಾಡಿಕೊಳ್ಳುವ ಸಮಾಜವಿತ್ತೆಂಬುದು ನಿಮಗೆ ತಿಳಿದಿದೆಯೇ? ಅಂತಹ ಪರಿಸ್ಥಿತಿಯಿಂದ ಪ್ರಜೆಗಳು ಹೇಗೆ ಪ್ರಯೋಜನವನ್ನು ಹೊಂದುತ್ತಾರೆಂದುಕೊಳ್ಳುವಿರಿ? ಪ್ರಜೆಗಳು ಅವರು ಆಯ್ಕೆ ಮಾಡಿಕೊಂಡು ನಾಯಕರ ಆಡಳಿತದಡಿಯಲ್ಲಿ ಜೀವನ ನಡೆಸಿದರೆ ಏನು ನಡೆಯುವುದು? (ಸೂಚನೆ: ಆಡಳಿತ ಮತ್ತು ಪ್ರಜಾಸ್ವಾಮ್ಯ ಎಂಬ ನೇಮದಡಿಯಲ್ಲಿ ನೀವು ತಿಳಿದುಕೊಳ್ಳುತ್ತಿರುವ ವಿಷಯಗಳನ್ನು ಒಂದು ಬಾರಿ ಪುನರಾಲೋಚಿಸಿರಿ. ನಿಮ್ಮ ಆಲೋಚನೆಗಳನ್ನು 100–150 ಪದಗಳನ್ನೊಳಗೊಂಡಂತೆ ಒಂದು ಪ್ಯಾರವನ್ನು ಬರೆಯಿರಿ).

ಸಿ. ವೈದಿಕ ತಾತ್ವಿಕ ಧೋರಣೆಗಳು

ವೈದಿಕ ಸಂಸ್ಕೃತಿ ವ್ಯಕ್ತಿ ಮತ್ತು ಸಮಾಜದ ಮಹತ್ವ ಹಾಗೂ ಕ್ಷೇಮಕ್ಕಾಗಿ ವಿವಿಧ ರೀತಿಯ ದೇವತೆಗಳಿಗಾಗಿ (ದೇವರು ಮತ್ತು ದೇವತೆಗಳು) ಅನೇಕ ರೀತಿಯ ಪದ್ಧತಿ, ಆಚಾರಗಳನ್ನು (ಪೂಜಾ ವಿಧಾನಗಳು) ಅಭಿವೃದ್ಧಿಪಡಿಸಿತು. ದಿನಿತ್ಯದ ಪೂಜಾವಿಧಾನಗಳು ಅಗ್ನಿ ಮತ್ತು ಆಹುತಿಯೊಂದಿಗೆ ಸಂಬಂಧವುಳ್ಳ ದೇವತೆಗೆ ಪ್ರಾರ್ಥನೆಗಳು, ನೈವೇದ್ಯ, ಆರಾಧನೆಯ ರೂಪದಲ್ಲಿ ಇರುತ್ತಿದ್ದವು. ಈ ಪೂಜಾ ವಿಧಾನಗಳು ಕಾಲಕ್ರಮದಲ್ಲಿ ಅತ್ಯಂತ ಸಂಕ್ಲಿಷ್ಟವಾದವು.

ವೈದಿಕ ಭಾವನೆಗಳ ಆಧಾರವಾಗಿ ಉಪನಿಷತ್ತುಗಳನ್ನೇ ಗ್ರಂಥಸಮುದಾಯವು ಪರಿಚಯಿಸಿತು. ಇವು ಪುನರ್ಜನ್ಮ (ಮತ್ತೆ ಮತ್ತೆ ಹುಟ್ಟುವುದು) ಕರ್ಮ–(ನಾವು ಮಾಡು ಕೆಲಸಗಳು ಅಥವಾ ಫಲಿತಾಂಶಗಳು)ದಂತಹ ವಿನೂತನ ಭಾವನೆಗಳನ್ನು ಪ್ರತಿಪಾದಿಸಿದವು. ವೇದಾಂತವೆಂಬುದು ಒಂದು ತಾತ್ವಿಕ ಧೋರಣೆಯ ಪ್ರಕಾರ ಮಾನವ ಜೀವನ, ಪ್ರಕೃತಿ ಹಾಗೂ ವಿಶ್ವ 'ಬ್ರಹ್ಮ' ಎಂದು ಹೆಸರಿಸುವ ಒಂದೇ ದೈವಾಂಶಕ್ಕೆ ಸೇರಿದವುಗಳು (ಇಲ್ಲಿ 'ಬ್ರಹ್ಮ' ಎಂದರೆ ಬ್ರಹ್ಮದೇವ ಎಂದರ್ಥವಲ್ಲ) ಇವನ್ನು ಕೇವಲ ತತ್ (ಅದು) ಎಂತಲೂ ಸಹ ಸಂಬೋಧಿಸುತ್ತಾರೆ. ಈ ಎರಡು ಪ್ರಸಿದ್ಧ ಮಂತ್ರಗಳು ಈ ವಿಷಯವನ್ನು ಸರಳವಾದ ಅಂತೆಯೇ ಆಳವಾದ ರೀತಿಯಲ್ಲಿ ವ್ಯಕ್ತಪಡಿಸಿವೆ.

'ಅಹಂ ಬ್ರಹ್ಮಸ್ಮೀ'–
ನಾನು ಬ್ರಹ್ಮನು (ನಾನು ಭಗವತ್ ಸ್ವರೂಪನಾದವನು)
'ತತ್–ತ್ವಮ್–ಅಸಿ'–
ನೀವೂ ಸಹ ಅದೇ, ನೀನೂ ಸಹ ಭಗವತ್ ಸ್ವರೂಪರನೇ.

APSCERT

The Upanishads also introduced the concept of Atman or Self - the divine essence that resides in every being but is ultimately one with brahman. It follows that everything in this world is connected and interdependent. This explains a common prayer that begins with **sarve bhavantu sukhinah,** or "May all creatures be happy", and goes on to wish them all to be free from disease and sorrow.



THINK ABOUT IT



Have you heard or read any other story that conveyed an important message? What values did it teach you?

Early in the 1st millennium BCE, several more schools of thought grew out of the Vedas. One of them was Yoga, which developed methods intended to achieve the realisation of brahman in one's consciousness. Together, these schools of thought became the foundations for what we call 'Hinduism' today.

Buddhism

Other schools of thought also emerged, which did not accept the authority of the Vedas and developed their own systems. One of them is Buddhism.

Consciousness
The state of being aware, for instance of something within oneself.

About two-and-a-half millenniums ago, a young prince named Siddhartha Gautama was born in Lumbini (today in Nepal)

Depending on the sources they use, scholars have come up with widely different conclusions as regards the precise year of his birth. In Chapter 3, (Timeline and sourses of History) we chose 560 BCE as an approximate year. In any case, it makes no difference to our story here. As the story goes, then, Siddhartha (Gautama) grew up living a protected life in the palace. One day, at the age of 29, he asked to be driven through the city in a chariot, and for the first time in his life came across an old man, a sick man, and a dead body. He also saw an ascetic, who appeared to be happy and at peace.

AP SCERT

ಉಪನಿಷತ್ತುಗಳು 'ಆತ್ಮನ್' ಅಥವಾ 'ಆತ್ಮ' ಎಂಬ ಭಾವವನ್ನು ಪರಿಚಯ ಮಾಡಿದವು. ಈ ದೈವತ್ವವು ಪ್ರತಿ ಜೀವಿಯಲ್ಲಿಯೂ ಇರುತ್ತದೆ. ಈ ಆತ್ಮ, ಬ್ರಹ್ಮ, ದೈವತ್ವ ಎಲ್ಲವೂ ಒಂದೇ. ಜಗತ್ತಿನಲ್ಲಿ ಪ್ರತಿಯೊಂದು ಒಂದಕ್ಕೊಂದು ಅವಲಂಬನೆ ಹೊಂದಿಯೇ ಇರುತ್ತವೆ. ಒಂದರ ಮೇಲೆ ಇನ್ನೊಂದು ಅಧಾರವಾಗಿ ಅನುಸಂಧಾನವನ್ನೊಳಗೊಂಡಿರುತ್ತದೆ. ಇದನ್ನು **"ಸರ್ವೆ ಭವಂತು ಸುಖಿನಃ"** ಎಂದು ಎಲ್ಲರೂ ಮಾಡುವ ಸಾಮೂಹಿಕ ಪ್ರಾರ್ಥನೆಯು ವಿವರಿಸುತ್ತದೆ. "ಸಮಸ್ತ ಜೀವರಾಶಿಗಳು ಸುಖದಿಂದಿರಲಿ" ಎಂಬುದೇ ಇದರ ಅರ್ಥ. ಅಂದರೆ ಎಲ್ಲಾ ಜೀವರಾಶಿಗಳು ರೋಗ, ದುಃಖವಿಲ್ಲದೆ ಇರಲಿ ಎಂದು ಕೋರಿಕೊಳ್ಳುತ್ತದೆ.



ಆಲೋಚಿಸಿ



ಮಹತ್ತರವಾದ ಸಂದೇಶವನ್ನು ನೀಡುವ ಇತರೆ ಕಥೆಗಳನ್ನು ಕೇಳಿರುವೆಯಾ ಅಥವಾ ಓದಿರುವೆಯಾ? ಅದು ನಿನಗೆ ಯಾವ ಮೌಲ್ಯವನ್ನು ಹೇಳಿತು?

1ನೇ ಶತಮಾನದ ಪೂರ್ವ ಸಾಮಾನ್ಯಶಕ **(BCE)** ದಿಂದ ವೇದಗಳಲ್ಲಿ ಇನ್ನೂ ಕೆಲವು ತಾತ್ವಿಕ ಧೋರಣೆಗಳು ಅಭಿವೃದ್ಧಿಯಾದವು. ಅದರಲ್ಲಿ ಯೋಗವೂ ಒಂದು. ಇದು ಒಬ್ಬ ವ್ಯಕ್ತಿ ಬ್ರಹ್ಮ ಸಾಕ್ಷಾತ್ಕಾರವನ್ನು ಹೊಂದುವ ವಿವಿಧ ಮಾರ್ಗಗಳನ್ನು ಅಭಿವೃದ್ಧಿಗೊಳಿಸಿತು. ಈ ತಾತ್ವಿಕ ಧೋರಣೆಗಳೇ ನಾವು ಹಿಂದೂ ಧರ್ಮವೆಂದು ಕರೆಯಲು ಬುನಾದಿ ಆದವು.

ಬೌದ್ಧ ಧರ್ಮ

ವೇದಗಳ ಪ್ರಬಲತೆಯನ್ನು ಒಪ್ಪಿಕೊಳ್ಳದೆ ತಾವೇ ತಮ್ಮ ವ್ಯವಸ್ಥೆಗಳನ್ನು ಮಾಡಿಕೊಂಡು ಕೆಲವು ತಾತ್ವಿಕ ಧೋರಣೆಗಳು ತಲೆಯೆತ್ತಿದ್ದವು. ಅದರಲ್ಲಿ ಬೌದ್ಧ ಧರ್ಮವೂ ಒಂದಾಗಿದೆ.

ಚೈತನ್ಯ: ತನ್ನ ಆಂತರಿಕ ವಿಷಯದ ಬಗ್ಗೆ ತಿಳುವಳಿಕೆಯನ್ನು ಹೊಂದಿರುವ ಸ್ಥಿತಿ.

ಎರಡುವರೆ ಸಾವಿರ ವರ್ಷಗಳ ಕೆಳಗೆ ಸಿದ್ಧಾರ್ಥ (ಗೌತಮನು) ಎಂಬ ಯುವರಾಜನು ಲುಂಬಿಣಿಯಲ್ಲಿ ಜನಿಸಿದನು. (ಪ್ರಸ್ತುತ ನೇಪಾಳದಲ್ಲಿದೆ)

ನಮಗೆ ದೊರೆತಿರುವ ಅಧಾರಗಳ ಪ್ರಕಾರ ಬುದ್ಧನ ಜೀವನದ ವರ್ಷವನ್ನು ಕುರಿತು ಇತಿಹಾಸಕಾರರು, ಪಂಡಿತರು ಬಹಳ ಭಿನ್ನವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. 3ನೇ ಅಧ್ಯಾಯದಲ್ಲಿ (ಇತಿಹಾಸದ ಕಾಲಾನುಕ್ರಮ ಹಾಗೂ ಆಧಾರಗಳು) ಪೂರ್ವ ಸಾಧಾರಣ ಶಕ 560 ಅನ್ನು ಒಂದು ಸಮೀಪ ವರ್ಷವನ್ನಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಆದಾಗ್ಯೂ ಇಲ್ಲಿನ ನಮ್ಮ ಕಥೆಗೆ ಯಾವುದೇ ವ್ಯತ್ಯಾಸವಿಲ್ಲ. ನಮ್ಮ ಕಥೆಯ ಪ್ರಕಾರ **ಸಿದ್ಧಾರ್ಥ ಅಥವಾ ಗೌತಮನು** ಅರಮನೆಯಲ್ಲಿ ಅತ್ಯಂತ ಸುರಕ್ಷಿತ ವೈಭವದ ಜೀವನವನ್ನು ಕಳೆಯುತ್ತಾ ಬೆಳೆದನು. ತನ್ನ 29ನೇ ವಯಸ್ಸಿನಲ್ಲಿ ಒಂದು ರಥದಲ್ಲಿ ಕುಳಿತು ನಗರ ಪ್ರದಕ್ಷಿಣೆಯನ್ನು ಮಾಡಿದನು. ಆ ಸಮಯದಲ್ಲಿ ಸಿದ್ಧಾರ್ಥನು ಜೀವನದಲ್ಲಿ ಮೊದಲಬಾರಿಗೆ ಒಬ್ಬ ಮುದುಕನನ್ನು, ಒಬ್ಬ ರೋಗಿಯನ್ನು, ಒಂದು ಶವವನ್ನು ಕಂಡನು. ಆತನು ಸಂತೋಷದಿಂದ ಹಾಗೂ ಪ್ರಶಾಂತವಾಗಿರುವ ಒಬ್ಬ ಸನ್ಯಾಸಿ/ಸಾಧುವನ್ನು ಸಹ ನೋಡಿದನು.

AP SCERT

Many stories from the Upanishads tell us the importance of asking questions, whether these questions come from men, women or children.

Shvetaketu and the seed of reality

(Chhandogya Upanishad)



Rishi Uddalaka Aruni sent his son, shvetaketu, to a gurukula to learn the Vedas. When Shvetaketu returned 12 years later, his father realised he had become very proud of his learning. So Uddalaka tested him with questions on the nature of brahman, which shvetaketu could not answer.

Uddalaka proceeded to explain how brahman, though invisible, is everywhere, just as the seed of a banyan fruit seems empty when you open it, but already contains the future banyan tree; or just as all kinds of different pots can be made out of the same clay. Similarly, everything around us has emerged from the same essence - brahman. He concluded his teaching with these words, "Everything consists of this subtle essence. ... You are That, Shvetaketu."

Nachiketa and his quest (Katha Upanishad)

Once, a man was giving away all his possessions in a ritual. As his son Nachiketa kept asking him which god he would be offered to, the father became angry and answered, "I give you to Yama" - that is, to the god of death.

Nachiketa, then, proceeded to Yama's world and, after a long wait, met the mighty god. One question was on his mind - "What happens after the death of the body?"

AP SCERT

ಪ್ರಶ್ನಿಸುವುದರ ಒಂದು ಪ್ರಾಮುಖ್ಯತೆಯನ್ನು ಉಪನಿಷತ್ತುಗಳಲ್ಲಿ ಅನೇಕ ಕಥೆಗಳು ನಮಗೆ ತಿಳಿಯಪಡಿಸುತ್ತವೆ. ಈ ಪ್ರಶ್ನೆಗಳು ಪುರುಷ ಅಥವಾ ಸ್ತ್ರೀ, ಮಕ್ಕಳಿಂದಾದರೂ ಕೇಳಬಹುದು.

ಶ್ವೇತಕೇತು ಹಾಗೂ ಸತ್ಯವೆಂಬ ಬೀಜ/ (ವಾಸ್ತವವೆಂಬ ಬೀಜ) (ಛಾಂದೋಗ್ಯ ಉಪನಿಷತ್ತು)



ಉದ್ದಾಳಕ ಅರುಣನೆಂಬ ಋಷಿ ತನ್ನ ಮಗನಾದ ಶ್ವೇತಕೇತುವನ್ನು ವೇದಗಳನ್ನು ಕಲಿಯಲು ಒಂದು ಗುರುಕುಲಕ್ಕೆ ಕಳುಹಿಸಿದನು. 12 ವರ್ಷಗಳ ನಂತರ ಶ್ವೇತಕೇತು ಮರಳಿ ಬಂದನು. ತಾನು ಗಳಿಸಿದ ಪಾಂಡಿತ್ಯಕ್ಕೆ ಆತನು ಹೆಮ್ಮೆಪಟ್ಟನೆಂದು ತಂದೆ ಗ್ರಹಿಸಿದನು. ಆದಕಾರಣ ಉದ್ದಾಳಕನು 'ಬ್ರಹ್ಮನ್' ಒಂದು ಸ್ವಭಾವವನ್ನು ಕುರಿತಾದ ಪ್ರಶ್ನೆಗಳಿಂದ ತನ್ನ ಮಗನನ್ನು ಪರೀಕ್ಷಿಸಿದನು. ಆದರೆ ಶ್ವೇತಕೇತು ಆ ಪ್ರಶ್ನೆಗಳಿಂದ ತನ್ನ ಮಗನನ್ನು ಪರೀಕ್ಷಿಸಿದನು. ಆದರೆ ಶ್ವೇತಕೇತು ಆ ಪ್ರಶ್ನೆಗಳಿಗೆ ಉತ್ತರಿಸಲಾರದೆ ಹೋದನು. 'ಬ್ರಹ್ಮನ್' ಅಗೋಚರವಾದದ್ದರಿಂದ ಎಲ್ಲಾ ಕಡೆಯೂ ಇರುವನೆಂದು ಉದ್ದಾಳಕನು ವಿವರಿಸಲು ಪ್ರಾರಂಭಿಸಿದನು. ಒಂದು ಆಲದ ಬೀಜವನ್ನು ತೆರೆದು ನೋಡಿದರೆ ಏನೂ ಇರುವುದಿಲ್ಲ. ಆದರೆ ಭವಿಷ್ಯದಲ್ಲಿ ಬೃಹತ್ ಆಲದ ಮರವು ಅದರಿಂದ ಉದ್ಭವಿಸುತ್ತದೆ ಎಂದು ಆತನು ವಿವರಿಸಿದನು. ಎಲ್ಲಾ ವಿಧವಾದಕುಂಬಗಳೂ ಒಂದೇ ಮಣ್ಣಿನಿಂದ ತಯಾರಾಗುತ್ತವೆ ಎಂದು ವಿವರಿಸಿದನು. ಅದೇ ರೀತಿ ನಮ್ಮ ಸುತ್ತಲೂ ಇರುವ ಪ್ರತಿ ಜೀವರಾಶಿ 'ಬ್ರಹ್ಮನ್' ಎಂಬ ವಸ್ತುವಿಂದ ಉದ್ಭವಿಸಿದೆ. 'ಈ ಸಕಲ ಚರಾಚರ ಸೃಷ್ಟಿಯಲ್ಲಿಯೂ ಅತೀ ಸೂಕ್ಷ್ಮವಾದ ಈ ಬ್ರಹ್ಮನೆಂಬ ವಸ್ತುವು ದೊರೆಯುತ್ತದೆ... ಅದು ನೀನೆ' ಓ ಶ್ವೇತಕೇತು! ಎಂಬ ಮಾತಿನೊಂದಿಗೆ ತನ್ನ ಬೋಧನೆಯನ್ನು ಉದ್ದಾಳಕನು ಮುಕ್ತಾಯಗೊಳಿಸಿದನು.


ನಚಿಕೇತ ಮತ್ತು ಅವನ ಅನ್ವೇಷಣೆ (ಕಥೋಪನಿಷತ್ತು)

ಒಂದಾನೊಂದು ಕಾಲದಲ್ಲಿ ಒಬ್ಬ ವ್ಯಕ್ತಿ ಯಜ್ಞದಲ್ಲಿನ ಭಾಗವಾಗಿ ತನ್ನ ಆಸ್ತಿಯನ್ನೆಲ್ಲಾ ದಾನ ಮಾಡಿದನು. ತನ್ನನ್ನು ಯಾವ ದೇವರಿಗೆ ಕೊಡಲಿದ್ದೀಯ ಎಂದು ತನ್ನ ತಂದೆಯನ್ನು ಕೇಳಿದನು. ಆಗ ತಂದೆಗೆ ಕೋಪ ಬಂದು ಆತನನ್ನು 'ಮರಣದೇವನಾದ ಯಮನಿಗೆ ಕೊಡುವೆನೆಂದು' ಹೇಳಿದನು. ಆನಂತರ ನಚಿಕೇತನು ಯಮಲೋಕಕ್ಕೆ ತೆರಳಿದನು. ದೀರ್ಘಕಾಲದ ನಿರೀಕ್ಷೆ ನಂತರ ಯಮನನ್ನು ಭೇಟಿಯಾದನು.


ಈ ದೇಹವು ಮರಣ ಹೊಂದಿದ ನಂತರ ಏನಾಗುವುದೆಂದು ನಚಿಕೇತನು ಪ್ರಶ್ನಿಸಿದನು. ಯಮನು ಉತ್ತರವನ್ನು ಕೊಡದೆ ಹಾರಿಕೊಳ್ಳಲು ಪ್ರಯತ್ನಿಸಿದನು. ಆದರೆ ನಚಿಕೇತನು ಅವನ ಪ್ರಶ್ನೆಗೆ ಉತ್ತರ ಬೇಕೆಂದು ಪಟ್ಟುಹಿಡಿದನು.

AP SCERT

Yama tried to avoid answering, but the boy persisted. Pleased, Yama explained that the Atman, or self, is hidden within all creatures. It is neither born, nor does it die; it is immortal. Having acquired this profound knowledge, Nachiketa returned to his father, who welcomed him joyfully.




The debate of Gargi and Yajnavalkya (Brihadaranyaka Upanishad)




Once, the wise king Janaka announced a prize for the winner of a philosophical debate. Yajnavalkya, a renowned rishi, came to the king's court and defeated many scholars until Gargi, a rishika, asked him a series of questions on the nature of the world, and finally on the nature of brahman. At that point, Yajnavalkya asked her to stop asking further questions. Later, however, Gargi resumed her questions and Yajnavalkya went on to explain how brahman is what makes the world, the seasons, the rivers and everything else possible.

AP SCERT

ಯಮನು ಸಂತಸಪಟ್ಟು 'ಆತ್ಮವು ಎಲ್ಲಾ ಜೀವಿಗಳಲ್ಲೂ ಅಡಗಿದೆ. ಅದು ಹುಟ್ಟು ಸಾವುಗಳಿಗೆ ಅತೀತವಾದದ್ದು. ಅದು ಅಮರವಾದದದು, ಅಂತ್ಯವಿಲ್ಲದದ್ದು ಎಂದು ವಿವರಿಸಿದನು. ಈ ಪದಗಳಲ್ಲಿ ಆಳವಾದ ಜ್ಞಾನವನ್ನು ಗ್ರಹಿಸಿದ ನಚಿಕೇತನು ಮನೆಗೆ ಮರಳಿ ಬರುತ್ತಾನೆ. ಆತನ ತಂದೆ ನಚಿಕೇತನನ್ನು ಸಂತೋಷದಿಂದ ಆಹ್ವಾನಿಸಿದನು.






ಗಾರ್ಗಿ– ಯಾಜ್ಞವಲ್ಕ್ಯರ ಸಂವಾದ (ಬೃಹದಾರಣ್ಯಕೋಪನಿಷತ್ತು)

ಒಂದಾನೊಂದು ಕಾಲದಲ್ಲಿ ಜ್ಞಾನಿಯಾದ ಜನಕ ಮಹಾರಾಜನು ತಾತ್ವಿಕ ಚರ್ಚೆಯಲ್ಲಿ ಜಯಗಳಿಸಿದವರಿಗೆ ಒಂದು ಬಹುಮಾನ ಕೊಡುವೆನೆಂದು ಪ್ರಕಟಿಸಿದನು. ಯಾಜ್ಞವಲ್ಕ್ಯನೆಂಬ ಹೆಸರಾಂತ ಋಷಿಯು ಆ ರಾಜನನ್ನು ಸಂದರ್ಶಿಸಿ ಅನೇಕ ಮಂದಿ ಪಂಡಿತರನ್ನು ವಾದದಲ್ಲಿ ಸೋಲಿಸಿದನು. ಆದರೆ ಗಾರ್ಗಿ ಎಂಬ ಬ್ರಹ್ಮವಾದಿನಿಯು ಪ್ರಪಂಚದ ಸ್ವಭಾವ. 'ಬ್ರಹ್ಮ'ದ ಸ್ವಭಾವಗಳನ್ನು ಕುರಿತು ಯಾಜ್ಞವಲ್ಕ್ಯನಿಗೆ ಸರಣಿ ಪ್ರಶ್ನೆಗಳನ್ನು ಕೇಳಿದಳು. ಆ ಸಂದರ್ಭದಲ್ಲಿ ಯಾಜ್ಞವಲ್ಕ್ಯನು ಪ್ರಶ್ನೆಗಳನ್ನು ಕೇಳುವುದನ್ನು ನಿಲ್ಲಿಸೆಂದು ಆಕೆಯನ್ನು ಕೇಳಿದನು. ಆನಂತರ ಗಾರ್ಗಿ ಮಾತ್ರ ತನ್ನ ಪ್ರಶ್ನೆಗಳ ಕೇಳುವುದನ್ನು ಬಿಡಲಿಲ್ಲ. 'ಬ್ರಹ್ಮ' ಹೇಗೆ ಇರುತ್ತದೆ. ಈ ವಿಶ್ವವು ಹೇಗೆ ನಿರ್ಮಾಣವಾಗಿದೆ. ಋತುಗಳು, ನದಿಗಳು ಮತ್ತು ಉಳಿದ ಪ್ರತಿ ವಸ್ತುವೂ ಹೇಗೆ ಉಂಟಾದವೆಂಬುದನ್ನು ಯಾಜ್ಞವಲ್ಕ್ಯನು ವಿವರಿಸಿದನು.

ARSCERT

Following this experience, Siddhartha decided to give up his palace life, leaving behind his wife and son. Travelling on foot as an ascetic, meeting other ascetics and scholars, he searched for the root cause of suffering in human life. After meditating for many days under a **pipal** tree at **Bodh Gaya** (today in Bihar), he attained enlightenment; he realised that avidya (ignorance) and attachment are the source of human suffering and conceived a method to remove these two causes. Siddhartha, then, became known as the **'Buddha'**, which means the **'enlightened'** or **'awakened'** one.

The Buddha started teaching what he had realised, including the idea of ahimsa, which is generally translated as **'non- violence'**, but originally means 'non-hurting' or 'non-injuring'. He also insisted on a sincere inner discipline. The following saying of his expresses this simply:




Ascetic: Someone who engages in a rigorous discipline to attain a higher consciousness.

Attachment: The condition of having a bond with someone or something, usually through sentiment or habit.

© SCERT

ಈ ಅನುಭವದ ನಂತರ ಸಿದ್ಧಾರ್ಥನು ತನ್ನ ಮಡದಿ ಮಗನನ್ನು ಪರಿತ್ಯಜಿಸಿ, ತನ್ನ ಅರಮನೆಯ ಜೀವನವನ್ನು ತ್ಯಜಿಸಬೇಕೆಂದು ನಿರ್ಧರಿಸಿದನು. ಸನ್ಯಾಸಿಯಾಗಿ ಕಾಲನಡಗೆಯಲ್ಲಿ ಪ್ರಯಾಣಿಸುತ್ತಾ ಇತರೆ ಸಾಧು ಸಂತರನ್ನು ಭೇಟಿಯಾಗುತ್ತಾ, ಮಾನವನ ಜೀವನದಲ್ಲಿನ ದುಃಖಕ್ಕೆ ಕಾರಣಗಳೇನೆಂಬುದನ್ನು ಅನ್ವೇಷಿಸಿದನು. ಬುದ್ಧಗಯಾ (ಬಿಹಾರ್) ದಲ್ಲಿ ಒಂದು ಬೋಧಿವೃಕ್ಷ (ಆಲದ ಮರ)ದ ಕೆಳಗೆ ಧ್ಯಾನಾಸಕ್ತನಾದ ನಂತರ ಆತನಿಗೆ ಜ್ಞಾನೋದಯವಾಯಿತು. ಅಶಿಕ್ಷಣ (ಅಜ್ಞಾನ) ಅನುಬಂಧವು ಮಾನವನ ದುಃಖಗಳಿಗೆ ಮೂಲಕಾರಣವೆಂದು ಆತನು ಅರಿತುಕೊಂಡನು. ಆ ಎರಡನ್ನೂ ನೀಗಿಸಿಕೊಳ್ಳಲು ಮಾನವ ದುಃಖವನ್ನು ತೊಲಗಿಸುವ ಒಂದು ಪದ್ಧತಿಯನ್ನು ರೂಪಿಸಿದನು.

ಸಿದ್ಧಾರ್ಥನು ಅಂದಿನಿಂದ ಬುದ್ಧನೆಂದು ಕರೆಯಲ್ಪಟ್ಟನು. 'ಬುದ್ಧ' ಎಂದರೆ 'ತಿಳಿದವ', 'ಅರಿತವ' ಅಥವಾ 'ಜ್ಞಾನಿ' ಎಂದರ್ಥ. ಬುದ್ಧನು ತಾನು ಕಂಡುಕೊಂಡ ಸತ್ಯಗಳನ್ನು ಬೋಧಿಸಲು ಆರಂಭಿಸಿದನು. ಅದರಲ್ಲಿ 'ಅಹಿಂಸೆ' ಎಂಬ ಭಾವನೆಯೂ ಇದೆ. ಇದನ್ನು ಸಾಮಾನ್ಯವಾಗಿ ಹಿಂಸಿಸದೇ ಇರುವುದೆಂದು ಅರ್ಥ ಮಾಡಿಕೊಳ್ಳುತ್ತೇವೆ. 'ಹಾನಿ ಮಾಡದೆ ಇರುವುದು' ಅಥವಾ 'ಗಾಯಿಗೊಳಿಸದಿರುವುದು' ಎಂಬುದು ಅಹಿಂಸೆಯ ಒಂದು ವಾಸ್ತವವಾದ ಅರ್ಥ. ಸತ್ಯ, ಪ್ರಮಾಣಿಕತೆಯಿಂದ ಕೂಡಿದ ಆಂತರಿಕ ಕ್ರಮಶಿಕ್ಷಣವನ್ನೂ ಸಹ ಈತನು ಒತ್ತಿ ಹೇಳಿದನು. ಆತನು ಹೇಳಿದ ಈ ಕೆಳಗಿನ ಮಾತು ಸುಲಭವಾಗಿ ಅರ್ಥವಾಗುವಂತೆ ಹೇಳುತ್ತದೆ.



ಸನ್ಯಾಸಿ: ಉನ್ನತವಾದ ಚೈತನ್ಯ ಸ್ಥಿತಿಯನ್ನು ಹೊಂದುವುದಕ್ಕೆ ಕಠಿಣವಾದ ಕ್ರಮಶಿಕ್ಷಣವನ್ನು ಪಾಲಿಸುವ ವ್ಯಕ್ತಿ.

ಅನುಬಂಧ: ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಅಥವಾ ವಸ್ತುವಿನೊಂದಿಗೆ ಇರುವ ನಂಟು/ಬಂಧ ಈ ಬಂಧವು ಒಂದು ಅಭ್ಯಾಸ ಅಥವಾ ಮಾನಸಿಕ ಅನುಬಂಧದ ಮೂಲಕ ಉಂಟಾಗುತ್ತದೆ.

© KR SCERT

"Not by water is one made pure, though
many people may bathe here [in sacred rivers].
But one is pure in whom truth and dharma reside.
Conquering oneself is greater than conquering
a thousand men on the battlefield a thousand times."

Monk: A man who, giving up the usual life in the world, dedicates himself to religious or spiritual pursuits. A monk usually takes vows, that is, commits himself to follow strict rules for a disciplined life.

Nun: The female equivalent of a monk.

The Buddha founded the **Sangha**, a community of bhikshus or monks (and, later, **bhikshunis** or **nuns**) who dedicated themselves to practising and spreading his teachings. His influence on India, and indeed the whole of Asia, was enormous, as we will discover later; it is still perceptible today.



This stone panel, some 1,800 years old, shows the Buddha teaching

© NCERT

ಅನೇಕರು ಇಲ್ಲಿ ಸ್ನಾನವನ್ನು ಮಾಡುತ್ತಾರೆ (ಪವಿತ್ರ ನದಿಯಲ್ಲಿ) ಆದಾಗ್ಯೂ ಕೇವಲ ನೀರಿನಿಂದಲೇ ಅವರು ಪವಿತ್ರರಾಗಲಾರರು. ಯಾರಲ್ಲಿ ಸತ್ಯ ಮತ್ತು ಧರ್ಮಗಳು ಅಡಗಿರುತ್ತವೆಯೇ ಅವರೇ ಪವಿತ್ರರು, ಪರಿಶುದ್ಧರು. ಒಬ್ಬ ವ್ಯಕ್ತಿ ತನ್ನನ್ನು ತಾನು ಜಯಿಸುವುದು ಯುದ್ಧರಂಗದಲ್ಲಿ ಸಾವಿರ ಜನರನ್ನು ಸಾವಿರ ಬಾರಿ ಜಯಿಸಿದಕ್ಕಿಂತಲೂ ಶ್ರೇಷ್ಠವಾದದ್ದು.

ಬುದ್ಧನು **ಸಂಘವನ್ನು** ಸ್ಥಾಪಿಸಿದನು. ಇದು ಭಿಕ್ಷುಗಳು (ಮತ್ತು ನಂತರದಲ್ಲಿ **ಭಿಕ್ಷುಣಿಯರು** ಅಥವಾ **ಸನ್ಯಾಸಿಯರ**ನ್ನೊಳಗೊಂಡ ಒಂದು ಸಮೂಹ). ಇವರು ಬುದ್ಧನ ಬೋಧನೆಗಳನ್ನು ಆಚಾರಕ್ಕೆ ತಂದು ವ್ಯಾಪಕಗೊಳಿಸಲು ತಮ್ಮನ್ನು ತಾವೇ ತೊಡಗಿಸಿಕೊಂಡರು. ಭಾರತ ದೇಶದಾದ್ಯಂತ ಹಾಗೂ ನಿಜವಾಗಿಯೂ ಏಷ್ಯಾ ಖಂಡದಾದ್ಯಂತ ಈತನ ಅಪಾರ ಪ್ರಭಾವದ ಬೆಳಕು ಚೆಲ್ಲಲಾಯಿತು. ಅದು ಇಂದಿಗೂ ಸ್ಪಷ್ಟವಾಗಿ ನಮಗೆ ಗೋಚರಿಸುತ್ತಿದೆ.

ಬೌದ್ಧ ಸನ್ಯಾಸಿ: ಪ್ರಾಪಂಚಿಕ ಜೀವನವನ್ನು ಬಿಟ್ಟು ತನಗೆ ತಾನೇ ಧರ್ಮ ಸಂಬಂಧಿತವಾದ ಅಥವಾ ಆಧ್ಯಾತ್ಮಿಕ ಆಶಯಗಳ ಸಾಧನೆಗೆ ಹೆಸರಾದ ವ್ಯಕ್ತಿ. ಸನ್ಯಾಸಿಯು ಸಹಜವಾಗಿ ಕ್ರಮಶಿಕ್ಷಣ, ಶಿಸ್ತಿನಿಂದ ಕೂಡಿದ ಜೀವನಕ್ಕಾಗಿ ಕಠಿಣವಾದ ನಿಮಯಗಳನ್ನು ಅನುಸರಿಸುನೆಂದು ಪ್ರಮಾಣ ಮಾಡುತ್ತಾನೆ.

ಸನ್ಯಾಸಿನಿ: ಪುರುಷ ಸನ್ಯಾಸಿಗಳಂತೆ ಜೀವಿಸುವ ಸ್ತ್ರೀಯರನ್ನು ಸನ್ಯಾಸಿನಿ ಎನ್ನುವರು.



ಬುದ್ಧನು ಬೋಧಿಸುತ್ತಿರುವಂತೆ ತೋರಿಸುವ ಈ ಶಿಲಾ ಫಲಕವು 1800 ವರ್ಷಗಳ ಕಾಲದ್ದು.

© NCERT

LET'S EXPLORE

→ Discuss the way the Buddha is depicted in the above panel.

→ Can you name some states of India or some other countries where Buddhism is a major religion even today? Try to plot these on a world map.

Jainism

Jainism is another important school of thought that became widespread at the same time, although its roots are said to be much more ancient. Just like Siddhartha Gautama, Prince **Vardhamana** was born into a royal family in the early 6th century BCE. His birthplace was near the city of **Vaishali**, in modern-day Bihar. At the age of 30, he decided to leave his home and go in search of spiritual knowledge. He practised an ascetic discipline and, after 12 years, achieved **'infinite knowledge'** or **supreme wisdom**. He became known as **'Mahavira'**, or **'great hero'**, and started preaching what he had realised.



A tradional painting of Mahavira

APSCERT

DON'T MISS OUT

- 2024 ವಿಜಯವಾಡ ಪ್ರವಾಹದ ಸಮಯದಲ್ಲಿ ರಸ್ತೆಗಳು ನದಿಗಳಾಗಿ ಮಾರ್ಪಟ್ಟಿದ್ದವು. ಜನ ಜೀವನ ದುಸ್ತರವಾಗಿತ್ತು. ಬಹುತೇಕ ಎಲ್ಲಾ ಅಂಗಡಿಗಳು ಮುಚ್ಚಲ್ಪಟ್ಟಿದ್ದವು. ಸಾರ್ವಜನಿಕ ಸೇವೆಗಳಿಗೆ ತಡೆಯುಂಟಾಯಿತು. ಅನೇಕ ಖಾಸಗೀ ಗುಂಪುಗಳು ವಿಶೇಷವಾಗಿ ಆಧ್ಯಾತ್ಮಿಕ ಮತ್ತು ಧಾರ್ಮಿಕ ಸಂಸ್ಥೆಗಳು ದೊಡ್ಡ ಪ್ರಮಾಣದಲ್ಲಿ ಆಹಾರ ತಯಾರಿ, ಅಗತ್ಯವಿರುವ ಜನರಿಗೆ ಹಂಚುವ ಕೆಲಸವನ್ನು ಮಾಡಿದರು.
- ಪ್ರತಿಫಲಾಪೇಕ್ಷೆಯಿಲ್ಲದೆ ಸಮುದಾಯದ ಪ್ರಯೋಜನಕ್ಕಾಗಿ ಏನನ್ನಾದರೂ ಮಾಡಲು ಜನರು ಒಗ್ಗೂಡಿದ ಉದಾಹರಣೆಗಳು ಇನ್ನೂ ಹಲವಾರಿವೆ. ನೀವು ಯಾವುದನ್ನಾದರೂ ಕೇಳಿದ್ದೀರಾ?

ಮೇಲಿನ ನಿಜ ಜೀವನದ ಕಥೆಗಳು ಗ್ರಾಮೀಣ ಸನ್ನಿವೇಶದ ಸಮುದಾಯ ಚಿತ್ರಣವನ್ನು ನೀಡುತ್ತವೆ. ಅಂತಹ ಸಮುದಾಯಗಳು ನಗರ ಪ್ರದೇಶದಲ್ಲಿಯೂ ಇವೆ. ಆದರೆ ಅವು ಸ್ವಲ್ಪ ವಿಭಿನ್ನವಾಗಿ ಕಾರ್ಯ ನಿರ್ವಹಿಸಬಹುದು. ಮತ್ತೊಂದು ನಿಜ ಜೀವನದ ಕಥೆಯ ಮೂಲಕ ಇದನ್ನು ಪರಿಶೀಲಿಸೋಣ.

AP SCERT

HALMA













© NCERT

ಹಲ್ಮಿ













© NCERT



More than 20 years ago, in an area of Ahmedabad (Gujarat), **Kamal Parmar**, owner of a small auto-fabrication workshop, noticed a group of underprivileged children on the street. Some had dropped out of school, while others had never been to school. Kamal started giving them tuition from 5:30 to 9:30 pm every day, after his regular work hours. He also provided the kids with a free dinner. Soon, 150 children were attending those classes regularly and were deeply interested in the lessons!

A few teachers from a local school noticed the classes and joined the teaching for a while. One of them observed, "These children don't get proper benches to sit on, have no **'silence zone'** classrooms and the vehicles passing by make lots of noise, yet they pay all their attention to what the teachers tell them. This touched my heart. The love and affection I got from them was unbelievable. "Some older children who were attending regular schools also joined as volunteers to teach in Kamal's classes. One of them remarked, "We went there to teach, instead we learnt a lot from them."

→ Discuss this story in your class. What kind of attitude towards the community does it reveal?

→ What values get reflected in Kamal Parmar's initiative?

→ Think about those underprivileged children. Do you think society has been unfair to them?

→ What should society do to make sure that all children get access to education?

APSCERT



ಇಪ್ಪತ್ತು ವರ್ಷಗಳ ಹಿಂದೆ ಗುಜರಾತ್‌ನ ಅಹಮದಾಬಾದ್‌ನಲ್ಲಿನ ಒಂದು ಪ್ರದೇಶದಲ್ಲಿ ಸಣ್ಣ ಆಟೋ ಫ್ಯಾಬ್ರಿಕೇಷನ್ ವರ್ಕ್‌ಶಾಪ್‌ನ ಯಜಮಾನರಾದ ಕಮಲ್ ಪರ್ಮಾರರು ಕೆಲವು ಸೌಲಭ್ಯವಂಚಿತ ಮಕ್ಕಳನ್ನು ನೋಡಿದರು. ಅವರಲ್ಲಿ ಕೆಲವರು ಶಾಲೆ ಬಿಟ್ಟವರಾಗಿದ್ದರು, ಇತರರು ಎಂದಿಗೂ ಶಾಲೆಗೆ ಹೋಗಿರಲಿಲ್ಲ. ಕಮಲ್ ತನ್ನ ನಿಯಮಿತ ಕೆಲಸದ ಸಮಯದ ನಂತರ ಪ್ರತಿದಿನ ಸಂಜೆ 5.30 ರಿಂದ ರಾತ್ರಿ 9.30ರವರೆಗೆ ಅವರಿಗೆ ಬೋಧಿಸಲು ಆರಂಭಿಸಿದರು. ಅವರು ಮಕ್ಕಳಿಗೆ ಉಚಿತ ಭೋಜನವನ್ನು ಸಹ ನೀಡಿದರು. ಕೆಲವೇ ದಿನಗಳಲ್ಲಿ 150 ಮಕ್ಕಳು ತರಗತಿಗೆ ಹಾಜರಾಗುತ್ತಿದ್ದರು ಮತ್ತು ಪಾಠಗಳಲ್ಲಿ ಆಳವಾದ ಆಸಕ್ತಿ ಹೊಂದಿದ್ದರು!

ಸ್ಥಳೀಯ ಶಾಲೆಯೊಂದರ ಕೆಲ ಶಿಕ್ಷಕರು ಆ ತರಗತಿಗಳನ್ನು ಗಮನಿಸಿ ಅವರೂ ಸ್ವಲ್ಪ ಸಮಯ ಬೋಧಿಸಲು ಆರಂಭಿಸಿದರು. ಅವರಲ್ಲಿ ಒಬ್ಬರು, "ಈ ಮಕ್ಕಳಿಗೆ ಕುಳಿತುಕೊಳ್ಳಲು ಸರಿಯಾದ ಬೆಂಚುಗಳಿಲ್ಲ, ನಿಶ್ಯಬ್ಧ ವಾತಾವರಣದ ಅನುಕೂಲಕರ ತರಗತಿ ಕೊಠಡಿಗಳಿಲ್ಲ. ರಸ್ತೆಯಲ್ಲಿ ಹಾದು ಹೋಗುವ ವಾಹನಗಳು ಸಾಕಷ್ಟು ಶಬ್ಧ ಮಾಡುತ್ತವೆ. ಆದರೂ ಶಿಕ್ಷಕರು ಬೋಧಿಸುವ ವಿಷಯದ ಮೇಲೆಯೇ ಸಂಪೂರ್ಣ ಗಮನ ಕೇಂದ್ರೀಕರಿಸುತ್ತಾರೆ. ಇದು ನಮ್ಮ ಹೃದಯವನ್ನು ಸ್ಪರ್ಶಿಸಿತು. ಅವರಿಂದ ನಮಗೆ ದೊರೆತ ಪ್ರೀತಿ ವಾತ್ಸಲ್ಯಗಳು ನಂಬಲಸಾಧ್ಯವಾಗಿತ್ತು" ಎಂದು ಬರೆದುಕೊಂಡಿದಾರೆ. ನಿಯಮಿತವಾಗಿ ಶಾಲೆಗೆ ಹೋಗುತ್ತಿದ್ದ ಹಿರಿಯ ವಿದ್ಯಾರ್ಥಿಗಳು ಕೆಲವರು ಕಮಲ್ ಅವರ ತರಗತಿಯಲ್ಲಿ ಕಲಿಸಲು ಸ್ವಯಂ ಪ್ರೇರಿತರಾಗಿ ಸೇರಿಕೊಂಡರು. ಅವರಲ್ಲೊಬ್ಬರು 'ನಾವು ಅವರಿಗೆ ಕಲಿಸಲು ಹೋಗುತ್ತಿದ್ದೇವೆ, ಆದರೆ ಅದರ ಬದಲು ನಾವು ಅವರಿಂದ ಬಹಳಷ್ಟು ಕಲಿತಿದ್ದೇವೆ' ಎಂದು ಹೇಳಿದರು.

→ ಈ ಕಥೆಯನ್ನು ನಿಮ್ಮ ತರಗತಿಯಲ್ಲಿ ಚರ್ಚಿಸಿರಿ, ಇದು ಸಮುದಾಯದ ಬಗ್ಗೆ ಯಾವ ರೀತಿಯ ಮನೋಭಾವವನ್ನು ತೋರಿಸುತ್ತದೆ?

→ ಕಮಲ್ ಪರ್ಮಾರ್ ಅವರ ಪ್ರವೃತ್ತಿಯಲ್ಲಿ ಯಾವ ಮೌಲ್ಯಗಳು ಪ್ರತಿಫಲಿಸುತ್ತವೆ?


→ ಆ ಸೌಲಭ್ಯವಂಚಿತ ಮಕ್ಕಳ ಬಗ್ಗೆ ಯೋಚಿಸಿ, ಸಮಾಜವು ಅವರಿಗೆ ಅನ್ಯಾಯ ಮಾಡಿದೆಎಂದು ಭಾವಿಸುವಿರಾ?

→ ಮಕ್ಕಳೆಲ್ಲರಿಗೂ ಶಿಕ್ಷಣ ದೊರೆಯಲು ಸಮಾಜವು ಏನು ಮಾಡಬೇಕು?

AP SCERT

New types of communities have also emerged in the last 30 or 40 years. Residents' Welfare Associations in many urban areas are examples of communities that make their own rules and regulations. Those could be rules about waste management, cleanliness of common areas, taking care of pets, and so on. People living in the community participate in making such rules and regulations.

Communities are ultimately interdependent. The same Residents' Welfare Associations, for instance, will depend on the trading community for supplies and also on municipal workers to handle waste. In our complex societies, everyone depends on a number of other people and communities.



APSCERT

LET'S EXPLORE

❖ Make a list of all people outside your family that are supporting you through their work in one way or another.

We now understand that 'community' is a flexible concept.

A few more examples.

❖ A Jati or subdivision of it is also often called a community.

❖ A group of people of a particular religion, region, com-mon work or interest, especially a smaller group, may also be called a community; for instance, 'Mumbai's Parsi community', 'Chennai's Sikh community', 'America's Indian community', 'Kerala's scientific community', 'our school's art community', 'the village's farming community', and so on' The list is endless!

ಕಳೆದ 30 ಇಲ್ಲವೆ 40 ವರ್ಷಗಳಲ್ಲಿ ಹೊಸಬಗೆಯ ಸಮುದಾಯಗಳು ಹೊರಮೊಮ್ಮಿವೆ. ಅನೇಕ ನಗರ ಪ್ರದೇಶಗಳಲ್ಲಿ ತಮ್ಮದೇ ಆದ ನಿಯಮಗಳು, ನಿಬಂಧನೆಗಳನ್ನು ರೂಪಿಸುವ ಸಮುದಾಯಗಳಾದ **"ನಿವಾಸಿಗಳ ಕಲ್ಯಾಣ ಸಂಘಗಳು"** ಇದಕ್ಕೆ ಉದಾಹರಣೆಯಾಗಿವೆ. ಅವು ತ್ಯಾಜ್ಯ ನಿರ್ವಹಣೆ, ಸಾಮಾನ್ಯ ಪ್ರದೇಶಗಳ ಸ್ವಚ್ಛತೆ, ಸಾಕು ಪ್ರಾಣಿಗಳ ಸಂರಕ್ಷಣೆಯಂತಹ ಅನೇಕ ವಿಷಯಗಳ ಬಗೆಗಿನ ನಿಯಮಗಳಾಗಿರಬಹುದು. ಸಮುದಾಯದಲ್ಲಿ ವಾಸಿಸುವ ಜನರು ಇಂತಹ ನಿಯಮ ಮತ್ತು ನಿಬಂಧನೆಗಳನ್ನು ರೂಪಿಸುವಲ್ಲಿ ಭಾಗವಹಿಸುತ್ತಾರೆ.

ಅಂತಿಮವಾಗಿ ಸಮುದಾಯಗಳೆಲ್ಲವೂ ಪರಸ್ಪರ ಅವಲಂಬಿತವಾಗಿವೆ. ಉದಾಹರಣೆಗೆ ನಿವಾಸಿಗಳ ಕಲ್ಯಾಣ ಸಂಘಗಳು ಈ ಕೆಳಗಿನವುಗಳನ್ನು ಅವಲಂಬಿಸಿರುತ್ತದೆ. ಸರಬರಾಜುಗಳಿಗಾಗಿ ವ್ಯಾಪಾರಿ ಸಮುದಾಯ ಮತ್ತು ತ್ಯಾಜ್ಯ ನಿರ್ವಹಣೆಗಾಗಿ ಪುರಸಭೆ ಕಾರ್ಮಿಕರ ಮೇಲೆ ಹೀಗೆ ನಮ್ಮ ಸಂಕೀರ್ಣ ಸಮಾಜಗಳಲ್ಲಿ ಪ್ರತಿಯೊಬ್ಬರೂ ಅನೇಕ ಜನರು ಮತ್ತು ಸಮುದಾಯಗಳನ್ನು ಅವಲಂಬಿಸಿದ್ದಾರೆ.



APSCERT

ಅನ್ವೇಷಿಸೋಣ

❖ ನಿಮ್ಮ ಕುಟುಂಬ ಸದಸ್ಯರಲ್ಲದೇ ಹೊರಗಿನ ಜನರು ತಮ್ಮ ಕೆಲಸದ ಮೂಲಕ ಒಂದಲ್ಲಾ ಒಂದು ರೀತಿಯಲ್ಲಿ ನಿಮ್ಮನ್ನು ಹೇಗೆಲ್ಲಾ ಬೆಂಬಲಿಸುತ್ತಿದ್ದಾರೆ ಎಂಬುದರ ಕುರಿತು ಒಂದು ಪಟ್ಟಿ ತಯಾರಿಸಿ.

'ಸಮುದಾಯ' ವೆಂಬುದು ಒಂದು ಸರಳವಾದ ಪರಿಕಲ್ಪನೆ ಎಂದು ನಮಗೀಗ ಅರ್ಥವಾಗಿದೆ.

ಇದಕ್ಕೆ ಇನ್ನಷ್ಟು ಉದಾಹರಣೆಗಳು:

❖ ಒಂದು ಜಾತಿ ಅಥವಾ ಅದರ ಉಪವಿಭಾಗವನ್ನು ಕೆಲವುಬಾರಿ ಸಮುದಾಯ ಎಂದು ಕರೆಯುತ್ತಾರೆ.

❖ ಒಂದು ನಿರ್ದಿಷ್ಟ ಜಾತಿ, ಪ್ರಾಂತ್ಯ ಕೆಲಸ ಅಥವಾ ಆಸಕ್ತ ಜನರ ಗುಂಪು, ವಿಶೇಷವಾಗಿ ಒಂದು ಸಣ್ಣ ಗುಂಪಾದರೂ ಸಮುದಾಯ ಎಂದು ಕರೆಯಬಹುದು. ಉದಾಹರಣೆಗೆ 'ಮುಂಬೈನ ಪಾರ್ಸಿ ಸಮುದಾಯ', 'ಚೆನ್ನೈನ ಸಿಖ್ ಸಮುದಾಯ', ನಮ್ಮ ಶಾಲೆಯ 'ಕಲಾ ಸಮುದಾಯ', 'ಅಮೇರಿಕಾದ ಭಾರತೀಯ ಸಮುದಾಯ', 'ಕೇರಳದ ವೈಚಾರಿಕ ಸಮುದಾಯ', 'ಗ್ರಾಮದ ರೈತ ಸಮುದಾಯ' ಮೊದಲಾದವು ಈ ಪಟ್ಟಿಗೆ ಅಂತ್ಯವಿಲ್ಲ.

❖ In your school, you may be part of different communities" your class, of course, but also the sports community, the National Service Scheme, the National Cadet Corps, a science or drama club, etc.

LET'S EXPLORE

→ What type of communities are you part of?

→ Is there a club that you are a part of in schoo? How does it function?



Before we move on ...

→ Family is the foundation of human society. Ideally, members of a family support each other in their many duties and tasks.

→ Community, a bigger unit, also implies that people do their best to support each other. Community can be defined in several ways and there are many kinds of community.

→ Ultimately, communities are interdependent.

Questions, activities and projects

1. What are some of the rules you follow in your family and neighbourhood? Why are they important?
2. A village is experiencing a shift from joint families to nuclear families. Apply social, economic, and educational factors to explain this change. Explain briefly.
3. Do you think some rules are unfair to a few people in the family or community? Why?
4. Describe several situations that you have observed where community support makes a difference. You can draw or write about these.

AP SCERT

❖ ನಿಮ್ಮ ಶಾಲೆಯಲ್ಲಿ ನೀವು ವಿವಿಧ ಸಮುದಾಯಗಳ ಭಾಗವಾಗಿರಬಹುದು, ನಿಮ್ಮ ತರಗತಿಯ ಸಮುದಾಯದೊಂದಿಗೆ ಕ್ರೀಡಾ ಸಮುದಾಯ, ರಾಷ್ಟ್ರೀಯ ಸೇವಾ ಯೋಜನೆ (NSS), ನ್ಯಾಷನಲ್ ಕೆಡೆಟ್ ಕಾರ್ಪ್ಸ್ (NCC), ವಿಜ್ಞಾನ ಅಥವಾ ನಾಟಕ ಕ್ಲಬ್ ಇತ್ಯಾದಿಗಳು ಆಗಿರಬಹುದು.

ಅನ್ವೇಷಿಸೋಣ

→ ನೀವು ಯಾವ ಯಾವ ಸಮುದಾಯಗಳ ಭಾಗವಾಗಿದ್ದೀರಿ?

→ ನೀವು ಸದಸ್ಯರಾಗಿರುವ ಯಾವುದಾದರೂ ಸಮುದಾಯ (ಕ್ಲಬ್) ನಿಮ್ಮ ಶಾಲೆಯಲ್ಲಿದೆಯೇ? ಅದು ಹೇಗೆ ಕಾರ್ಯನಿರ್ವಹಿಸುತ್ತದೆ?



ಮುಗಿಸುವ ಮುನ್ನ ...

→ ಕುಟುಂಬವು ಮಾನವ ಸಮಾಜದ ಬುನಾದಿ. ಕುಟುಂಬದ ಸದಸ್ಯರು ತಮ್ಮ ಅನೇಕ ಕರ್ತವ್ಯಗಳಲ್ಲಿ ಮತ್ತು ಕೆಲಸಗಳಲ್ಲಿ ಪರಸ್ಪರ ಸಹಾಯಕರಾಗಿ ಆದರ್ಶವಂತರಾಗಿರುತ್ತಾರೆ.

→ ಸಮಾಜವೆಂಬ ದೊಡ್ಡ ಸಮೂಹವೂ ಸಹ ಜನರು ಒಬ್ಬರಿಗೊಬ್ಬರು ಸಾಧ್ಯವಾದ ಸಹಾಯ ಮಾಡಬೇಕೆಂದು ಸೂಚಿಸುತ್ತದೆ. 'ಸಮುದಾಯ'ವನ್ನು ಹಲವು ರೀತಿಯಲ್ಲಿ ವ್ಯಾಖ್ಯಾನಿಸಬಹುದು ಮತ್ತು ಅನೇಕ ರೀತಿಯ ಸಮುದಾಯಗಳಿವೆ.

→ ಅಂತಿಮವಾಗಿ ಸಮುದಾಯಗಳು ಪರಸ್ಪರ ಅವಲಂಬಿತವಾಗಿವೆ.

ಪ್ರಶ್ನೆಗಳು, ಚಟುವಟಿಕೆಗಳು ಮತ್ತು ಯೋಜನೆಗಳು

1. ನಿಮ್ಮ ಕುಟುಂಬದ ಮತ್ತು ನೆರೆಹೊರೆಯಲ್ಲಿ ನೀವು ಪಾಲಿಸುವ ಕೆಲವು ನಿಯಮಗಳು ಯಾವುವು? ಅವು ಏಕೆ ಮುಖ್ಯ?
2. ಒಂದು ಗ್ರಾಮವು ಅವಿಭಕ್ತ ಕುಟುಂಬಗಳಿಂದ ವಿಭಕ್ತ ಕುಟುಂಬಗಳ ಬದಲಾವಣೆಗೆ ಗುರಿಯಾಗಿದೆ. ಸಾಮಾಜಿಕ ಆರ್ಥಿಕ ಮತ್ತು ಶೈಕ್ಷಣಿಕ ಕಾರಣಗಳನ್ನು ಆಧರಿಸಿ, ಈ ಬದಲಾವಣೆಯನ್ನು ಸಂಕ್ಷಿಪ್ತವಾಗಿ ವಿವರಿಸಿರಿ.
3. ಕುಟುಂಬ ಅಥವಾ ಸಮುದಾಯದ ಕೆಲವು ನಿಯಮಗಳು ಕೆಲವರಿಗೆ ಅನ್ಯಾಯ ಉಂಟು ಮಾಡಿವೆಯೆಂದು ನೀವು ಭಾವಿಸುವಿರಾ? ಹಾಗಾದರೆ ಏಕೆ?
4. 'ಸಮುದಾಯಿಕ ಬೆಂಬಲವು ಅತ್ಯಂತ ಕ್ಲಿಷ್ಟ ಸಮಯದಲ್ಲಿ ಬೃಹತ್ ಬದಲಾವಣೆಯನ್ನು ತರುತ್ತದೆ' ಈ ಹೇಳಿಕೆಗೆ ಸಂಬಂಧಿಸಿದಂತೆ ನೀವು ಗಮನಿಸಿದ ಕೆಲವು ಸನ್ನಿವೇಶಗಳನ್ನು ಬರೆಯಿರಿ ಅಥವಾ ಚಿತ್ರಿಸಿರಿ.

AP SCERT

CHAPTER

7

THE VALUE OF WORK

H8F7T1

Learning Outcomes

The student will be able to-

- Differentiate between economic and non-economic activities. CG - 9
- Recognise the importance of seva or selfless service as a part of non-economic activities. CG -1
- Understand how non-economic activities contribute to the welfare of the society. CG -1


"When you are doing any work, do not think of anything beyond. Do it as worship, as the highest worship, and devote your whole life to it for the time being."

— Swami Vivekananda

The Big Questions ?

1. *What are the different types of activities that people engage in?*
2. *What is their contribution to our everyday lives?*

Anu and Kabir were playing in the park when they saw their neighbour, Geeta Aunty, getting out of a taxi. She was returning home from work and was in her uniform. A pilot in the Indian Air Force, she is the pride of the whole town.



AP SCERT

ಅಧ್ಯಾಯ

7

ಕೆಲಸದ ಮೌಲ್ಯ

L8J8U1

ಕಲಿಕೆಯ ಫಲಗಳು

ವಿದ್ಯಾರ್ಥಿಗಳು ಈ ಕೆಳಗಿನವುಗಳನ್ನು ಮಾಡಬಲ್ಲರು.

- ಆರ್ಥಿಕ,ಆರ್ಥಿಕೇತರ ಚಟುವಟಿಕೆಗಳ ನಡುವಿನ ವ್ಯತ್ಯಾಸವನ್ನು ಹೇಳುತ್ತಾರೆ. CG - 9
- ಆರ್ಥಿಕೇತರ ಚಟುವಟಿಕೆಯ ಭಾಗವಾಗಿ ಸೇವೆ/ನಿಸ್ವಾರ್ಥಸೇವೆಯೊಂದರ ಪ್ರಾಮುಖ್ಯತೆಯನ್ನುಗುರ್ತಿಸುತ್ತಾರೆ. CG -1
- ಆರ್ಥಿಕೇತರ ಚಟುವಟಿಕೆಗಳು ಸಮಾಜದ ಯೋಗಕ್ಷೇಮಕ್ಕೆ ಹೇಗೆ ಸಹಕಾರಿಯಾಗುತ್ತವೆ ಎಂಬುದನ್ನು ಅರ್ಥೈಸಿ ಕೊಳ್ಳುತ್ತಾರೆ. CG -1


"ನೀವು ಯಾವುದಾದರೊಂದು ಕೆಲಸವನ್ನು ಮಾಡುತ್ತಿದ್ದರೆ, ಆ ಕೆಲಸದ ಬಗ್ಗೆ ಹೊರತು ಬೇರೆ ಯಾವ ಆಲೋಚನೆ ಮಾಡಬಾರದು. ಆ ಕೆಲಸವನ್ನು ಆರಾಧ್ಯ ದೈವವಾಗಿ ಭಾವಿಸಿ, ಆ ಕೆಲಸಕ್ಕೆ ನಿಮ್ಮ ಪೂರ್ಣ ಜೀವನವನ್ನು ಅಂಕಿತಗೊಳಿಸಿರಿ".

–ಸ್ವಾಮಿ ವಿವೇಕಾನಂದ


ಪ್ರಮುಖ ಪ್ರಶ್ನೆಗಳು ?

1. ಪ್ರಜೆಗಳು ಭಾಗಿಯಾಗಿರುವ ವಿವಿಧ ಬಗೆಯ ಕಾರ್ಯ ಚಟುವಟಿಕೆಗಳನ್ನು ತಿಳಿಸಿ.
2. ನಮ್ಮ ದೈನಂದಿನ ಜೀವನದಲ್ಲಿ ಅವುಗಳ ಪಾತ್ರವೇನು?

ಅನು ಮತ್ತು ಕಬೀರ್ ಉದ್ಯಾನವನದಲ್ಲಿ ಆಡಿಕೊಳ್ಳುತ್ತಿರುವಾಗ ತಮ್ಮ ಪಕ್ಕದ ಮನೆಯ ಗೀತಾಳ ಅತ್ತೆ ಟ್ಯಾಕ್ಸಿ ಇಳಿಯುವುದನ್ನು ಕಂಡರು.ಅವರು ತಮ್ಮ ಕೆಲಸವನ್ನು ಮುಗಿಸಿಕೊಂಡು ಸಮವಸ್ತ್ರ(uniform)ದಲ್ಲಿ ಮನೆಗೆ ವಾಪಸ್ ಬರುತ್ತಿದ್ದಾರೆ. ಭಾರತದ ವಾಯುಸೇನೆಯಲ್ಲಿ ಪೈಲಟ್ ಆಗಿ ಕೆಲಸ ಮಾಡುವ ಅವರು, ನಮ್ಮ ನಗರಕ್ಕೆ ಹೆಮ್ಮೆಯ ವಿಷಯ.




AP SCERT




... providing free Geography classes to the neighbourhood kids ...



... tending to our vegetable garden, and ...



... running errands for the home.



My parents run a shop that sells uniforms and other ready-made garments. Appa leaves early in the morning and Maa joins him in the shop after we leave for school.



Maa is usually back by the time we return home from school. She also contributes to a voluntary group that teaches knitting to the women in the community.




Do you remember my elder brother Rohan? You met him when he came to pick me up from school.
He is a software engineer and works in a company that makes computer applications. On the weekends he volunteers to teach computer skills to those who have joined the youth development programme of the nearby college.



Wow, Anu, everyone around us does so many things every day!


APSCERT




...ಅಕ್ಕಪಕ್ಕದಲ್ಲಿರುವ ಮಕ್ಕಳಿಗೆ ಉಚಿತವಾಗಿ ಭೂಗೋಳಶಾಸ್ತ್ರ ತರಗತಿಗಳನ್ನು ಬೋಧಿಸುತ್ತಾ...



...ನಮ್ಮ ತರಕಾರಿಗಳ ತೋಟವನ್ನು ಬೆಳೆಸುತ್ತಾ, ಮತ್ತು ...



...ಮನೆಗೆ ಬೇಕಾದ ಕೆಲಸಗಳನ್ನು ಮಾಡುವುದು.



ನಮ್ಮ ತಂದೆತಾಯಿಯರು ಸಮವಸ್ತ್ರ ಬಟ್ಟೆಗಳು ಮತ್ತು ರೆಡಿಮೇಡ್ ಬಟ್ಟೆಗಳು ಮಾರುವ ಅಂಗಡಿಯನ್ನು ನಡೆಸುತ್ತಾರೆ. ತಂದೆ ಬೆಳಿಗ್ಗೆ ಬೇಗನೆ ಹೊರಡುತ್ತಾರೆ. ಅಮ್ಮ ನಾವು ಶಾಲೆಗೆ ಹೋದ ನಂತರ ಅಂಗಡಿಗೆ ಹೋಗಿ ಅಪ್ಪನೊಂದಿಗೆ ಸೇರಿ ಕೆಲಸ ಮಾಡುತ್ತಾರೆ.



ಸಾಮಾನ್ಯವಾಗಿ ನಾವು ಶಾಲೆಯಿಂದ ಮರಳಿ ಬರುವ ಹೊತ್ತಿಗೆ ಅಮ್ಮ ಮನೆಗೆ ಹಿಂದಿರುಗುತ್ತಾರೆ. ಸಮಾಜದಲ್ಲಿ ಮಹಿಳೆಯರಿಗೆ ಹೊಲಿಗೆ, ಕಸೂತಿ ಕಲಿಸುವ ಸ್ವಯಂ ಸೇವಾ ಗುಂಪಿಗೆ ಅವರು ಸಹಕಾರ ನೀಡುತ್ತಾರೆ.



ನಮ್ಮ ಅಣ್ಣ ರೋಹನ್ ನೆನಪಿದ್ದಾನೆಯೇ? ಅವನು ನನ್ನನ್ನು ಶಾಲೆಯಿಂದ ಕರೆದುಕೊಂಡು ಬರಲು ಬಂದಾಗ ನೀನು ಅವನನ್ನು ಭೇಟಿಯಾಗಿರುವೆ. ಅವನು ಒಬ್ಬ ಸಾಫ್ಟ್‌ವೇರ್ ಇಂಜನೀರ್ ಮತ್ತು ಕಂಪ್ಯೂಟರ್ ಅಪ್ಲಿಕೇಷನ್ಸ್ ತಯಾರಿಸುವ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ವಾರಾಂತ್ಯದಲ್ಲಿ, ಹತ್ತಿರದ ಕಾಲೇಜಿನಲ್ಲಿ ಯುವಜನ ಅಭಿವೃದ್ಧಿ ಕಾರ್ಯಕ್ರಮಕ್ಕೆ ಸೇರಿದವರಿಗೆ ಕಂಪ್ಯೂಟರ್ ಕೌಶಲ್ಯಗಳನ್ನು ಕಲಿಸಲು ಸ್ವಯಂಸೇವಕನಾಗಿ ಕೆಲಸ ಮಾಡುತ್ತಾನೆ.



ಆಹಾ! ಅನು, ನಮ್ಮ ಸುತ್ತಮುತ್ತಲಿರುವವರೆಲ್ಲರೂ ಪ್ರತಿದಿನ ಬಹಳಷ್ಟು ಕೆಲಸಗಳನ್ನು ಮಾಡುತ್ತಿದ್ದಾರೆ.

APSCERT

LET'S EXPLORE

What activities did the people in Anu's and Kabir's story engage in? Mention them in the table given below:

Character in the story	Activities they are engaged in	

Money's worth: The monetary value that a person places on an object based on the benefit that they derive from it.

Different types of activities, like the ones discussed above, are divided into two groups or categories: *economic activities and non-economic activities*. **Economic activities** are those that involve money or are performed in exchange for money or **money's worth** for the parties involved. For example, a business person selling school bags in the **market**, a farmer selling produce in the market, a lawyer arguing a case and earning a **fee**, a truck driver transporting goods from one place to another, workers employed in a car manufacturing factory, etc.

Non-economic activities are those that do not generate income or wealth but are done out of feelings like gratitude. love can and respect

APSCERT

Left to right, top to bottom: *A business person selling school bags in the market Farmers selling their harvest in the market. A lawyer arguing a case A truck driver transporting goods from one place to anotherWorkers employed in a car manufacturing factory*





Market: A place where people engage in the exchange of goods and services. People may exchange goods and services for other goods but in most markets these are exchanged for money.

Fee: A payment made to aperson or organisation in exchange for professional advice or services. For example, a fee paid to a doctor and a lawyer.

ಅನ್ವೇಷಿಸೋಣ

ಅನು, ಕಬೀರ್ ಕಥೆಯಲ್ಲಿನ ವ್ಯಕ್ತಿಗಳು ಯಾವ ಯಾವ ಕೆಲಸಗಳನ್ನು ಮಾಡುತ್ತಿದ್ದಾರೆ? ಅವುಗಳನ್ನು ಇಲ್ಲಿ ಉಲ್ಲೇಖಿಸಿ

ಕಥೆಯೊಳಗಿನ ಪಾತ್ರದ ಹೆಸರು	ಅವರು ತಲ್ಲೀನರಾದ ಚಟುವಟಿಕೆಗಳು	

ಹಣದ ಮಹತ್ವ: ಒಬ್ಬ ವ್ಯಕ್ತಿ ಒಂದು ವಸ್ತುವಿನ ಮೂಲಕ ಪಡೆಯುವ ಪ್ರಯೋಜನದ ಆಧಾರದ ಮೇಲೆ ಅದಕ್ಕೆ ಕೊಡುವ ದ್ರವ್ಯ (ಮೌಲ್ಯ) ನಿರ್ಧರಿಸ ಲಾಗುವುದು

ಮೇಲೆ ಚರ್ಚಿಸಿದ ವಿಧವಾಗಿ ವಿವಿಧ ಬಗೆಯ ಚಟುವಟಿಕೆಗಳನ್ನು ಎರೆಡು ವರ್ಗಗಳು ಅಥವಾ ಶ್ರೇಣಿಗಳಾಗಿ ವಿಭಜಿಸಲಾಗಿದೆ. ಆರ್ಥಿಕ ಚಟುವಟಿಕೆಗಳು ಮತ್ತು ಆರ್ಥಿಕೇತರ ಚಟುವಟಿಕೆಗಳು .

ಆರ್ಥಿಕ ಚಟುವಟಿಕೆಗಳು ಅಂದರೆ ದ್ರವ್ಯದೊಂದಿಗೆ ಸಂಬಂಧ ಹೊಂದಿರುವ ಇಲ್ಲವೇ ದ್ರವ್ಯಕ್ಕಾಗಿ ಮಾಡುವ ಇಲ್ಲವೇ ಅದರಲ್ಲಿ ಭಾಗಿಗಳಾದವರಿಗೆ ದ್ರವ್ಯದ ಮೌಲ್ಯ ಕೊಡಬಲ್ಲ ಚಟುವಟಿಕೆಗಳು. ಉದಾಹರಣೆಗೆ, ಮಾರುಕಟ್ಟೆಯಲ್ಲಿ ಶಾಲೆಯ ಬ್ಯಾಗುಗಳನ್ನು ಮಾರುವ ವ್ಯಾಪಾರಿ, ಮಾರುಕಟ್ಟೆಯಲ್ಲಿ ಬೆಳೆಗಳನ್ನು ಮಾರುವ ಕೃಷಿಕ, ಪ್ರಕರಣವನ್ನು ವಾದಿಸಿ ಶುಲ್ಕ ಪಡೆಯುವ ವಕೀಲ, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸರಕುಗಳನ್ನು ಸಾಗಿಸುವ ಟ್ರಕ್ ಚಾಲಕರು, ಕಾರುಗಳನ್ನು ತಯಾರು ಮಾಡುವ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಮುಂತಾದವುಗಳೆಲ್ಲ ಆರ್ಥಿಕ ಚಟುವಟಿಕೆಗಳು.

ಆರ್ಥಿಕೇತರ ಚಟುವಟಿಕೆಗಳು ಆದಾಯ ಅಥವಾ ಸಂಪತ್ತನ್ನು ಸೃಷ್ಟಿಸುವುದಿಲ್ಲ. ಆದರೆ ಅವು ಕೇವಲ ಧನ್ಯವಾದ ಭಾವನೆಯನ್ನು ಮಾತ್ರ ವ್ಯಕ್ತಪಡಿಸುತ್ತವೆ.

ಎಡದಿಂದ ಬಲಕ್ಕೆ, ಮೇಲಿನಿಂದ ಕೆಳಕ್ಕೆ:
ಶಾಲೆಯ ಬ್ಯಾಗುಗಳನ್ನು ಮಾರುಕಟ್ಟೆಯಲ್ಲಿ ಮಾರುತ್ತಿರುವ ವ್ಯಾಪಾರಿ, ಮಾರುಕಟ್ಟೆಯಲ್ಲಿ ತಮ್ಮ ಬೆಳೆಗಳನ್ನು ಮಾರುತ್ತಿರುವ ಕೃಷಿಕ, ಒಂದು ಪ್ರಕರಣವನ್ನು ವಾದಿಸುತ್ತಿರುವ ವಕೀಲ, ಒಂದು ಪ್ರಾಂತದಿಂದ ಮತ್ತೊಂದು ಪ್ರಾಂತಕ್ಕೆ ಸರಕುಗಳನ್ನು ಸಾಗಿಸುತ್ತಿರುವ ಟ್ರಕ್ ಚಾಲಕ, ಕಾರುಗಳ ತಯಾರಿ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು.





ಮಾರ್ಕೆಟ್: ವಸ್ತು ಸೇವೆಗಳ ವಿನಿಮಯ ನಡೆಯುವ ಪ್ರದೇಶ. ಜನರು ಕೆಲವೊಮ್ಮೆ ವಸ್ತು ವಿನಿಮಯ ಪದ್ಧತಿಯ ಮೂಲಕ ವಸ್ತುಗಳನ್ನು ಅದಲು ಬದಲು ಮಾಡಿಕೊಳ್ಳಬಹುದು. ಆದರೆ ಬಹಳಷ್ಟು ಮಾರುಕಟ್ಟೆಗಳಲ್ಲಿ ಹಣದ ಮೂಲಕ ವಿನಿಮಯ ಮಾಡಿಕೊಳ್ಳುತ್ತಾರೆ..

ಫೀಜು/ಶುಲ್ಕ: ವೃತ್ತಿಪರವಾದ ಸಲಹೆ ಇಲ್ಲವೆ ಸೇವೆಗೆ ಬದಲಾಗಿ ಒಬ್ಬ ವ್ಯಕ್ತಿಗೆ ಇಲ್ಲವೆ ಸಂಸ್ಥೆಗೆ ಸಲ್ಲಿಸುವ ಪಾವತಿಯನ್ನು ಶುಲ್ಕ ಎನ್ನುವರು.
ಉದಾಹರಣೆಗೆ : ವೈದ್ಯರಿಗೆ, ವಕೀಲರಿಗೆ ಸಲ್ಲಿಸುವ ಶುಲ್ಕ

AP SCERT





For instance, parents cooking food for the family or helping their children with schoolwork, youth taking care of the grandparents, family members helping in the renovation of the house, etc.

Left to right: Parents cooking food for the family Mother helping her children with schoolwork




Left to right: Youth taking care of the grandparents Family members helping in the renovation of the house




AP SCERT

LET'S EXPLORE

In the table given on page 182, did you notice the third empty column? Label this column 'economic / non-economic activity'. Now classify them according to the nature of activity.

Salary: A fixed regular payment generally paid monthly by an employer to an employee.





ಉದಾಹರಣೆಗೆ : ತಂದೆ ತಾಯಿಯರು ಕುಟುಂಬಕ್ಕಾಗಿ ಆಹಾರವನ್ನು ಸಿದ್ಧಪಡಿಸುವುದು ಇಲ್ಲವೆ ತಮ್ಮ ಮಕ್ಕಳಿಗೆ ಶಾಲೆಯ ಕೆಲಸದಲ್ಲಿ ಸಹಾಯ ಮಾಡುವುದು, ಅಜ್ಜ, ಅಜ್ಜಿಯನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ವಹಿಸಿಕೊಳ್ಳುವುದು, ಮನೆಯ ಕೆಲಸಕಾರ್ಯಗಳಲ್ಲಿ ಕುಟುಂಬದ ಸದಸ್ಯರು ಸಹಾಯ ಮಾಡುವುದು ಮೊದಲಾದವು.




ಎಡಗಡೆಯಿಂದ ಬಲಗಡೆಗೆ : ಕುಟುಂಬಕ್ಕಾಗಿ ಅಡುಗೆ(ಆಹಾರ) ಸಿದ್ಧಪಡಿಸುತ್ತಿರುವ ತಂದೆ ತಾಯಿಯರು. ತಮ್ಮ ಮಕ್ಕಳಿಗೆ ಶಾಲೆಯ ಕೆಲಸ ಕಾರ್ಯಗಳಲ್ಲಿ ಸಹಾಯ ಮಾಡುತ್ತಿರುವ ತಾಯಿ.




ಎಡಗಡೆಯಿಂದ ಬಲಗಡೆಗೆ : ಹಿರಿಯರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿರುವ ಯುವಜನರು. ಮನೆಯ ಕೆಲಸಕಾರ್ಯಗಳಲ್ಲಿ ಸಹಾಯ ಮಾಡುತ್ತಿರುವ ಕುಟುಂಬದ ಸದಸ್ಯರು.

APSCERT

ಅನ್ವೇಷಿಸೋಣ

ನೀವು 183ನೇ ಪುಟದಲ್ಲಿ ನೀಡಲಾದ ಕೋಷ್ಠಕದಲ್ಲಿ ಖಾಲಿ ಇರುವ ಮೂರನೇ ಅಂಕಣವನ್ನು ಗಮನಿಸಿದ್ದೀರಾ? ಖಾಲಿ ಇರುವ ಅಂಕಣದಲ್ಲಿ ಆರ್ಥಿಕ, ಆರ್ಥಿಕೇತರ ಚಟುವಟಿಕೆಗಳನ್ನು ಹೆಸರಿಸಿ. ಈಗ ಕೆಲಸದ ಸ್ವಭಾವಕ್ಕೆ ತಕ್ಕಂತೆ ಅವುಗಳನ್ನು ವಿಂಗಡಿಸಿ.

ಸಂಬಳ: ಯಜಮಾನನು ತನ್ನ ಬಳಿ ನೇಮಕಗೊಂಡ ನೌಕರನಿಗೆ ಪ್ರತಿ ತಿಂಗಳು ಕೊಡುವ ನಿರ್ದಿಷ್ಟವಾದ ವೇತನ.

In Anu's and Kabir's story, Geeta Aunty, the Air Force pilot, receives a salary. She serves the country and performs an economic activity too. Anu's brother, Rohan, works for a software company and is given a **salary** for it. Over the weekend, he also volunteers at the youth development programme of the nearby college, where he teaches computer skills to young adults. This is a non-economic activity.



THINK ABOUT IT



- When Kabir's grandfather voluntarily teaches the neighbourhood kids for free, is that an economic activity or a non-economic activity? How is it different from your teachers teaching you at school? Discuss with your classmates.
- What are some non-economic activities that are important to you and your family? Why are they valuable?

© NCERT

Types of Economic Activities



Kavya was excited to go to her aunt's house in the village of Kamlapur. On the way, she saw that a high-way was being built near the village, and the construction site was abuzz with activity. Large machines, such as excavators and bulldozers, were being operated by dedicated technicians. This new highway promised to reduce the travel time to the nearest town from five hours to just two hours. Kavya thought that she would be able to visit her aunt more often once the highway was ready, since it would take less time to travel there.

ಅನು ಮತ್ತು ಕಬೀರ್ ಕಥೆಯಲ್ಲಿ ಭಾರತೀಯ ವಾಯುಸೇನೆಯಲ್ಲಿ ಪೈಲಟ್ ಆಗಿ ಕಾರ್ಯನಿರ್ವಸುತ್ತಿರುವ ಗೀತಾಳ ಅತ್ತೆ ಸಂಬಳ ಪಡೆಯುತ್ತಿದ್ದಾರೆ. ಅವರು ದೇಶಕ್ಕೆ ಸೇವೆಯನ್ನು ಮಾಡುತ್ತಿದ್ದಾರೆ ಮತ್ತು ಒಂದು ಆರ್ಥಿಕ ಕಾರ್ಯಚಟುವಟಿಕೆಯನ್ನು ಕೂಡಾ ನಿರ್ವಹಿಸುತ್ತಿದ್ದಾರೆ. ಅನು ಸಹೋದರನಾದ ರೋಹನ್ ಒಂದು ಸಾಫ್ಟವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಾ **ಸಂಬಳ**ವನ್ನು ಪಡೆಯುತ್ತಿದ್ದಾನೆ. ವಾರದ ಕೊನೆಯಲ್ಲಿ ಆತನು, ಸಮೀಪದಲ್ಲಿರುವ ಮಹಾವಿದ್ಯಾಲಯದಲ್ಲಿ ಏರ್ಪಡಿಸುವ ಯುವಜನಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಕೂಡಾ ಭಾಗಿಯಾಗುತ್ತಾನೆ. ಅಲ್ಲಿ ಆತನು ಯುವಜನರಿಗೆ ಕಂಪ್ಯೂಟರ್ ಕೌಶಲ್ಯಗಳನ್ನು ಬೋಧಿಸುತ್ತಾನೆ. ಇದು ಒಂದು ಆರ್ಥಿಕೇತರ ಚಟುವಟಿಕೆ.

ಆಲೋಚಿಸಿ

- ಕಬೀರ್ ಅಜ್ಜನವರು ಸ್ವಚ್ಛಂದವಾಗಿ ಸುತ್ತಮುತ್ತಲಿನ ಮಕ್ಕಳಿಗೆ ಉಚಿತವಾಗಿ ವಿದ್ಯೆಯನ್ನು ಹೇಳಿಕೊಡುತ್ತಾರೆ. ಅದು ಆರ್ಥಿಕ ಚಟುವಟಿಕೆಯೇ? ಅಥವಾ ಆರ್ಥಿಕೇತರ ಚಟುವಟಿಕೆಯೇ? ನಿಮ್ಮ ಪಾಠಶಾಲೆಯಲ್ಲಿ ನಿಮಗೆ ವಿದ್ಯೆಯನ್ನು ಹೇಳಿಕೊಡುವ ನಿಮ್ಮ ಶಿಕ್ಷಕರಿಗೆ ಹೋಲಿಸಿದರೆ ಇದು ಯಾವ ರೀತಿಯಲ್ಲಿ ಭಿನ್ನವಾಗಿದೆ. ನಿಮ್ಮ ಸಹ ವಿದ್ಯಾರ್ಥಿಗಳೊಂದಿಗೆ ಚರ್ಚಿಸಿರಿ.
- ನಿಮಗೆ, ನಿಮ್ಮ ಕುಟುಂಬದವರಿಗೆ ಮುಖ್ಯವೆಂದು ಭಾವಿಸುವ ಕೆಲವು ಆರ್ಥಿಕೇತರ ಚಟುವಟಿಕೆಗಳು ಯಾವುವು? ಅವು ಏಕೆ ಮುಖ್ಯವಾಗಿವೆ?

ಆರ್ಥಿಕ ಚಟುವಟಿಕೆಗಳ ವಿಧಗಳು



ಕಾವ್ಯ ಕಮಲಾಪುರ ಗ್ರಾಮದಲ್ಲಿರುವ ತಮ್ಮ ಅತ್ತೆ ಮನೆಗೆ ಹೋಗಲು ಬಹಳಷ್ಟು ಸಂಭ್ರಮದಲ್ಲಿ ಇದ್ದಾಳೆ. ಮಾರ್ಗದ ಮಧ್ಯದಲ್ಲಿ ಅವರ ಗ್ರಾಮಕ್ಕೆ ಸಮೀಪದಲ್ಲಿ ಒಂದು ರಾಷ್ಟ್ರೀಯ ಹೆದ್ದಾರಿ ನಿರ್ಮಾಣವಾಗುತ್ತಿರುವುದನ್ನು ಆಕೆ ನೋಡಿದಳು. ನಿರ್ಮಾಣವಾಗುತ್ತಿರುವ ಪ್ರಾಂತವೆಲ್ಲಾ ಬಹಳಷ್ಟು ಕೆಲಸಗಳಿಂದ ಗದ್ದಲಗಳಿಂದ ಕೂಡಿದೆ. ಎಸ್ಕಲೇಟರ್‌ಗಳು, ಬುಲ್ಡೋಜರ್‌ಗಳಂತಹ ಮೊದಲಾದ ದೊಡ್ಡ ದೊಡ್ಡ ಯಂತ್ರಗಳನ್ನು ಕುಶಲಿಗಳಾಗಿರುವ ನಿಪುಣರು ನಿರ್ವಹಿಸುತ್ತಿದ್ದಾರೆ. ಈ ಹೊಸ ರಾಷ್ಟ್ರೀಯ ಹೆದ್ದಾರಿಯಿಂದ ಸಮೀಪದಲ್ಲಿರುವ ಪಟ್ಟಣವನ್ನು ತಲುಪಲು ಐದು ಗಂಟೆ ಸಮಯ ಹಿಡಿಯುತ್ತಿತ್ತು. ಹೊಸ ಹೆದ್ದಾರಿ ಪೂರ್ಣಗೊಂಡ ಬಳಿಕ ಎರೆಡು ಗಂಟೆಗಳಲ್ಲಿ ತಲುಪಬಹುದು. ಆಗ ತಮ್ಮ ಅತ್ತೆಯ ಮನೆಗೆ ಬಹಳಷ್ಟು ಸಲ ಹೋಗಿ ಬರಬಹುದೆಂದು ಕಾವ್ಯ ಅಂದುಕೊಂಡಳು.

© SCERT



Happy with this thought, Kavya ran to greet her aunt and to eat the delicious jalebis that she had made. They were joined by Kavya's uncle, who had just returned home from work. He is a technician in a construction company and operates a bulldozer. He receives a monthly salary for his services. The next day, Kavya's aunt woke up early to finish her share of the household chores and left for work.

She is employed at the village post office and is paid a monthly salary. In the evening, after her office work, she also conducts online classes to help students prepare for school exams. She charges a weekly fee for these classes.





On the weekend, Kavya visited a local mango orchard with her aunt to have some delicious mangoes. There she saw Rama krishna, a farm labourer who was using a tractor to till a farmer's land nearby. He earns a **daily wage** for his efforts. He gets some payment for his work in cash, and the remaining part of the payment in the form of mangoes of equal value. The mangoes that he receives as a part of his work are called **payment in kind.**

Wage: A payment made by the employer to the worker for a specific period of time.



THINK ABOUT IT



On your way from home to school today, can you recall the various economic activities that people are engaged in? In what ways do you think those people are paid?

Payment in kind: A non-cash payment that is received for the work performed.

© NCERT



ಈ ಆಲೋಚನೆಯಿಂದ ಸಂತೋಷಗೊಂಡ ಕಾವ್ಯ ತನ್ನ ಅತ್ತೆಯನ್ನು ಮಾತನಾಡಿಸಲು ಮತ್ತು ಅವರು ಮಾಡುವ ರುಚಿಕರವಾದ ಜಿಲೇಬಿ ತಿನ್ನಲು ಓಡಿದಳು. ಸ್ವಲ್ಪ ಸಮಯದ ನಂತರ ಕಾವ್ಯಾಳ ಮಾವನವರು ಕೂಡ ಕೆಲಸವನ್ನು ಮುಗಿಸಿಕೊಂಡು ಮನೆಗೆ ಬಂದು, ಅವರೊಂದಿಗೆ ಸೇರಿಕೊಂಡನು. ಆತನು ಒಂದು ನಿರ್ಮಾಣ ಸಂಸ್ಥೆಯಲ್ಲಿ ಬುಲ್ಡೋಜರ್ ನಡೆಸುವ ಕುಶಲಿಗ. ತನ್ನ ಸೇವೆಗೆ ತಿಂಗಳಿಗೊಮ್ಮೆ ಸಂಬಳ ಪಡೆಯುತ್ತಾನೆ. ಮರುದಿನ ಕಾವ್ಯಾಳ ಅತ್ತೆ ಬೆಳಗಿನ ಜಾವ ಎದ್ದು ತನ್ನ ಮನೆಯ ಕೆಲಸಗಳನ್ನು ಮುಗಿಸಿಕೊಂಡು ಕೆಲಸಕ್ಕೆ ಹೋದಳು.



ಅವರು, ಗ್ರಾಮದಲ್ಲಿರುವ ಅಂಚೆ ಕಛೇರಿಯಲ್ಲಿ ಉದ್ಯೋಗ ನಿರ್ವಹಿಸುತ್ತ, ತಿಂಗಳಿಗೊಮ್ಮೆ ಸಂಬಳವನ್ನು ಪಡೆಯುತ್ತಾರೆ. ಸಾಯಂಕಾಲ, ಕಛೇರಿಯ ಕೆಲಸ ಮುಗಿದ ಬಳಿಕ ವಿದ್ಯಾರ್ಥಿಗಳು ಪಾಠಶಾಲೆಯ ಪರೀಕ್ಷೆಗಳಿಗೆ ಸಂಸಿದ್ಧರಾಗಲು ಅವರು ಆನ್ಲೈನ್ ತರಗತಿಗಳನ್ನು ಕೂಡಾ ನಿರ್ವಹಿಸುತ್ತಾರೆ. ಈ ತರಗತಿ ನಿರ್ವಹಿಸಿದ್ದಕ್ಕಾಗಿ ವಾರಕ್ಕೊಮ್ಮೆ ಶುಲ್ಕ ವಸೂಲಿ ಮಾಡುತ್ತಾರೆ.



ವಾರದ ಕೊನೆಯಲ್ಲಿ, ಕಾವ್ಯ ರುಚಿಕರವಾದ ಮಾವಿನಹಣ್ಣುಗಳನ್ನು ತಿನ್ನಲು ತನ್ನ ಅತ್ತೆಯ ಜೊತೆಗೂಡಿ ಸಮೀಪ ಇರುವ ಮಾವಿನತೋಟಕ್ಕೆ ಹೋದಳು. ಅಲ್ಲಿಗೆ ಸಮೀಪದಲ್ಲಿಯೇ ರಾಮಕೃಷ್ಣ ಎಂಬ ಕೃಷಿಕಾರ್ಮಿಕನು ಒಬ್ಬ ರೈತನಿಗೆ ಸಂಬಧಿಸಿದ ಹೊಲದಲ್ಲಿ ಟ್ರಾಕ್ಟರ್ ಸಹಾಯದಿಂದ ಉಳುವುದನ್ನು ಆಕೆ ಕಂಡಳು. ಆತನು ಮಾಡುವ ಕೆಲಸಕ್ಕೆ **ದಿನಗೂಲಿ** ಸಂಬಳವನ್ನು ಪಡೆಯುತ್ತಿದ್ದಾನೆ. ತಾನು ಮಾಡಿದ ಕೆಲಸಕ್ಕೆ ಸ್ವಲ್ಪ ಹಣವನ್ನು ಹಾಗೂ ಇನ್ನುಳಿದ ಹಣಕ್ಕೆ ಸರಿಸಮಾನವಾಗಿ ಮಾವಿನಹಣ್ಣುಗಳನ್ನು ಪಡೆಯುತ್ತಿದ್ದಾನೆ. ತನ್ನ ಕೆಲಸಕ್ಕೆ ಪ್ರತಿಫಲವಾಗಿ ಪಡೆದ ಮಾವಿನ ಹಣ್ಣುಗಳನ್ನು **ವಸ್ತುವಿನಿಮಯ ಪದ್ಧತಿ** ಎನ್ನುತ್ತಾರೆ.

ಸಂಬಳ: ಯಜಮಾನನು ತನ್ನ ಬಳಿ ನೇಮಕಗೊಂಡ ನೌಕರನಿಗೆ ಪ್ರತಿ ತಿಂಗಳು ಕೊಡುವ ನಿರ್ದಿಷ್ಟವಾದ ವೇತನ.

ಆಲೋಚಿಸಿ


ಈ ದಿನ ನೀವು ಮನೆಯಿಂದ ಶಾಲೆಗೆ ಹೋಗುವಾಗ ಜನರು ಮಾಡುತ್ತಿರುವ ವಿವಿಧ ಬಗೆಯ ಆರ್ಥಿಕ ಕಾರ್ಯ ಚಟುವಟಿಕೆಗಳನ್ನು ನೆನಪಿಗೆ ತಂದುಕೊಳ್ಳಬಲ್ಲಿರಾ? ಯಾವ ವಿಧವಾಗಿ ಸಂಬಳ ಅವರಿಗೆ ಲಭಿಸುತ್ತದೆ ಎಂದು ನೀವು ಭಾವಿಸುತ್ತಿದ್ದೀರಿ.

ವಸ್ತು ವಿನಿಮಯ: ಮಾಡಿದ ಕೆಲಸಕ್ಕೆ ನಗದು ರೂಪದಲ್ಲಿ ಅಲ್ಲದೆ ವಸ್ತು ರೂಪದಲ್ಲಿ ಕೊಡುವ ಪಾವತಿ

© KSCERT

As we now understand, economic activities are those that have value in terms of money. Economic activities also add value at each stage of the process of transforming something into another form. This is called **value addition**.

Let us take the example of Kavya's father, Rajesh, to understand this.



Rajesh is a carpenter who buys wood from a nearby market for ₹600 to make furniture.



He uses special tools and other materials for building the furniture.




Rajesh sells a chair for ₹1,000 each in the market.

APSCERT

The wood for the chair costs ₹600. So, what is the remaining ₹400 (₹1,000 - ₹600) for? It is the monetary value of Rajesh's skill, time and effort, which went into making that chair. Rajesh has added value to the wood by turning it into furniture. From buying the wood to selling the chair, these activities involve payment. They are, therefore, a part of economic activities.

ನಾವು ಅರ್ಥೈಸಿಕೊಂಡತೆ, ಆರ್ಥಿಕ ಕಾರ್ಯಚಟುವಟಿಕೆಗಳೆಂದರೆ ದ್ರವ್ಯ ರೂಪದಲ್ಲಿ ಮೌಲ್ಯವನ್ನು ಒಳಗೊಂಡಿರುವುದು. ಒಂದು ವಸ್ತುವನ್ನು ಮತ್ತೊಂದು ರೂಪದೊಳಗೆ ಬದಲಾಯಿಸುವ ಪ್ರಕ್ರಿಯೆಯಲ್ಲಿ ಪ್ರತಿ ಹಂತದಲ್ಲೂ ಆರ್ಥಿಕ ಕಾರ್ಯಚಟುವಟಿಕೆಗಳು ಹೊಸ ಮೌಲ್ಯವನ್ನು ಜೋಡಿಸುತ್ತವೆ. ಇದನ್ನೇ **ಮೌಲ್ಯವರ್ಧನೆ** ಎಂದು ಕರೆಯುತ್ತಾರೆ. **(value addition)**

ಇದನ್ನು ಅರ್ಥಮಾಡಿಕೊಳ್ಳಲು ಕಾವ್ಯಾಳ ತಂದೆ ರಾಜೇಶ ಅವರನ್ನು ಉದಾಹರಣೆಯಾಗಿ ತೆಗೆದುಕೊಳ್ಳೋಣ.



ರಾಜೇಶ ಒಬ್ಬ ಬಡಿಗ, ಗೃಹೋಪಕರಣಗಳನ್ನು ತಯಾರಿಸಲು ಸಮೀಪದಲ್ಲಿರುವ ಮಾರ್ಕೆಟ್ ನಿಂದ ₹600ಕ್ಕೆ ಕಟ್ಟಿಗೆಯನ್ನು ಕೊಂಡನು.



ಗೃಹೋಪರಣಗಳನ್ನು ತಯಾರಿಸಲು ಆತನು ಪ್ರತ್ಯೇಕವಾದ ಸಾಧನಗಳನ್ನು ಹಾಗೂ ಉಪಕರಣಗಳನ್ನು ಉಪಯೋಗಿಸುತ್ತಾನೆ



ರಾಜೇಶ್ ಒಂದೊಂದು ಕುರ್ಚಿಯನ್ನು ₹ 1000ಗೆ ಮಾರ್ಕೆಟ್‌ನಲ್ಲಿ ಮಾರುತ್ತಾನೆ

ಕುರ್ಚಿಯನ್ನು ತಯಾರಿಸಲು ಅವಸರವಾದ ಕಟ್ಟಿಗೆಯ ಮೌಲ್ಯ ₹ 600, ಆದರೆ ಉಳಿದ ₹ 400 ಏಕೆ? ಅದು ರಾಜೇಶ ಕುರ್ಚಿಯನ್ನು ತಯಾರಿಸುವ ಪ್ರಕ್ರಿಯೆಯಲ್ಲಿ ಬಳಸಿದ ಆತನ ಕೌಶಲ್ಯ, ಸಮಯ ಮತ್ತು ಶ್ರಮಕ್ಕೆ ಸಂದ ದ್ರವ್ಯಮೌಲ್ಯ. ಗೃಹೋಪಕರಣವಾಗಿ ಬದಲಾಯಿಸುವುದರ ಮುಖಾಂತರ ರಾಜೇಶ್ ಕಟ್ಟಿಗೆಯ ಮೌಲ್ಯವನ್ನು ಜೋಡಿಸಿದನು. ಕಟ್ಟಿಗೆಯನ್ನು ಕೊಂಡಾಗಿನಿಂದ ಕುರ್ಚಿಯನ್ನು ಮಾರುವವರೆಗೆ ಎಲ್ಲ ಕಾರ್ಯಚಟುವಟಿಕೆಗಳಲ್ಲಿ ಹಂತಹಂತವಾಗಿ ಪಾವತಿಸುವುದು ಇರುತ್ತದೆ. ಆದ್ದರಿಂದ ಅವು ಆರ್ಥಿಕ ಕಾರ್ಯಚಟುವಟಿಕೆಗಳಲ್ಲಿ ಒಂದು ಭಾಗವಾಗಿದೆ.

APSCERT

LET'S EXPLORE

Put a ☑ against those activities/professions that you think create monetary value. Can you add two activities and examples of money related value creation to the empty rows at the end?

Activity / Profession	Example of money - realated value creation
1. Baker	
2. Tailor	
3. Farmers repairing their tractor	
4. Doctor	
5. Parents cooking dinner for their family	
6. Scientist	
7. Person taking care of a sick grandparent	
8.	
9.	

AP SCERT

The Importance of Non-Economic Activities

While non-economic activities may not involve money, the value they generate is important in our lives.

Seva: selfless service

We see seva in many places such as temples, gurudwaras, mosques and churches. For instance, langars or community kitchens at gurudwaras or temples serve food to every visitor for free. These practices foster a sense of satisfaction and gratitude for what we have, and they are also a way of contributing to society without expecting anything in return.

ಅನ್ವೇಷಿಸೋಣ

ದ್ರವ್ಯ ಮೌಲ್ಯವನ್ನು ಸೃಷ್ಟಿಸುತ್ತವೆ ಎಂದು ನೀವು ಭಾವಿಸುವ ಕಾರ್ಯಚಟುವಟಿಕೆಯ ವೃತ್ತಿಗಳ ಎದುರಿಗೆ (✓) ಎಂಬ ಗುರುತನ್ನು ಗುರ್ತಿಸಿರಿ. ಕೊನೆಯಲ್ಲಿ ಖಾಲಿ ಇರುವ ಪಂಕ್ತಿಯಲ್ಲಿ ಎರಡು ಕಾರ್ಯಚಟುವಟಿಕೆಗಳನ್ನು, ಅವುಗಳಿಗೆ ಸಂಬಂಧಿಸಿದ ದ್ರವ್ಯ ಮೌಲ್ಯವನ್ನು ಸೃಷ್ಟಿಸುವ ಉದಾಹರಣೆಗಳನ್ನು ಬರೆಯಬಲ್ಲಿರಾ?

ಕಾರ್ಯ ಚಟುವಟಿಕೆಗಳು/ವೃತ್ತಿ	ದ್ರವ್ಯದ ಮೌಲ್ಯವನ್ನು ಸೃಷ್ಟಿಸುವ ಉದಾಹರಣೆ
1. ಬೇಕರಿ/ರೊಟ್ಟಿ ತಯಾರಿಸುವವರು	
2. ಟೈಲರ್/ದರ್ಜಿ	
3. ಟ್ರಾಕ್ಟರ್ ರಿಪೇರಿ ಮಾಡುತ್ತಿರುವ ರೈತರು	
4. ಡಾಕ್ಟರ್/ವೈದ್ಯ	
5. ಕುಟುಂಬಕ್ಕಾಗಿ ಅಡುಗೆ ಮಾಡುತ್ತಿರುವ ತಂದೆ ತಾಯಿಯರು	
6. ವಿಜ್ಞಾನಿ	
7. ಅನಾರೋಗ್ಯದಿಂದ ಬಳಲುತ್ತಿರುವ ಅಜ್ಜನ ಯೋಗಕ್ಷೇಮ	
8.	
9.	

AP SCERT

ಆರ್ಥಿಕೇತರ ಕಾರ್ಯಚಟುವಟಿಕೆಗಳ ಪ್ರಾಮುಖ್ಯತೆ

ಆರ್ಥಿಕೇತರ ಚಟುವಟಿವಟಿಕೆಗಳಿಗೆ ನೇರವಾಗಿ ಹಣದೊಂದಿಗೆ ಸಂಬಂಧವಿಲ್ಲದಿದ್ದರೂ, ಅವು ಸೃಷ್ಟಿಸುವ ಮೌಲ್ಯ ನಮ್ಮ ಜೀವನಕ್ಕೆ ಬಹಳಷ್ಟು ಮುಖ್ಯ.

ಸೇವೆ–ನಿಸ್ವಾರ್ಥಸೇವೆ (ಪ್ರತಿಫಲವನ್ನು ಆಶಿಸದೆ ಮನಸ್ಫೂರ್ತಿಯಾಗಿ ಇತರರಿಗೆ ಮಾಡುವ ಸಹಾಯ)

ದೇವಾಲಯಗಳು, ಗುರುದ್ವಾರಗಳು, ಮಸೀದಿಗಳು, ಚರ್ಚಿಗಳು ಮೊದಲಾದ ಅನೇಕ ಕಡೆ ನಾವು ಸೇವೆಯನ್ನು ನೋಡುತ್ತೇವೆ. ಉದಾಹರಣೆಗೆ: ಗುರುದ್ವಾರದಲ್ಲಿರುವ ಲಂಗರುಗಳು ಅಥವಾ ಸಾಮೂಹಿಕ ಭೋಜನಾಲಯ ಪ್ರತಿಯೊಬ್ಬ ಸಂದರ್ಶಕರಿಗೆ ಉಚಿತವಾಗಿ ಆಹಾರವನ್ನು ಕೊಡುತ್ತವೆ. ಈ ಆಚರಣೆಗಳು ನಮಗೆ ಇರುವುದರಲ್ಲಿ ಸಂತೃಪ್ತಿ, ಕೃತಜ್ಞತಾ ಭಾವನೆಯನ್ನು ಬೆಳೆಸುತ್ತವೆ. ಅದೇ ರೀತಿ ಯಾವ ಬಗೆಯ ಪ್ರತಿಫಲ ಆಶಿಸದೆ ಸಮಾಜಕ್ಕೆ ಸೇವೆ ಮಾಡಲು ಇದು ಒಂದು ಬಗೆಯ ಮಾರ್ಗವಾಗಿದೆ.



Temple : Distributing prasad to devotees



Langar at the Golden Temple



Swachh Bharat Abhiyan



Van Mahotsav

APSCERT

The strength of community participation

The **Swachh Bharat Abhiyan** is based on the collective efforts of all Indian citizens to keep our surroundings clean. Individually, we keep our homes and surroundings clean. People have also come together to clean up streets, roads, parks and other public places or community areas. Together, these efforts lead to a clean home, neighbourhood, society and nation. Another example of collective community participation is the celebration of Van Mahotsav (the festival of forests) in India to promote awareness about the value of trees and the conservation of forests. The initiative brings together members of the community for tree plantation drives.



ದೇವಾಲಯಗಳಲ್ಲಿ ಭಕ್ತರಿಗೆ ಪ್ರಸಾದ ವಿತರಣೆ



ಸ್ವರ್ಣದೇವಾಲಯದಲ್ಲಿರುವ ಲಂಗರು/ ಸಾಮೂಹಿಕ ಭೋಜನಶಾಲೆ



ಸ್ವಚ್ಛಭಾರತ ಅಭಿಯಾನ



ವನ ಮಹೋತ್ಸವ

APSCERT

ಸಮುದಾಯದ ಭಾಗವಹಿಸುವಿಕೆ ಶಕ್ತಿ

ನಮ್ಮ ಸುತ್ತಮುತ್ತಲಿನ ಪರಿಸರವನ್ನು ಪರಿಶುಭ್ರವಾಗಿಡಲು ಏರ್ಪಡಿಸಿದ **'ಸ್ವಚ್ಛ ಭಾರತ್ ಅಭಿಯಾನ'** ಎನ್ನುವ ಕಾರ್ಯಕ್ರಮವು ಭಾರತದ ನಾಗರಿಕರೆಲ್ಲರ ಒಗ್ಗಟ್ಟಿನ ಪ್ರಯತ್ನದ ಮೇಲೆ ಆಧಾರಪಟ್ಟಿದೆ. ವೈಯಕ್ತಿಕವಾಗಿ ನಾವು ನಮ್ಮ ಮನೆಗಳನ್ನು ಮತ್ತು ಪರಿಸರವನ್ನು ಹೇಗೆ ಸ್ವಚ್ಛವಾಗಿಟ್ಟುಕೊಳ್ಳುತ್ತೆವೆಯೋ ಹಾಗೆಯೇ, ಜನರೆಲ್ಲರೂ ಸೇರಿ ಬೀದಿಗಳನ್ನು, ಹೆದ್ದಾರಿಗಳನ್ನು, ಪಾರ್ಕುಗಳನ್ನು ಇನ್ನಿತರ ನಾಗರಿಕ ಪ್ರದೇಶಗಳನ್ನು ಅಥವಾ ಸಾಮಾಜಿಕ ಪ್ರಾಂತಗಳನ್ನು ಶುಭ್ರಮಾಡಲು ಮುಂದೆ ಬಂದಿದ್ದಾರೆ. ಒಟ್ಟಾರೆಯಾಗಿ, ಈ ಸಾಮೂಹಿಕ ಪ್ರಯತ್ನಗಳು ಪರಿಶುಭ್ರವಾದ ಮನೆ, ಪರಿಸರ, ಸಮಾಜ ಮತ್ತು ದೇಶವನ್ನು ನಿರ್ಮಿಸುವಲ್ಲಿ ಸಹಾಯಪಡುತ್ತವೆ. ಭಾರತದೇಶದಲ್ಲಿ ಹಮ್ಮಿಕೊಳ್ಳಲಾಗುವ ವನಮಹೋತ್ಸವವು ಸಾಮೂಹಿಕ, ಸಾಮಾಜಿಕ ಭಾಗವಹಿಸುವಿಕೆಗೆ ಮತ್ತೊಂದು ಉದಾಹರಣೆಯಾಗಿ ನಿಲ್ಲುತ್ತದೆ. ಈ ಹಬ್ಬ, ಮರಗಿಡಗಳ ಪ್ರಾಮುಖ್ಯತೆ ಮತ್ತು ಅರಣ್ಯದ ಸಂರಕ್ಷಣೆಯ ಅವಶ್ಯಕತೆ ಬಗ್ಗೆ ಅರಿವು ಮೂಡಿಸಲು ನಿರ್ವಹಿಸಲಾಗುತ್ತದೆ. ಈ ಕಾರ್ಯಕ್ರಮದ ಮೂಲಕ ಸಮಾಜದಲ್ಲಿರುವ ಸದಸ್ಯರೆಲ್ಲರೂ ಸಸಿಗಳನ್ನು ನೆಡುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಮಾಡುತ್ತವೆ.



THINK ABOUT IT



- ❖ Many communities in India have similar practices that involve community participation. Can you identify a few from your area?
- ❖ We celebrate many festivals in India. During these festivals, people gather to organise all the various activities. They decorate the place together and share the food that they cook. Are these non-economic activities? Why do you think they still hold value?
- ❖ Can you identify community programmes that have been undertaken by your school or in your locality? What did you observe during these programmes?



Before we move on ...

→ In this chapter, we learnt about economic and non- economic activities.

→ We also learnt about the value addition that economic activities create.

→ We understood how non-economic activities contribute to social welfare, personal wellbeing and enhance the overall quality of life.

Questions, activities and projects

1. What kind of economic activities do people engage in? Illustrate with examples.
2. How are economic activities different from non-economic activities?
3. What are the various ways in which people are compensated for various economic activities? Give some examples
4. you are a teacher in a school on weekdays and volunteer teacher at an NGO on weekends. Classify both activities as economic or non-economic. What is the importance of volunteering and non-volunteering activity in this situation?
5. There is great value attached to people who are engaged in community service activities. Comment on this statement.

AP SCERT



ಆಲೋಚಿಸಿ



- ❖ ಭಾರತ ದೇಶದಲ್ಲಿರುವ ಅನೇಕ ಸಮಾಜಗಳಲ್ಲಿ ಸಾಮೂಹಿಕ ಭಾಗವಹಿಸುವಿಕೆಯಿಂದ ಕೂಡಿರುವ ಈ ರೀತಿಯ ಪದ್ಧತಿಗಳಿವೆ. ನಿಮ್ಮ ಪ್ರಾಂತದಲ್ಲಿರುವ ಕೆಲವನ್ನು ನೀವು ಗುರುತಿಸಬಲ್ಲಿರಾ?
- ❖ ಭಾರತ ದೇಶದಲ್ಲಿ ನಾವು ಅನೇಕ ಹಬ್ಬಗಳನ್ನು ಆಚರಿಸುತ್ತೇವೆ. ಈ ಹಬ್ಬಗಳ ಸಮಯದಲ್ಲಿ ವಿವಿಧ ಕಾರ್ಯಕ್ರಮಗಳನ್ನು ನಿರ್ವಹಿಸಲು ಜನರೆಲ್ಲರೂ ಒಂದೆಡೆ ಸೇರುತ್ತಾರೆ. ಅವರೆಲ್ಲರೂ ಕೂಡಿಕೊಂಡು ಸಭಾಂಗಣವನ್ನು ಅಲಂಕರಿಸುತ್ತಾರೆ. ಅವರು ಮಾಡಿದ ಆಹಾರ ಪದಾರ್ಥಗಳೆಲ್ಲವನ್ನೂ ಒಬ್ಬರಿಗೊಬ್ಬರು ಹಂಚಿಕೊಳ್ಳುತ್ತಾರೆ. ಇವು ಆರ್ಥಿಕೇತರ ಕಾರ್ಯಚಟುವಟಿಕೆಗಳಲ್ಲ ಆದರೂ ಸಹಿತ ಇವುಗಳಿಗೆ ಮೌಲ್ಯ ಇದೆ ಎಂದು ನೀವು ಏಕೆ ಭಾವಿಸುತ್ತೀರಿ?
- ❖ ನಿಮ್ಮ ಪಾಠಶಾಲೆ ಅಥವಾ ನಿಮ್ಮ ಪ್ರಾಂತದಲ್ಲಿ ಏರ್ಪಡಿಸಿದ ಸಾಮಾಜಿಕ ಕಾರ್ಯಕ್ರಮಗಳನ್ನು ನೀವು ನೋಡಿದ್ದೀರಾ? ಈ ಕಾರ್ಯಕ್ರಮಗಳ ಸಮಯದಲ್ಲಿ ನೀವು ಗಮನಿಸಿದ್ದೇನು?



ಮುಗಿಸುವ ಮುನ್ನ...

→ ಈ ಅಧ್ಯಾಯದಲ್ಲಿ ನಾವು ಆರ್ಥಿಕ ಮತ್ತು ಆರ್ಥಿಕೇತರ ಕಾರ್ಯಚಟುವಟಿಕೆಗಳ ಕುರಿತು ತಿಳಿದುಕೊಂಡಿದ್ದೇವೆ.

→ ಆರ್ಥಿಕ ಕಾರ್ಯಚಟುವಟಿಕೆಗಳು ಸೃಷ್ಟಿಸುವ ಮೌಲ್ಯವರ್ಧನೆ ಕುರಿತು ಕೂಡ ನಾವು ತಿಳಿದುಕೊಂಡಿದ್ದೇವೆ.

→ ಆರ್ಥಿಕೇತರ ಕಾರ್ಯಚಟುವಟಿಕೆಗಳು ಸಮಾಜದ ಯೋಗಕ್ಷೇಮಕ್ಕೆ, ವೈಯಕ್ತಿಕ ಯಶಸ್ಸಿಗೆ, ಅದೇ ರೀತಿಯಲ್ಲಿ ಜೀವನದ ಗುಣಮಟ್ಟ ಪ್ರಮಾಣವನ್ನು ಹೆಚ್ಚಿಸಿಕೊಳ್ಳಲು ಹೇಗೆ ಸಹಾಯವಾಗುತ್ತವೆ ಎಂಬುದನ್ನು ತಿಳಿದುಕೊಂಡಿದ್ದೇವೆ.

ಪ್ರಶ್ನೆಗಳು, ಚಟುವಟಿಕೆಗಳು ಮತ್ತು ಯೋಜನಾಕಾರ್ಯಗಳು

1. ಜನರು ಯಾವ ರೀತಿಯ ಆರ್ಥಿಕ ಕಾರ್ಯಚಟುವಟಿಕೆಗಳಲ್ಲಿ ಭಾಗಿಯಾಗುತ್ತಾರೆ? ಉದಾಹರಣೆಯೊಂದಿಗೆ ವಿವರಿಸಿರಿ.
2. ಆರ್ಥಿಕೇತರ ಕಾರ್ಯಚಟುವಟಿಕೆಗಳಿಂದ,ಆರ್ಥಿಕ ಕಾರ್ಯಚಟುವಟಿಕೆಗಳು ಹೇಗೆ ಭಿನ್ನವಾಗಿವೆ?
3. ವಿವಿಧ ಬಗೆಯ ಆರ್ಥಿಕ ಕಾರ್ಯಚಟುವಟಿಕೆಗಳು ಜನರಿಗೆ ಯಾವ ವಿಧವಾಗಿ ಪ್ರತಿಫಲ ತಂದುಕೊಡುತ್ತಿವೆ? ಕೆಲವು ಉದಾಹರಣೆ ಕೊಡಿ
4. ನೀವು ಕೆಲಸದ ದಿನಗಳಲ್ಲಿ ಶಾಲೆಯಲ್ಲಿ ಶಿಕ್ಷಕರಾಗಿ, ವಾರದ ಕೊನೆಯಲ್ಲಿ ಒಂದು ಸ್ವಚ್ಛಂದ ಸಂಸ್ಥೆಯಲ್ಲಿ ಸ್ವಇಚ್ಛೆಯಿಂದ ಶಿಕ್ಷಕರಾಗಿ ಸೇವೆ ಮಾಡುತ್ತಿರುವಿರಿ. ಈ ಎರಡು ಚಟುವಟಿಕೆಗಳನ್ನು ಆರ್ಥಿಕ ಇಲ್ಲವೆ ಆರ್ಥಿಕೇತರ ಚಟುವಟಿಕೆಗಳಾಗಿ ವರ್ಗೀಕರಿಸಿರಿ. ಈ ಪರಿಸ್ಥಿತಿಯಲ್ಲಿ ಸ್ವಚ್ಛಂದ ಸೇವೆ ಮತ್ತು ಸ್ವಚ್ಛಂದವಲ್ಲದ ಕಾರ್ಯಕ್ರಮಗಳ ಪ್ರಾಮುಖ್ಯತೆ ಏನು?
5. ಸಾಮಾಜಿಕ ಸೇವಾ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ವ್ಯಕ್ತಿಗಳಿಗೆ ಮಹತ್ವದ ಸ್ಥಾನವಿದೆ. ಈ ಮಾತಿನ ಬಗ್ಗೆ ನಿಮ್ಮ ಅಭಿಪ್ರಾಯವನ್ನು ತಿಳಿಸಿರಿ.

AP SCERT


Integrating Artificial Intelligence(AI)

Learning Outcomes : The student will be able to:

1. Understands digital mapping and GPS systems
2. Ask AI to explain climate, ocean life, or hemispheres in simple words.
3. Ask AI to explain the difference between archaeologist and historian.
4. Reflect on responsibilities and discuss social topics using AI safely.
5. Compare past and present India using AI-generated summaries.
6. Use AI to create family tree diagrams.
7. Ask AI about different professions and skills needed.

Introduction:

Social Science develops important skills such as locating places, arranging events in timelines, understanding cultures, recognising family roles, and analysing different types of work. These skills help students understand society, history, geography, and human relationships in a systematic way.



Artificial Intelligence (AI) also works using similar processes. AI systems collect information, organise data, recognise patterns, and produce useful outputs. Digital maps, timelines, smart assistants, and data platforms function using structured information and analysis.

Disclaimer : "The use of AI tools by students must be strictly under the direct guidance and supervision of teachers and parents / guardians".

© NCERT



ಕೃತಕ ಬುದ್ಧಿಮತ್ತೆಯೊಂದಿಗೆ ಸಂಯೋಜನೆ


D6N3H2

ಕಲಿಕೆಯ ಫಲಿತಾಂಶಗಳು : ವಿದ್ಯಾರ್ಥಿಗಳು ಈ ಕೆಳಗಿನವುಗಳನ್ನು ಮಾಡಬಲ್ಲರು:

1. ಡಿಜಿಟಲ್ ಮ್ಯಾಪಿಂಗ್ ಮತ್ತು ಜಿಪಿಎಸ್ ವ್ಯವಸ್ಥೆಗಳನ್ನು ಅರ್ಥ ಮಾಡಿಕೊಳ್ಳುವುದು.
2. ವಾತಾವರಣ, ಸಮುದ್ರ ಜೀವಿಗಳು ಮತ್ತು ಅರ್ಥಗೋಳಗಳನ್ನು ಸರಳವಾದ ಪದಗಳಲ್ಲಿ ವಿವರಿಸಲು AIನ್ನು ಕೇಳುವುದು.
3. ಪ್ರಾಚೀನ ವಸ್ತುಗಳ ಸಂಶೋಧಕ ಮತ್ತು ಇತಿಹಾಸಕಾರನ ನಡುವಿನ ವ್ಯತ್ಯಾಸವನ್ನು ವಿವರಿಸಲು AIನ್ನು ಕೇಳುವುದು.
4. ಜವಾಬ್ದಾರಿಗಳ ಬಗ್ಗೆ ಯೋಚಿಸುವುದು ಮತ್ತು AIನ್ನು ಸುರಕ್ಷಿತವಾಗಿ ಬಳಸಿಕೊಂಡು ಸಾಮಾಜಿಕ ಸಮಸ್ಯೆಗಳನ್ನು ಚರ್ಚಿಸುವುದು.
5. AI– ಸೃಷ್ಟಿಸಿದ ಸಾರಾಂಶಗಳನ್ನು ಉಪಯೋಗಿಸಿಕೊಂಡು ಹಿಂದಿನ ಮತ್ತು ವರ್ತಮಾನದ ಭಾರತವನ್ನು ಹೋಲಿಸಲು ಸಾಧ್ಯವಾಗುವುದು.
6. ವಂಶವೃಕ್ಷ ರೇಖಾ ಚಿತ್ರಗಳನ್ನು ರಚಿಸಲು AIನ್ನು ಬಳಸುವುದು.
7. ವಿವಿಧ ವೃತ್ತಿಗಳು ಮತ್ತು ಅಗತ್ಯವಿರುವ ಕೌಶಲ್ಯಗಳ ಬಗ್ಗೆ AIನ್ನು ಕೇಳಲು ಸಾಧ್ಯವಾಗುವುದು.

ಪರಿಚಯ :

ಸಮಾಜಶಾಸ್ತ್ರವು ಪ್ರದೇಶಗಳನ್ನು ಗುರ್ತಿಸುವುದು, ಘಟನೆಗಳನ್ನು ಕಾಲಾನುಕ್ರಮದಲ್ಲಿ ಜೋಡಿಸುವುದು, ಸಂಸ್ಕೃತಿಗಳನ್ನು ಅರ್ಥ ಮಾಡಿಕೊಳ್ಳುವುದು, ಕುಟುಂಬದ ಪಾತ್ರಗಳನ್ನು ಗುರುತಿಸುವುದು ಮತ್ತು ವಿವಿಧ ರೀತಿಯ ಕೆಲಸಗಳನ್ನು ವಿಶ್ಲೇಷಿಸುವಂತಹ ಮುಖ್ಯವಾದ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುತ್ತದೆ. ಈ ಕೌಶಲ್ಯಗಳು ವಿದ್ಯಾರ್ಥಿಗಳಿಗೆ ಸಮಾಜ, ಇತಿಹಾಸ, ಭೌಗೋಳಿಕಶಾಸ್ತ್ರ ಮತ್ತು ಮಾನವ ಸಂಬಂಧಗಳನ್ನು ವ್ಯವಸ್ಥಿತ ರೀತಿಯಲ್ಲಿ ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.



ಕೃತಕ ಬುದ್ಧಿಮತ್ತೆ (ಆರ್ಟಿಫಿಷಿಯಲ್ ಇಂಟಲಿಜೆನ್ಸ್–AI) ಸಹ ಇದೇ ರೀತಿ ಪ್ರಕ್ರಿಯೆಗಳನ್ನು ಬಳಸುತ್ತದೆ. AI ವ್ಯವಸ್ಥೆಗಳು ಮಾಹಿತಿಯನ್ನು ಸಂಗ್ರಹಿಸಿ, ಡೇಟಾವನ್ನು ನಿರ್ವಹಿಸಿ, ಮಾದರಿಗಳನ್ನು ಗುರ್ತಿಸಿ ಮತ್ತು ಉಪಯೋಗಕರವಾದ ಫಲಿತಾಂಶಗಳನ್ನು ಒದಗಿಸುತ್ತವೆ. ಡಿಜಿಟಲ್ ನಕ್ಷೆಗಳು,, ಕಾಲಾನುಕ್ರಮಗಳು ಸ್ಮಾರ್ಟ್ ಸಹಾಯಕರು ಮತ್ತು ಡೇಟಾ ಪ್ಲಾಟ್‌ಫಾರ್ಮ್‌ಗಳು ರಚನಾತ್ಮಕ ಮಾಹಿತಿ ಮತ್ತು ವಿಶ್ಲೇಷಣೆಯನ್ನು ಉಪಯೋಗಿಸಿಕೊಂಡು ಕೆಲಸ ಮಾಡುತ್ತದೆ.

ಡಿಸ್ಕ್ಲೈಮರ್ : "ವಿದ್ಯಾರ್ಥಿಗಳು AI ಪರಿಕರಗಳನ್ನು ಶಿಕ್ಷಕರ, ತಂದೆತಾಯಿಗಳು/ಪೋಷಕರ ಪ್ರತ್ಯೇಕ್ಷ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯಲ್ಲಿ ಮಾತ್ರ ಬಳಸಬೇಕು".

APSCERT

The chapters in this semester strengthen foundational social science skills. These same skills help students understand how intelligent systems collect, classify, organise, and analyse information. AI serves only as a supportive learning tool and does not replace textbooks, teachers, or classroom discussions.

Foundations of AI in Social Science Learning

The chapters of this semester develop important social science skills such as understanding maps, identifying places, arranging events in timelines, studying cultures, recognising communities, and understanding human activities. These skills are also applied in Artificial Intelligence (AI). Artificial Intelligence (AI) enables machines to collect information, recognise patterns, organise data, and make simple decisions. AI systems use satellite signals, sensors, and digital databases to collect information about locations, people, and activities. This information is converted into digital data that computers can understand and process. By studying these lessons, simple AI terminology can also be understood, and the connection between Social Science and modern technology becomes clear.

Social Science is not limited to studying maps, history, culture, family, and work. It also develops skills such as careful observation, identifying locations, arranging events in timelines, classifying cultures, and understanding social relationships. Locating places using latitude and longitude builds the skill of location identification. Arranging historical events in chronological order develops sequencing skills. Studying cultures, families, communities, and occupations helps us understand comparison, classification, and social organisation.

In all these situations, observation, organisation, classification, and interpretation help in understanding society more clearly. Machines can also perform similar tasks. A mobile phone shows location using GPS and satellite data. Digital maps help in finding places and directions. Online museum applications organise historical information and show timelines. Digital platforms store information about people, culture, and provide useful outputs.

These functions are possible because of Artificial Intelligence (AI). Artificial Intelligence (AI) is the ability of machines to perform tasks that involve data collection, organisation, analysis, and decision-making. The collected information is converted into digital data, analysed through data processing, and used to produce meaningful outputs.

Guidance: This section should be introduced through guided discussion, encouraging students to answer reflective questions using examples from maps, timelines, culture, family, and daily life. Help them recognise key Social Science skills such as locating places, understanding timelines, identifying cultural roots, recognising family roles, and valuing different types of work.

AP SCERT

ಈ ಸೆಮಿಸ್ಟರ್‌ನಲ್ಲಿರವ ಅಧ್ಯಾಯಗಳು ಮೂಲಭೂತ ಸಮಾಜಶಾಸ್ತ್ರದ ಕೌಶಲ್ಯಗಳನ್ನು ಬಲಪಡಿಸುತ್ತವೆ. ಬುದ್ಧಿವಂತ ವ್ಯವಸ್ಥೆಗಳು ಮಾಹಿತಿಯನ್ನು ಹೇಗೆ ಸಂಗ್ರಹಿಸಿ, ವರ್ಗೀಕರಿಸಿ, ನಿರ್ವಹಿಸಿ ಮತ್ತು ವಿಶ್ಲೇಷಿಸುತ್ತವೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಈ ಕೌಶಲ್ಯ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತವೆ. AI ಕೇವಲ ಸಹಾಯಕ ಕಲಿಕಾ ಸಾಧನವಾಗಿ ಮಾತ್ರ ಕೆಲಸ ಮಾಡುತ್ತದೆ. ಮತ್ತು ಇದು ಪಠ್ಯಪುಸ್ತಕಗಳು, ಶಿಕ್ಷಕರು ಅಥವಾ ತರಗತಿಯ ಚರ್ಚೆಗಳಿಗೆ ಪರ್ಯಾಯವಲ್ಲ.

ಸಮಾಜ ವಿಜ್ಞಾನ ಕಲಿಕೆಯಲ್ಲಿ AI ಮೂಲಭೂತ ಅಂಶಗಳು

ಈ ಸೆಮಿಸ್ಟರ್‌ನಲ್ಲಿರುವ ಅಧ್ಯಾಯಗಳು ನಕ್ಷೆಗಳನ್ನು ಅರ್ಥಮಾಡಿಕೊಳ್ಳುವುದು, ಸ್ಥಳಗಳನ್ನು ಗುರ್ತಿಸುವುದು, ಕಾಲಾನುಕ್ರಮದಲ್ಲಿ ಘಟನೆಗಳನ್ನು ಜೋಡಿಸುವುದು, ಸಂಸ್ಕೃತಿಗಳನ್ನು ಅಧ್ಯಯನ ಮಾಡುವುದು, 'ಸಾಮಾಜಿಕ ಸಮುದಾಯಗಳನ್ನು ಗುರ್ತಿಸುವುದು' ಮತ್ತು ಮಾನವ ಚಟುವಟಿಕೆಗಳನ್ನು ಅರ್ಥ ಮಾಡಿಕೊಳ್ಳುವಂತಹ ಪ್ರಮುಖ ಸಮಾಜ ವಿಜ್ಞಾನದ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುತ್ತವೆ. ಈ ಕೌಶಲ್ಯಗಳು ಆರ್ಟಿಫಿಷಿಯಲ್ ಇಂಟಲಿಜೆನ್ಸ್‌ಗೆ (AI) ಸಹ ಅನ್ವಯಿಸುತ್ತದೆ. AI ಯಂತ್ರಗಳು ಮಾಹಿತಿಯನ್ನು ಸಂಗ್ರಹಿಸಲು, ಮಾದರಿಗಳನ್ನು ಗುರ್ತಿಸಲು, ಡೇಟಾವನ್ನು ನಿರ್ವಹಿಸುವುದು ಮತ್ತು ಸರಳ ನಿರ್ಧಾರಗಳನ್ನು ತೆಗೆದುಕೊಳ್ಳಲು ಅನುಕೂಲ ಮಾಡಿಕೊಡುತ್ತದೆ. AI ವ್ಯವಸ್ಥೆಗಳು, ಸ್ಥಳಗಳು, ಜನರು ಮತ್ತು ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಉಪಗ್ರಹ ಸಂಕೇತಗಳು, ಸೆನ್ಸಾರ್‌ಗಳು ಮತ್ತು ಡೇಟಾಬೇಸ್‌ಗಳನ್ನು ಉಪಯೋಗಿಸುತ್ತವೆ. ನಂತರ ಈ ಮಾಹಿತಿಯನ್ನು ಕಂಪ್ಯೂಟರ್‌ಗಳು ಅರ್ಥಮಾಡಿಕೊಳ್ಳಬಹುದಾದ ಮತ್ತು ಪ್ರಕ್ರಿಯೆಗೊಳಿಸಬಹುದಾದ ಡಿಜಿಟಲ್ ಡೇಟಾ ಆಗಿ ಪರಿವರ್ತಿಸಲಾಗುತ್ತದೆ. ಈ ಪಾಠಗಳನ್ನು ಅಧ್ಯಯನ ಮಾಡುವ ಮೂಲಕ ಸರಳವಾದ AI ಪರಿಭಾಷೆಯನ್ನು ಸಹ ಅರ್ಥಮಾಡಿಕೊಳ್ಳಬಹುದು ಮತ್ತು ಸಮಾಜ ವಿಜ್ಞಾನ ಹಾಗೂ ಆಧುನಿಕ ತಂತ್ರಜ್ಞಾನದ ನಡುವಿನ ಸಂಪರ್ಕವು ಸ್ಪಷ್ಟವಾಗುತ್ತದೆ.


ಸಮಾಜ ವಿಜ್ಞಾನವು ಕೇವಲ ನಕ್ಷೆಗಳು, ಇತಿಹಾಸ, ಸಂಸ್ಕೃತಿ, ಕುಟುಂಬ ಮತ್ತು ಕೆಲಸವನ್ನು ಅಧ್ಯಯನ ಮಾಡುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಇದು ಜಾಗ್ರತೆಯಿಂದ ಗಮನಿಸುವುದು, ಸ್ಥಳಗಳನ್ನು ಗುರ್ತಿಸುವುದು, ಘಟನೆಗಳನ್ನು ಕಾಲಾನುಕ್ರಮದಲ್ಲಿ ಜೋಡಿಸುವುದು, ಸಂಸ್ಕೃತಿಗಳನ್ನು ವರ್ಗೀಕರಿಸುವುದು ಮತ್ತು ಸಾಮಾಜಿಕ ಸಂಬಂಧಗಳನ್ನು ಅರ್ಥಮಾಡಿಕೊಳ್ಳುವುದು ಮುಂತಾದ ಕೌಶಲ್ಯಗಳನ್ನು ಸಹ ಅಭಿವೃದ್ಧಿಪಡಿಸುತ್ತದೆ. ಅಕ್ಷಾಂಶ ಮತ್ತು ರೇಖಾಂಶಗಳನ್ನು ಉಪಯೋಗಿಸಿಕೊಂಡು ಸ್ಥಳಗಳನ್ನು ಗುರ್ತಿಸುವ ಮೂಲಕ ಪ್ರಾದೇಶಿಕ ಗುರ್ತಿಸುವ ಕೌಶಲ್ಯಗಳನ್ನು ಹೆಚ್ಚಿಸುತ್ತದೆ. ಐತಿಹಾಸಿಕ ಘಟನೆಗಳನ್ನು ಕಾಲಾನುಕ್ರಮದಲ್ಲಿ ಜೋಡಿಸುವುದು, ವಿಂಗಡಿಸುವ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸುತ್ತದೆ. ಸಂಸ್ಕೃತಿಗಳು, ಕುಟುಂಬಗಳು, ಸಮಾಜಗಳು ಮತ್ತು ವೃತ್ತಿಗಳನ್ನು ಅಧ್ಯಯನ ಮಾಡುವುದು ನಮಗೆ ಸಾಮಾಜಿಕ ವ್ಯವಸ್ಥೆಗಳನ್ನು ಹೋಲಿಸಲು, ವರ್ಗೀಕರಿಸಲು ಮತ್ತು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ.

ಈ ಸಂದರ್ಭಗಳಲ್ಲಿ ವೀಕ್ಷಣೆ, ಸಂಘಟನೆ, ವರ್ಗೀಕರಣ ಮತ್ತು ವಿವರಣೆಯು ಸಮಾಜವನ್ನು ಇನ್ನೂ ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ ಹಾಗೂ ಯಂತ್ರಗಳು ಸಹ ಇದೇ ರೀತಿಯ ಕೆಲಸಗಳನ್ನು ಮಾಡಬಲ್ಲವು. ಮೊಬೈಲ್ ಫೋನ್‌ನ್ನು, ಜಿ.ಪಿ.ಎಸ್ ಮತ್ತು ಉಪಗ್ರಹ ಡೇಟಾ ಬಳಸಿಕೊಂಡು ಪ್ರದೇಶಗಳನ್ನು ತೋರಿಸುತ್ತದೆ. ಡಿಜಿಟಲ್ ನಕ್ಷೆಗಳು ಪ್ರದೇಶಗಳು ಮತ್ತು ದಿಕ್ಕುಗಳನ್ನು ಕಂಡುಹಿಡಿಯಲು ಸಹಾಯ ಮಾಡುತ್ತವೆ, ಆನ್‌ಲೈನ್ ಮ್ಯೂಜಿಯಂಗಳು, ಐತಿಹಾಸಿಕ ಮಾಹಿತಿಯನ್ನು ಸಂಗ್ರಹಿಸುತ್ತವೆ ಮತ್ತು ಸಮಯ ಸೂಚಿಗಳನ್ನು ತೋರಿಸುತ್ತವೆ. ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳು ಜನರು, ಸಂಸ್ಕೃತಿಯ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುತ್ತವೆ ಮತ್ತು ಉತ್ತಮ ಫಲಿತಾಂಶಗಳಣ್ನು ಒದಗಿಸುತ್ತವೆ.

ಈ ಎಲ್ಲಾ ಕಾರ್ಯಗಳು AI ನಿಂದ ಮಾತ್ರ ಸಾಧ್ಯವಾಗುತ್ತದೆ. ಕೃತಕ ಬುದ್ಧಿಮತ್ತೆ (AI) ಎಂದರೆ ದತ್ತಾಂಶ ಸಂಗ್ರಹಣೆ, ನಿರ್ವಹಣೆ, ವಿಶ್ಲೇಷಣೆ ಮತ್ತು ನಿರ್ಧಾರ ತೆಗೆದುಕೊಳ್ಳುವಿಕೆಯನ್ನು ಒಳಗೊಂಡಿರುವ ಕಾರ್ಯಗಳನ್ನು ನಿರ್ವಹಿಸುವ ಯಂತ್ರಗಳ ಸಾಮರ್ಥ್ಯವಾಗಿದೆ. ಸಂಗ್ರಹಿಸಿದ ಮಾಹಿತಿಯನ್ನು ಡಿಜಿಟಲ್ ಡೇಟಾ ಆಗಿ ಪರಿವರ್ತಿಸಲಾಗುತ್ತದೆ, ದತ್ತಾಂಶ ಸಂಸ್ಕರಣೆಯ ಮೂಲಕ ವಿಶ್ಲೇಷಿಸಲಾಗುತ್ತದೆ ಮತ್ತು ಅರ್ಥಪೂರ್ಣ ಫಲಿತಾಂಶಗಳನ್ನು ಉತ್ಪಾದಿಸಲು ಬಳಸಲಾಗುತ್ತದೆ.

ಮಾರ್ಗದರ್ಶನ : ಈ ವಿಭಾಗವನ್ನು ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಚರ್ಚೆಯ ಮೂಲಕ ಪರಿಚಯಿಸಬೇಕು. ಟೈಮ್‌ಲೈನ್‌ಗಳು, ಸಂಸ್ಕೃತಿ, ಕುಟುಂಬ, ದೈನಂದಿನ ಜೀವನ ಮತ್ತು ನಕ್ಷೆಗಳಿಂದ ಉದಾಹರಣೆಗಳನ್ನು ಬಳಸಿಕೊಂಡು ಚಿಂತನಶೀಲ ಪ್ರಶ್ನೆಗಳಿಗೆ ಉತ್ತರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕು. ಸ್ಥಳಗಳನ್ನು ಪತ್ತೆ ಹಚ್ಚುವುದು, ಟೈಮ್‌ಲೈನ್‌ಗಳನ್ನು ಅರ್ಥ ಮಾಡಿಕೊಳ್ಳುವುದು, ಸಾಂಸ್ಕೃತಿಕ ಮೂಲಗಳನ್ನು ಗುರ್ತಿಸುವುದು, ಕುಟುಂಬದ ಪಾತ್ರಗಳನ್ನು ಗುರ್ತಿಸುವುದು ಮತ್ತು ವಿವಿಧ ರೀತಿಯ ಕೆಲಸಗಳನ್ನು ಮೌಲ್ಯಮಾಪನ ಮಾಡುವಂತಹ ಪ್ರಮುಖ ಸಮಾಜ ವಿಜ್ಞಾನ ಕೌಶಲ್ಯಗಳನ್ನು ಗುರುತಿಸಲು ಅವರಿಗೆ ಸಹಾಯ ಮಾಡಬೇಕು.

APSCERT




Maps and globes help us locate places using directions, latitudes, and longitudes. These imaginary lines help in identifying the exact position of any place on Earth. Latitudes measure distance from the Equator, and longitudes measure distance from the Prime Meridian. This helps people travel and understand the world better. Similarly, AI-based navigation systems use satellites and digital maps to locate places. The satellite sends signals to the device. The device receives the signals and calculates the location. This location is shown on the screen as digital output.

Thinking with AI :	When you use Google Maps, how does the mobile find your exact location? Explain how satellite signals are received and displayed.
Key Words:	**GPS** – System that detects location using satellites **Satellite** – Object that sends signals from space **Digital Map** – Map shown by computer **Output:** The result or answer we get after doing a process, activity, or work.

AP SCERT

Example 2: Oceans and Continents






ದಿಕ್ಕುಗಳು, ಅಕ್ಷಾಂಶಗಳು ಮತ್ತು ರೇಖಾಂಶಗಳನ್ನು ಉಪಯೋಗಿಸಿಕೊಂಡು ಪ್ರದೇಶಗಳನ್ನು ಗುರ್ತಿಸಲು ನಕ್ಷೆಗಳು ಮತ್ತು ಗ್ಲೋಬ್‌ಗಳು ನಮಗೆ ಸಹಾಯ ಮಾಡುತ್ತವೆ. ಈ ಕಾಲ್ಪನಿಕ ರೇಖೆಗಳು ಭೂಮಿಯ ಮೇಲಿನ ಯಾವುದೇ ಪ್ರದೇಶದ ನಿಖರವಾದ ಸ್ಥಾನವನ್ನು ನಿರ್ಧರಿಸಲು ನಮಗೆ ಸಹಾಯ ಮಾಡುತ್ತವೆ. ಅಕ್ಷಾಂಶಗಳು ಭೂಮಧ್ಯ ರೇಖೆಯಿಂದ ದೂರವನ್ನು ಅಳೆಯುತ್ತವೆ ಮತ್ತು ರೇಖಾಂಶಗಳು ಪ್ರಧಾನ ರೇಖಾಂಶದಿಂದ ದೂರವನ್ನು ಅಳೆಯುತ್ತವೆ. ಇವು ಜನರು ಪ್ರಯಾಣಿಸಲು ಮತ್ತು ಪ್ರಪಂಚವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತವೆ. ಅದೇ ರೀತಿ AI ಆಧಾರಿತ ನ್ಯಾವಿಗೇಷನ್ ವ್ಯವಸ್ಥೆಗಳು ಪ್ರದೇಶಗಳನ್ನು ಗುರ್ತಿಸಲು ಉಪಗ್ರಹಗಳು ಮತ್ತು ಡಿಜಿಟಲ್ ನಕ್ಷೆಗಳನ್ನು ಬಳಸುತ್ತವೆ. ಉಪಗ್ರಹವು ಸಾಧನಗಳಿಗೆ ಸಂಕೇತಗಳನ್ನು ಕಳುಹಿಸುತ್ತವೆ. ಸಾಧನವು ಆ ಸಂಕೇತಗಳನ್ನು ಸ್ವೀಕರಿಸಿ ಪ್ರದೇಶವನ್ನು ಗುರ್ತಿಸುತ್ತದೆ. ಈ ಪ್ರದೇಶವನ್ನು ಸ್ಕ್ರೀನ್‌ಮೇಲೆ ಡಿಜಿಟಲ್ ಫಲಿತಾಂಶವಾಗಿ ತೋರಿಸುತ್ತವೆ.

AI ಜೊತೆಗೆ ಯೋಚಿಸುವುದು:	ನೀವು ಗೂಗಲ್ ಮ್ಯಾಪ್‌ನ್ನು ಬಳಸುವಾಗ, ನಿಮ್ಮ ಮೊಬೈಲ್ ಫೋನ್ ನಿಮ್ಮ ನಿಖರವಾದ ಸ್ಥಾನವನ್ನು ಹೇಗೆ ಕಂಡುಕೊಳ್ಳುತ್ತದೆ? ಸ್ಯಾಟಲೈಟ್ ಸಂಕೇತಗಳು ಹೇಗೆ ಸ್ವೀಕರಿಸಲ್ಪಡುತ್ತವೆ ಮತ್ತು ಪ್ರದರ್ಶಿಸಲ್ಪಡುತ್ತವೆ ಎಂಬುದನ್ನು ವಿವರಿಸಿ.
ಮುಖ್ಯ ಪದಗಳು :	**GPS** – ಉಪಗ್ರಹಗಳನ್ನು ಬಳಸಿಕೊಂಡು ಸ್ಥಾನವನ್ನು ಗುರ್ತಿಸುವ ವ್ಯವಸ್ಥೆ **ಉಪಗ್ರಹ** – ಅಂತರಿಕ್ಷದಿಂದ ಸಂಕೇತಗಳನ್ನು ಕಳುಹಿಸುವ ವಸ್ತುವಾಗಿದೆ. **ಡಿಜಿಟಲ್ ಮ್ಯಾಪ್** – ಕಂಪ್ಯೂಟರ್ ಮೂಲಕ ತೋರಿಸುವ ನಕ್ಷೆ **ಅವುಟ್‌ಪುಟ್:** ಒಂದು ಪ್ರಕ್ರಿಯೆ, ಚಟುವಟಿಕೆ ಅಥವಾ ಕೆಲಸವನ್ನು ಮಾಡಿದ ನಂತರ ನಾವು ಪಡೆಯುವ ಫಲಿತಾಂಶ ಅಥವಾ ಉತ್ತರ.

ಉದಾಹರಣೆ–2: ಮಹಾಸಾಗರಗಳು ಮತ್ತು ಖಂಡಗಳು




APSCERT

Earth has vast oceans and large continents that shape climate and support life. Oceans bring rainfall, produce oxygen, and connect different regions of the world. Human activities like pollution and overfishing are harming marine life.AI helps by analysing digital maps and environmental data to study oceans, predict weather, and support better planning and protection.

Thinking with AI :	How does AI study geographical features using digital maps?
Key Words:	**Digital Map:** A digital map is a map shown on a computer or mobile to find places and directions. **Input:** Input is the information given to a computer to work on. **Data Analysis:** Data analysis is the process of studying information to understand and use it.

Example 3: Timeline and Sources of History



Historians study the past using timelines and sources. A timeline arranges events in chronological order. This helps students understand which event happened first and which happened later. Sources like coins, tools, and inscriptions help us know about history. Similarly, AI organises digital information into timelines. It stores large amounts of historical data. It arranges events in correct order. Digital museums use AI to show historical events clearly.

© APSCERT

ಭೂಮಿಯ ಮೇಲೆ ವಿಶಾಲವಾದ ಮಹಾಸಾಗರಗಳು ಮತ್ತು ದೊಡ್ಡ ಖಂಡಗಳು ಇವೆ. ಇವು ಹವಾಮಾನವನ್ನು ರೂಪಿಸಿ, ಜೀವವನ್ನು ಬೆಂಬಲಿಸುತ್ತವೆ. ಮಹಾಸಾಗರಗಳು ಮಳೆಯನ್ನು ತರುತ್ತವೆ, ಆಮ್ಲಜನಕವನ್ನು ಉತ್ಪಾದಿಸುತ್ತವೆ ಮತ್ತು ಪ್ರಪಂಚದ ವಿವಿಧ ಪ್ರದೇಶಗಳನ್ನು ಸಂಪರ್ಕಿಸುತ್ತವೆ. ಪ್ಲಾಸ್ಟಿಕ್ ಮತ್ತು ಅತಿಯಾದ ಮೀನುಗಾರಿಕೆಯಂತಹ ಮಾನವ ಚಟುವಟಿಕೆಗಳು ಸಮುದ್ರ ಜೀವಿಗಳಿಗೆ ಹಾನಿ ಮಾಡುತ್ತವೆ. ಸಾಗರಗಳನ್ನು ಅಧ್ಯಯನ ಮಾಡಲು, ಹವಾಮಾನವನ್ನು ಅಂದಾಜು ಮಾಡಲು ಮತ್ತು ಉತ್ತಮವಾದ ಯೋಜನೆ ಮತ್ತು ರಕ್ಷಣೆಗೆ ಬೆಂಬಲ ನೀಡಲು ಡಿಜಿಟಲ್ ನಕ್ಷೆಗಳು ಮತ್ತು ಪರಿಸರ ಡೇಟಾವನ್ನು ವಿಶ್ಲೇಷಿಸುವ ಮೂಲಕ ಸಹಾಯ AI ಮಾಡುತ್ತದೆ.

AI ಜೊತೆಗೆ ಯೋಚಿಸುವುದು:	ಡಿಜಿಟಲ್ ನಕ್ಷೆಯನ್ನು ಬಳಸಿಕೊಂಡು AI ಭೌಗೋಳಿಕ ವೈಶಿಷ್ಟ್ಯಗಳನ್ನು ಹೇಗೆ ಅಧ್ಯಯನ ಮಾಡುತ್ತದೆ?
ಮುಖ್ಯ ಪದಗಳು:	**ಡಿಜಿಟಲ್ ಮ್ಯಾಪ್:** ಪ್ರದೇಶಗಳು ಮತ್ತು ದಿಕ್ಕುಗಳನ್ನು ಕಂಡುಹಿಡಿಯಲು ಕಂಪ್ಯೂಟರ್ ಅಥವಾ ಮೊಬೈಲ್‌ನಲ್ಲಿ ತೋರಿಸುವ ನಕ್ಷೆಯನ್ನು ಡಿಜಿಟಲ್ ಮ್ಯಾಪ್ ಎನ್ನುವರು. **ಇನ್‌ಪುಟ್:** ಕಂಪ್ಯೂಟರ್‌ಗೆ ಕೆಲಸ ಮಾಡಲು ನೀಡಲಾಗುವ ಮಾಹಿತಿಯನ್ನು ಇನ್‌ಪುಟ್ ಎನ್ನುವರು **ಡೇಟಾ ವಿಶ್ಲೇಷಣೆ:** ಮಾಹಿತಿಯನ್ನು ಅರ್ಥಮಾಡಿಕೊಳ್ಳಲು ಮತ್ತು ಉಪಯೋಗಿಸಲು ಅದನ್ನು ಅಧ್ಯಯನ ಮಾಡುವ ಪ್ರಕ್ರಿಯೆಯನ್ನು ಡೇಟಾ ವಿಶ್ಲೇಷಣೆ ಎಂದು ಕರೆಯುತ್ತಾರೆ.

ಉದಾಹರಣೆ–3: ಇತಿಹಾಸದ ಕಾಲಾನುಕ್ರಮ ಮತ್ತು ಆಧಾರಗಳು




ಇತಿಹಾಸಕಾರರು ಕಾಲಾನುಕ್ರಮ ಮತ್ತು ಆಧಾರಗಳನ್ನು ಉಪಯೋಗಿಸಿಕೊಂಡು ಗತಕಾಲವನ್ನು ಅಧ್ಯಯನ ಮಾಡುತ್ತಾರೆ. ಒಂದು ಟೈಮ್‌ಲೈನ್ ಘಟನೆಗಳನ್ನು ಕಾಲಾನುಕ್ರಮದಲ್ಲಿ ಜೋಡಿಸುತ್ತದೆ. ಯಾವ ಘಟನೆಗಳು ಮೊದಲು ಬಂದವು ಮತ್ತು ಯಾವುದು ನಂತರ ಬಂದವು ಎಂಬುದನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳಲು ಇದು ಸಹಾಯ ಮಾಡುತ್ತದೆ. ನಾಣ್ಯಗಳು, ಉಪಕರಣಗಳು ಮತ್ತು ಶಾಸನಗಳಂತಹ ಆಧಾರಗಳು ಇತಿಹಾಸದ ಬಗ್ಗೆ ತಿಳಿದುಕೊಳ್ಳಲು ನಮಗೆ ಸಹಾಯ ಮಾಡುತ್ತವೆ. ಅದೇ ರೀತಿ, AI ಡಿಜಿಟಲ್ ಮಾಹಿತಿಯನ್ನು ಕಾಲಾನುಕ್ರಮದಲ್ಲಿ ಜೋಡಿಸುತ್ತದೆ. ಇದು ಘಟನೆಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸುತ್ತದೆ. ಡಿಜಿಟಲ್ ಮ್ಯೂಜಿಯಂಗಳು ಐತಿಹಾಸಿಕ ಘಟನೆಗಳನ್ನು ಸ್ಪಷ್ಟವಾಗಿ ತೋರಿಸಲು AI ಅನ್ನು ಉಪಯೋಗಿಸುತ್ತೇವೆ.

APSCERT

Thinking with AI :	How does AI organise thousands of historical events into proper order?
Key Words:	**Timeline** – Arrangement of events **Data** – Information collected **Digital Storage** – Saving information in computer

Example 4: India that is Bharat



APSCERT

Archaeologists study the remains of old cities . They find tools, houses, and seals. This helps us understand ancient civilisation. Similarly, AI studies images of old objects. It analyses patterns. It reconstructs ancient cities digitally. It helps historians understand history.

Thinking with AI :	How does AI reconstruct ancient cities from ruins?
Key Words:	**Archaeology:** The study of old objects and remains to learn about the past. **Pattern Recognition:** Finding repeated designs or similarities in information. **Digital Reconstruction:** Creating a computer-based model of ancient objects or places.

AI ಜೊತೆಗೆ ಯೋಚಿಸುವುದು:	ಸಾವಿರಾರು ಐತಿಹಾಸಿಕ ಘಟನೆಗಳನ್ನು AI ಸರಿಯಾದ ಕ್ರಮದಲ್ಲಿ ಹೇಗೆ ವ್ಯವಸ್ಥೀಕರಿಸುತ್ತದೆ?
ಮುಖ್ಯ ಪದಗಳು :	**ಟೈಮ್‌ಲೈನ್** – ಘಟನೆಗಳ ಜೋಡಣೆ **ಡೇಟಾ** – ಸಂಗ್ರಹಿಸಿದ ಮಾಹಿತಿ **ಡಿಜಿಟಲ್ ಸಂಗ್ರಹಣೆ** – ಕಂಪ್ಯೂಟರ್‌ನಲ್ಲಿ ಮಾಹಿತಿ ಸೇವ್ ಮಾಡುವುದು.

ಉದಾಹರಣೆ–4: ಇಂಡಿಯಾ ಅಂದರೆ ಭಾರತ



ಪುರಾತತ್ವ ಶಾಸ್ತ್ರಜ್ಞರು ಪ್ರಾಚೀನ ವಸ್ತುಗಳ ಅವಶೇಷಗಳನ್ನು ಉಪಯೋಗಿಸಿಕೊಂಡು, ಹಳೆಯ ನಗರಗಳನ್ನು ಅಧ್ಯಯನ ಮಾಡುತ್ತಾರೆ. ಅವರು ಉಪಕರಣಗಳು, ಮನೆಗಳು ಮತ್ತು ಮುದ್ರೆಗಳನ್ನು ಕಂಡುಹಿಡಿಯುತ್ತಾರೆ. ಇದು ಪ್ರಾಚೀನ ನಾಗರಿಕತೆಯನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯ ಮಾಡುತ್ತದೆ. ಅದೇ ರೀತಿ, AI ಹಳೆಯ ವಸ್ತುಗಳ ಚಿತ್ರಗಳನ್ನು ಅಧ್ಯಯನ ಮಾಡುತ್ತದೆ. ಇದು ಮಾದರಿಗಳನ್ನು ವಿಶ್ಲೇಷಿಸುತ್ತದೆ. ಇದು ಪ್ರಾಚೀನ ನಗರಗಳನ್ನು ಡಿಜಿಟಲ್ ಆಗಿ ಪುನರ್ನಿರ್ಮಿಸುತ್ತದೆ. ಇದು ಇತಿಹಾಸಕಾರರಿಗೆ ಇತಿಹಾಸವನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.

AI ಜೊತೆಗೆ ಯೋಚಿಸುವುದು:	ಪ್ರಾಚೀನ ನಗರಗಳನ್ನು ಅವಶೇಷಗಳಿಂದ AI ಹೇಗೆ ಪುನಃನಿರ್ಮಿಸುತ್ತದೆ?
ಮುಖ್ಯ ಪದಗಳು:	**ಪುರಾತತ್ವ ಸಂಶೋಧನೆ:** ಗತಕಾಲದ ಬಗ್ಗೆ ತಿಳಿದುಕೊಳ್ಳಲು ಹಳೆಯ ವಸ್ತುಗಳು ಮತ್ತು ಅವಶೇಷಗಳ ಅಧ್ಯಯನ. **ಮಾದರಿ ಗುರ್ತಿಸುವಿಕೆ :** ಮಾಹಿತಿಯಲ್ಲಿ ಪುನರಾವರ್ತಿತ ಡಿಜೈನ್‌ಗಳು ಅಥವಾ ಹೋಲಿಕೆಗಳನ್ನು ಕಂಡುಹಿಡಿಯುವುದು. **ಡಿಜಿಟಲ್ ಪುನರ್ನಿರ್ಮಾಣ:** ಪ್ರಾಚೀನ ವಸ್ತುಗಳು ಅಥವಾ ಸ್ಥಳಗಳ ಕಂಪ್ಯೂಟರ್ ಆಧಾರಿತ ಮಾದರಿಯನ್ನು ಸೃಷ್ಟಿಸುವುದು.

AP SCERT

Example 5: India's Cultural Roots



The Vedas are ancient texts of India. They contain knowledge and teachings. They were passed orally. Today, AI stores such knowledge digitally. It organises information. It helps students learn easily. It explains concepts clearly.

Thinking with AI :	How does AI store and explain cultural knowledge?
Key Words :	**Digital Library:** A digital library is a collection of books and information stored on a computer or internet. **Database:** A database is an organized collection of information stored in a computer. **Input:** Input is the information given to a computer to process.

AP SCERT

ಉದಾಹರಣೆ–5: ಭಾರತದ ಸಾಂಸ್ಕೃತಿಕ ಮೂಲಗಳು




ವೇದಗಳು ಭಾರತದೇಶದ ಪ್ರಾಚೀನ ಗ್ರಂಥಗಳಾಗಿವೆ. ಅವುಗಳಲ್ಲಿ ಜ್ಞಾನ ಮತ್ತು ಬೋಧನೆಗಳಿವೆ. ಅವು ಮೌಖಿಕವಾಗಿ ಪ್ರಚಾರ ಮಾಡಲ್ಪಟ್ಟಿವೆ. ಇಂದು, AI ಅಂತಹ ಜ್ಞಾನವನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸುತ್ತದೆ. ಇದು ಮಾಹಿತಿಯನ್ನು ನಿರ್ವಹಿಸುತ್ತದೆ. ಇದು ವಿದ್ಯಾರ್ಥಿಗಳು ಸುಲಭವಾಗಿ ಕಲಿಯಲು ಸಹಾಯ ಮಾಡುತ್ತವೆ. ಇದು ಪರಿಕಲ್ಪನೆಗಳನ್ನು ಸ್ಪಷ್ಟವಾಗಿ ವಿವರಿಸುತ್ತದೆ.

AI ಜೊತೆಗೆ ಯೋಚಿಸುವುದು :	AI ಸಾಂಸ್ಕೃತಿಕ ಜ್ಞಾನವನ್ನು ಹೇಗೆ ಸಂಗ್ರಹಿಸುತ್ತದೆ ಮತ್ತು ನಿರ್ವಹಿಸುತ್ತದೆ?
ಮುಖ್ಯ ಪದಗಳು:	**ಡಿಜಿಟಲ್ ಗ್ರಂಥಾಲಯ:** ಡಿಜಿಟಲ್ ಗ್ರಂಥಾಲಯವು ಕಂಪ್ಯೂಟರ್ ಅಥವಾ ಇಂಟರ್ನೆಟ್‌ನಲ್ಲಿ ಸಂಗ್ರಹವಾಗಿರುವ ಪುಸ್ತಕಗಳು ಮತ್ತು ಮಾಹಿತಿಯ ಸಂಗ್ರಹವಾಗಿದೆ. **ಡೇಟಾಬೇಸ್ :** ಡೇಟಾ ಬೇಸ್ ಎಂದರೆ ಕಂಪ್ಯೂಟರ್‌ಲ್ಲಿ ಸಂಗ್ರಹವಾಗಿರುವ ಮಾಹಿತಿಯ ವ್ಯವಸ್ಥಿಕೃತ ಸಂಗ್ರಹ. **ಇನ್‌ಪುಟ್:** ಕಂಪ್ಯೂಟರ್ ಪ್ರಾಸೆಸ್ ಮಾಡಲು ನೀಡಲಾದ ಮಾಹಿತಿಯೇ ಇನ್‌ಪುಟ್.

AP SCERT

Example 6: Family and Community




Family members help and support each other. Each member has roles and responsibilities. Similarly, AI helps people in daily life. Smart assistants help families. They give reminders. They help manage work. They support people.

Thinking with AI :	How does AI help families in daily life?
Key Words:	**Smart Assistant:** A smart assistant is an AI program that helps users by answering questions and doing tasks. **Input:** Input is the information given to a computer or AI system. **Processing:** Processing is the work done by a computer or AI to understand the input.

AP SCERT

ಉದಾಹರಣೆ–6: ಕುಟುಂಬ ಮತ್ತು ಸಮಾಜ




ಕುಟುಂಬದ ಸದಸ್ಯರು ಪರಸ್ಪರ ಸಹಾಯ ಮಾಡುತ್ತಾರೆ ಮತ್ತು ಬೆಂಬಲ ನೀಡುತ್ತಾರೆ. ಪ್ರತಿಯೊಬ್ಬ ಸದಸ್ಯನಿಗೂ ಪಾತ್ರಗಳು ಮತ್ತು ಜವಾಬ್ದಾರಿಗಳಿರುತ್ತವೆ. ಅದೇ ರೀತಿ, AI ದೈನಂದಿನ ಜೀವನದಲ್ಲಿ ಜನರಿಗೆ ಸಹಾಯ ಮಾಡುತ್ತದೆ. ಸ್ಮಾರ್ಟ್ ಅಸಿಸ್ಟೆಂಟ್ ವ್ಯವಸ್ಥೆಗಳು ಕುಟುಂಬಗಳಿಗೆ ಸಹಾಯ ಮಾಡುತ್ತದೆ. ಅವು ರಿಮೈಂಡರ್‌ಗಳನ್ನು ನೀಡುತ್ತದೆ. ಅವು ಕೆಲಸವನ್ನು ನಿರ್ವಹಿಸಲು ಸಹಾಯ ಮಾಡುತ್ತವೆ. ಅವು ಜನರಿಗೆ ಬೆಂಬಲ ನೀಡುತ್ತವೆ.

AI ಜೊತೆಗೆ ಯೋಚಿಸುವುದು:	AI ದೈನಂದಿನ ಜೀವನದಲ್ಲಿ ಕುಟುಂಬಗಳಿಗೆ ಹೇಗೆ ಸಹಾಯ ಮಾಡುತ್ತದೆ?
ಮುಖ್ಯ ಪದಗಳು:	**ಸ್ಮಾರ್ಟ್ ಅಸಿಸ್ಟೆಂಟ್:** ಸ್ಮಾರ್ಟ್‌ಅಸಿಸ್ಟೆಂಟ್ ಎನ್ನುವುದು ಒಂದು AI ಪ್ರೋಗ್ರಾಮ್ ಆಗಿದ್ದು ಅದನ್ನು ವಿನಿಯೋಗದಾರರಿಗೆ ಪ್ರಶ್ನೆಗಳಿಗೆ ಉತ್ತರಿಸುವುದು ಮತ್ತು ಕೆಲಸಗಳನ್ನು ಮಾಡುವ ಮೂಲಕ ಸಹಾಯ ಮಾಡುತ್ತದೆ. **ಇನ್‌ಪುಟ್:** ಇನ್‌ಪುಟ್ ಎಂದರೆ ಕಂಪ್ಯೂಟರ್ ಅಥವಾ AI ವ್ಯವಸ್ಥೆಗೆ ಒದಗಿಸಲಾದ ಮಾಹಿತಿ. **ಪ್ರಾಸೆಸಿಂಗ್:** ಇನ್‌ಪುಟ್‌ನ್ನು ಅರ್ಥ ಮಾಡಿಕೊಳ್ಳಲು ಕಂಪ್ಯೂಟರ್ ಅಥವಾ AI ಮಾಡುವ ಕೆಲಸವನ್ನು ಪ್ರಾಸೆಸಿಂಗ್ ಎನ್ನುವರು.

AP SCERT

Example 7: The Value of Work




People do different types of work. Some work earns money. Some work helps others. Similarly, AI helps people in work. It helps doctors, engineers, and teachers. It improves efficiency. It supports human work.

Thinking with AI :	How does AI help people in their jobs?
Key Words:	**Automation:** Automation means machines do work automatically without human help. **Data:** Data means information collected in the form of numbers, words, or measurements. **Processing:** Processing means changing data into useful information.

Guidance: Before using AI, first teach the related Social Science concepts through activities like using maps and globes, identifying India's physical features,arranging timelines, discussing cultural traditions, and understanding family roles and types of work. Ensure students clearly understand ideas such as location, timeline, culture, social organisation, and economic activities before connecting them to AI. Use classroom tools like atlases, charts, family trees, and timelines before introducing digital maps or AI tools.

AP SCERT

ಉದಾಹರಣೆ–7: ಶ್ರಮದ ಮೌಲ್ಯ



ಜನರು ವಿವಿಧ ರೀತಿಯ ಕೆಲಸಗಳನ್ನು ಮಾಡುತ್ತಾರೆ. ಕೆಲವು ಕೆಲಸಗಳು ಹಣವನ್ನು ಗಳಿಸುತ್ತವೆ. ಕೆಲವು ಕೆಲಸಗಳು ಇತರರಿಗೆ ಸಹಾಯ ಮಾಡುತ್ತವೆ. ಅದೇ ರೀತಿ, AI ಕೆಲಸದಲ್ಲಿ ಜನರಿಗೆ ಸಹಾಯ ಮಾಡುತ್ತದೆ. ಇದು ವೈದ್ಯರು, ಇಂಜಿನಿಯರ್‌ಗಳು ಮತ್ತು ಶಿಕ್ಷಕರಿಗೆ ಸಹಾಯ ಮಾಡುತ್ತದೆ. ಇದು ಸಾಮಾರ್ಥ್ಯವನ್ನು ಸುಧಾರಿಸುತ್ತದೆ. ಇದು ಮಾನವ ಶ್ರಮವನ್ನು ಬೆಂಬಲಿಸುತ್ತದೆ.

AI ಜೊತೆ ಯೋಚಿಸುವುದು:	ಜನರಿಗೆ ಅವರ ಉದ್ಯೋಗಗಳಲ್ಲಿ AI ಹೇಗೆ ಸಹಾಯ ಮಾಡುತ್ತದೆ?
ಮುಖ್ಯ ಪದಗಳು:	**ಆಟೋಮೇಷನ್:** ಆಟೋಮೇಷನ್ ಎಂದರೆ ಮಾನವ ಸಹಾಯವಿಲ್ಲದೆ ಯಂತ್ರಗಳು ಕೆಲಸ ಮಾಡಿಕೊಳ್ಳುವುದು. **ಡೇಟಾ:** ಡೇಟಾ ಅಂದರೆ ಸಂಖ್ಯೆಗಳು, ಪದಗಳು ಅಥವಾ ಅಳತೆಗಳ ರೂಪದಲ್ಲಿ ಸಂಗ್ರಹಿಸಲಾದ ಮಾಹಿತಿಯಾಗಿದೆ. **ಪ್ರಾಸೆಸಿಂಗ್:** ಡೇಟಾವನ್ನು ಉಪಯುಕ್ತ ಮಾಹಿತಿಯಾಗಿ ಪರಿವರ್ತಿಸುವ ಪ್ರಕ್ರಿಯೆ.

ಮಾರ್ಗದರ್ಶನ : AI ಅನ್ನು ಉಪಯೋಗಿಸುವ ಮೊದಲು, ನಕ್ಷೆಗಳು ಮತ್ತು ಗ್ಲೋಬ್‌ಗಳನ್ನು ಬಳಸುವುದು, ಕಾಲಾನುಕ್ರಮಗಳನ್ನು ಜೋಡಿಸುವುದು, ಭಾರತದ ಭೌತಿಕ ಲಕ್ಷಣಗಳನ್ನು ಗುರ್ತಿಸುವುದು, ಸಾಂಸ್ಕೃತಿಕ ಸಂಪ್ರದಾಯಗಳನ್ನು ಕುರಿತು ಚರ್ಚಿಸುವುದು ಮತ್ತು ಕುಟುಂಬದ ಪಾತ್ರಗಳು ಹಾಗೂ ಕೆಲಸದ ಪ್ರಕಾರಗಳನ್ನು ಅರ್ಥ ಮಾಡಿಕೊಳ್ಳುವುದು ಮುಂತಾದ ಚಟುವಟಿಕೆಗಳ ಮೂಲಕ ಸಂಬಂಧಿತ ಸಮಾಜ ವಿಜ್ಞಾನದ ಪರಿಕಲ್ಪನೆಗಳನ್ನು ಮೊದಲು ಬೋಧಿಸಿರಿ. ವಿದ್ಯಾರ್ಥಿಗಳು AI ನೊಂದಿಗೆ ಸಂಪರ್ಕ ಸಾಧಿಸುವುದು ಮೊದಲು ಸ್ಥಳ, ಕಾಲಾನುಕ್ರಮ, ಸಂಸ್ಕೃತಿ, ಸಾಮಾಜಿಕ ವ್ಯವಸ್ಥೆ ಮತ್ತು ಆರ್ಥಿಕ ಚಟುವಟಿಕೆಗಳಂತಹ ಪರಿಕಲ್ಪನೆಗಳನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಂಡಿದ್ದಾರೆ ಎಂದು ಖಚಿತಪಡಿಸಿಕೊಳ್ಳಿರಿ. ಡಿಜಿಟಲ್ ನಕ್ಷೆಗಳು, ಅಥವಾ AI ಪರಿಕರಗಳನ್ನು ಪರಿಚಯಿಸುವ ಮೊದಲು ಅಟ್ಲಾಸ್‌ಗಳು, ಚಾರ್ಟ್‌ಗಳು, ವಂಶವೃಕ್ಷಗಳು ಮತ್ತು ಕಾಲಾನುಕ್ರಮಗಳಂತಹ ತರಗತಿ ಪರಿಕರಗಳನ್ನು ಉಪಯೋಗಿಸಿರಿ.

APSCERT

Encourage students to explain how human skills like locating places, organising information, and decision-making are similar to machine systems such as GPS, digital timelines, and smart assistants. The link to AI should be brief, concept-based, and strictly aligned with the syllabus.

Exploring with AI

Understanding AI in Social Science Learning

Artificial Intelligence enables computers to analyse information, recognise patterns, organise data, and provide explanations in simple language. In Social Science learning, AI can help students understand maps, timelines, cultural traditions, family structures, and economic activities related to the first seven chapters.

However, **AI** does not replace teachers, classroom discussions, textbooks, or real-life bservation. The Social Science textbook remains the primary and reliable source of knowledge. **AI** serves only as a supportive learning assistant to improve understanding.

Accessing AI for Social Science Learning

AI tools may be accessed through school computer laboratories under teacher guidance or through digital devices at home under parental supervision. Students may use AI tools to understand maps and geographical locations and to learn timelines and historical events.

They can also explore Indian culture and traditions with the help of AI. AI may support learning about family and community relationships. It can help students understand economic and non-economic activities in daily life. All use of AI should focus only on improving learning and knowledge.

Safe and Responsible Use of AI Students must

While using AI tools, personal information such as name, address, school name, phone number, or passwords must never be shared. AI responses must not be copied directly without proper understanding. All information generated by AI must be carefully verified with the Social Science textbook. AI must not be used during examinations under any circumstances. Responsible use of AI strengthens discipline, honesty, and social awareness among students.

AP SCERT

ಪ್ರದೇಶಗಳನ್ನು ಗುರ್ತಿಸುವುದು, ಮಾಹಿತಿಯನ್ನು ನಿರ್ವಹಿಸುವುದು ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳವಂತಹ ಮಾನವ ಕೌಶಲ್ಯಗಳನ್ನು GPS, ಡಿಜಿಟಲ್ ಕಾಲಾನುಕ್ರಮಗಳು ಮತ್ತು ಸ್ಮಾರ್ಟ್ ಅಸಿಸ್ಟೆಂಟ್‌ಗಳಂತಹ ಯಂತ್ರ ವ್ಯವಸ್ಥೆಗಳಿಗೆ ಹೇಗೆ ಸಮಾನವಾಗುತ್ತವೆ ಎಂಬುದನ್ನು ವಿವರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿರಿ. AIಗೆ ಅನುಸಂಧಾನವು ಸಂಕ್ಷಿಪ್ತವಾಗಿ, ಪರಿಕಲ್ಪನೆ ಆಧಾರಿತವಾಗಿರಬೇಕು ಮತ್ತು ಪಠ್ಯಕ್ರಮದೊಂದಿಗೆ ಖಂಡಿತವಾಗಿ ಅನುಗುಣವಾಗಿರಬೇಕು.

AI ಜೊತೆಗೆ ಅನ್ವೇಷಣೆ

ಸಮಾಜ ವಿಜ್ಞಾನ ಕಲಿಕೆಯಲ್ಲಿ AI ನ್ನು ಅರ್ಥ ಮಾಡಿಕೊಳ್ಳುವುದು

ಆರ್ಟಿಫಿಷಿಯಲ್ ಇಂಟಲಿಜೆನ್ಸ್ (AI) ಕಂಪ್ಯೂಟರ್‌ಗಳಿಗೆ ಮಾಹಿತಿಯನ್ನು ವಿಶ್ಲೇಷಿಸಲು, ಮಾದರಿಗಳನ್ನು ಗುರುತಿಸಲು, ಡೇಟಾವನ್ನು ನಿರ್ವಹಿಸಲು ಮತ್ತು ಸರಳ ಭಾಷೆಯಲ್ಲಿ ವಿವರಣೆಗಳನ್ನು ಒದಗಿಸಲು ಅವಕಾಶ ಮಾಡಿಕೊಡುತ್ತದೆ. ಸಮಾಜ ವಿಜ್ಞಾನ ಕಲಿಕೆಯಲ್ಲಿ ಮೊದಲ ಏಳು ಅಧ್ಯಾಯಗಳಿಗೆ ಸಂಬಂಧಿಸಿದ ನಕ್ಷೆಗಳು, ಕಾಲಾನುಕ್ರಮಗಳು, ಸಾಂಸ್ಕೃತಿಕ ಸಂಪ್ರದಾಯಗಳು, ಕುಟುಂಬ ರಚನೆಗಳು ಮತ್ತು ಆರ್ಥಿಕ ಚಟುವಟಿಕೆಗಳನ್ನು ಅರ್ಥ ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ AI ಸಹಾಯ ಮಾಡುತ್ತದೆ.

ಆದರೂ, ಸಹ ಶಿಕ್ಷಕರು, ತರಗತಿಯ ಚರ್ಚೆಗಳು, ಪಠ್ಯಪುಸ್ತಕಗಳು ಅಥವಾ ನಿಜ ಜೀವನದ ಪರಿಶೀಲನೆಯ ಸ್ಥಾನವನ್ನು AI ಭರ್ತಿ ಮಾಡುವುದಿಲ್ಲ. ಸಮಾಜವಿಜ್ಞಾನ ಪಠ್ಯಪುಸ್ತಕ ಪ್ರಾಥಮಿಕ ಮತ್ತು ಅತ್ಯಂತ ವಿಶ್ವಾಸಾರ್ಹ ಮೂಲವಾಗಿ ಉಳಿಯುತ್ತದೆ. ಅವಗಾಹನೆಯನ್ನು ಉತ್ತಮಗೊಳಿಸಲು AI ಕೇವಲ ಬೆಂಬಲಿತ ಕಲಿಕಾ ಸಹಾಯಕನಾಗಿ ಮಾತ್ರ ಕಾರ್ಯ ನಿರ್ವಹಿಸುತ್ತದೆ.

ಸಮಾಜ ವಿಜ್ಞಾನ ಕಲಿಕೆಗಾಗಿ AI ಗೆ ಹತ್ತಿರವಾಗುವುದು

AI ಪರಿಕರಗಳನ್ನು ಶಾಲಾ ಕಂಪ್ಯೂಟರ್ ಲ್ಯಾಬ್‌ಗಳ ಮೂಲಕ ಶಿಕ್ಷಕರ ಮಾರ್ಗದರ್ಶನದಲ್ಲಿ ಅಥವಾ ಮನೆಯಲ್ಲಿ ಪೋಷಕರ ಮೇಲ್ವಿಚಾರಣೆಯಲ್ಲಿ ಡಿಜಿಟಲ್ ಸಾಧನಗಳ ಮೂಲಕ ಉಪಯೋಗಿಸಬಹುದು. ವಿದ್ಯಾರ್ಥಿಗಳು ನಕ್ಷೆಗಳು ಮತ್ತು ಭೌಗೋಳಿಕ ಪ್ರದೇಶಗಳನ್ನು ಅರ್ಥ ಮಾಡಿಕೊಳ್ಳಲು, ಕಾಲಾನುಕ್ರಮಗಳು ಮತ್ತು ಐತಿಹಾಸಿಕ ಘಟನೆಗಳನ್ನು ಕಲಿಯಲು AI ಪರಿಕರಗಳನ್ನು ಉಪಯೋಗಿಸಬಹುದು. ಅವರು AI ಸಹಾಯದಿಂದ ಭಾರತೀಯ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಸಹ ಅನ್ವೇಷಿಸಬಹುದು. ಕುಟುಂಬ ಮತ್ತು ಸಮಾಜ ಸಂಬಂಧಗಳ ಬಗ್ಗೆ ಕಲಿಯಲು AI ಸಹಾಯ ಮಾಡಬಹುದು. ಇದು ವಿದ್ಯಾರ್ಥಿಗಳಿಗೆ ದೈನಂದಿನ ಜೀವನದಲ್ಲಿ ಆರ್ಥಿಕ ಮತ್ತು ಆರ್ಥಿಕೇತರ ಚಟುವಟಿಕೆಗಳನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. AIಅನ್ನು ಯಾವಾಗಲೂ ಜವಾಬ್ದಾರಿಯುತವಾಗಿ ಬಳಸಬೇಕು. ಇದನ್ನು ಕಟ್ಟುನಿಟ್ಟಾಗಿ ಶೈಕ್ಷಣಿಕ ಉದ್ದೇಶಗಳಿಗಾಗಿ ಮಾತ್ರ ಬಳಸಬೇಕು.

AI ಯ ಸುರಕ್ಷಿತ ಮತ್ತು ಜವಾಬ್ದಾರಿಯುತ ಬಳಕೆ :

AI ಪರಿಕರಗಳನ್ನು ಬಳಸುವಾಗ ಹೆಸರು, ವಿಳಾಸ, ಶಾಲೆಯ ಹೆಸರು, ಫೋನ್ ನಂಬರ್ ಅಥವಾ ಪಾಸ್‌ವರ್ಡ್‌ನಂತಹ ವೈಯಕ್ತಿಕ ಮಾಹಿತಿಯನ್ನು ಎಂದಿಗೂ ಹಂಚಿಕೊಳ್ಳಬೇಡಿ. ಸರಿಯಾದ ತಿಳುವಳಿಕೆಯಿಲ್ಲದೆ AI ಪ್ರತಿಸ್ಪಂದನೆಗಳನ್ನು ನೇರವಾಗಿ ಕಾಪಿ ಮಾಡಬಾರದು. AI ನಿಂದ ಉತ್ಪತ್ತಿಯಾಗುವ ಎಲ್ಲಾ ಮಾಹಿತಿಯನ್ನು ಸಮಾಜ ವಿಜ್ಞಾನ ಪಠ್ಯ ಪುಸ್ತಕದೊಂದಿಗೆ ಜಾಗರೂಕತೆಯಿಂದ ಪರಿಶೀಲಿಸಬೇಕು, ಪರೀಕ್ಷೆಯ ಸಮಯದಲ್ಲಿ AIಅನ್ನು ಉಪಯೋಗಿಸಬಾರದು, AIನ ಜವಾಬ್ದಾರಿಯುತ ಬಳಕೆ ವಿದ್ಯಾರ್ಥಿಗಳಲ್ಲಿ ಶಿಸ್ತು, ಪ್ರಾಮಾಣಿಕತೆ ಮತ್ತು ಸಾಮಾಜಿಕ ಅರಿವನ್ನು ಬಲಪಡಿಸುತ್ತದೆ.

AP SCERT

AI-Based Learning Tasks in Social Science

The tasks given below are designed to strengthen social and analytical thinking through the guided use of Artificial Intelligence tools. These tasks must be performed only under the supervision of a teacher in school or with the guidance of parents at home. AI tools are to be used strictly for educational purposes. Students should use AI carefully to support their learning and understanding. The results generated by AI may be used in Tool-1 and Tool-3 of the assessment book. However, AI outputs should not be accepted blindly. All responses generated by AI must be checked carefully.

Writing Effective Prompts in Social Science

A prompt is the instruction or question given to an AI tool. A good Social Science prompt should clearly mention the class level, such as Class 6, and the chapter name. It should also include a clear topic or concept from the lesson. The prompt must request an explanation or example to get a proper response.

Example Prompt: Note:-

"I am a Class 6 student. Please explain how latitude and longitude help in locating places on Earth in simple language with one example."

Clear prompts lead to clear explanations.

Types of Prompts in Social Science Learning

To obtain clear and meaningful responses from AI tools, prompts should be written based on the purpose of learning.

1. **Concept Understanding Prompt :** This type of prompt is used to understand Social Science concepts clearly. **Example:**"I am a Class 6 student. What is the value of work and why should we respect all kinds of work?"
2. **Comparison or Analytical Prompt :** This type of prompt is used to compare ideas or analyse differences. **Example:**"I am a Class 6 student. What is the difference between Vedic culture and present-day culture?"
3. **Application or Activity-Based Prompt :** This type of prompt is used to apply knowledge in real-life situations. **Example:**"I am a Class 6 student. Help me identify different occupations in my neighbourhood and explain why they are important."

AP SCERT

ಸಮಾಜ ವಿಜ್ಞಾನದಲ್ಲಿ AI-ಆಧಾರಿತ ಕಲಿಕೆಯ ಕಾರ್ಯಗಳು

ಕೆಳಗೆ ನೀಡಲಾದ ಕಾರ್ಯಗಳನ್ನು ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಪರಿಕರಗಳ ಮಾರ್ಗದರ್ಶನ ಉಪಯೋಗಿಸುವ ಮೂಲಕ ಸಾಮಾಜಿಕ ಮತ್ತು ವಿಶ್ಲೇಷಣಾತ್ಮಕ ಆಲೋಚನೆಯನ್ನು ಬಲಪಡಿಸಲು ರೂಪಿಸಲಾಗಿದೆ. ಈ ಕಾರ್ಯಗಳನ್ನು ಶಾಲೆಯಲ್ಲಿ ಶಿಕ್ಷಕರ ಮೇಲ್ವಿಚಾರಣೆಯಲ್ಲಿ ಅಥವಾ ಮನೆಯಲ್ಲಿ ಪೋಷಕರ ಮಾರ್ಗದರ್ಶನದಲ್ಲಿ ಮಾತ್ರ ಮಾಡಬೇಕು. AI ಪರಿಕರಗಳನ್ನು ಕಟ್ಟುನಿಟ್ಟಾಗಿ ಶೈಕ್ಷಣಿಕ ಉದ್ದೇಶಗಳಿಗಾಗಿ ಮಾತ್ರ ಉಪಯೋಗಿಸಬೇಕು. ವಿದ್ಯಾರ್ಥಿಗಳು ತಮ್ಮ ಕಲಿಕೆ ಮತ್ತು ಅವಗಾಹನೆಗೆ ಬೆಂಬಲವಾಗಿ AI ಅನ್ನು ಎಚ್ಚರಿಕೆಯಿಂದ ಬಳಸಬೇಕು, AI ನಿಂದ ಉತ್ಪತ್ತಿಯಾಗುವ ಫಲಿತಾಂಶವನ್ನು ಮೌಲ್ಯಮಾಪನ ಪುಸ್ತಕದ ಟೂಲ್–1 ಮತ್ತು ಟೂಲ್–3ರಲ್ಲಿ ಬಳಸಬಹುದು, ಆದರೂ AI ಔಟ್‌ಪುಟ್‌ಗಳನ್ನು ಕುರುಡಾಗಿ ಸ್ವೀಕರಿಸಬಾರದು. AI ನಿಂದ ಉತ್ಪತ್ತಿಯಾಗುವ ಎಲ್ಲಾ ಪ್ರತಿಕ್ರಿಯೆಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕು.

ಸಮಾಜ ವಿಜ್ಞಾನದಲ್ಲಿ ಪರಿಣಾಮಕಾರಿ ಪ್ರಾಂಪ್ಟ್‌ಗಳನ್ನು ಬರೆಯುವುದು

ಪ್ರಾಂಪ್ಟ್ ಎಂದರೆ AI ಟೂಲ್‌ಗೆ ನೀಡಲಾಗುವ ಸೂಚನೆ ಅಥವಾ ಪ್ರಶ್ನೆ. ಒಂದು ಉತ್ತಮ ಸಮಾಜ ವಿಜ್ಞಾನ ಪ್ರಾಂಪ್ಟ್ 6ನೇ ತರಗತಿಯಂತಹ ತರಗತಿ ಮಟ್ಟವನ್ನು ಮತ್ತು ಅಧ್ಯಾಯದ ಹೆಸರನ್ನು ಸ್ಪಷ್ಟವಾಗಿ ನಮೂದಿಸಬೇಕು. ಇದು ಪಾಠದಿಂದ ಸ್ಪಷ್ಟವಾದ ವಿಷಯ ಅಥವಾ ಪರಿಕಲ್ಪನೆಯನ್ನು ಸಹ ಒಳಗೊಂಡಿರಬೇಕು. ಸರಿಯಾದ ಪ್ರತಿಕ್ರಿಯೆಯನ್ನು ಪಡೆಯಲು ಪ್ರಾಂಪ್ಟ್ ತಪ್ಪದೇ ವಿವರಣೆ ಅಥವಾ ಉದಾಹರಣೆಯನ್ನು ವಿನಂತಿಸಬೇಕು.

ಉದಾಹರಣೆ ಪ್ರಾಂಪ್ಟ್ : "ನಾನು 6ನೇ ತರಗತಿಯ ವಿದ್ಯಾರ್ಥಿ, ಭೂಮಿಯ ಮೇಲೆ ಪ್ರದೇಶಗಳನ್ನು ಗುರ್ತಿಸಲು ಅಕ್ಷಾಂಶ ಮತ್ತು ರೇಖಾಂಶವು ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ದಯವಿಟ್ಟು ಒಂದು ಉದಾಹರಣೆಯೊಂದಿಗೆ ಸರಳ ಭಾಷೆಯಲ್ಲಿ ವಿವರಿಸಿ".

ಸಮಾಜ ವಿಜ್ಞಾನಗಳ ಕಲಿಕೆಯಲ್ಲಿ ಪ್ರಾಂಪ್ಟ್‌ಗಳ ವಿಧಗಳು :

ಪರಿಕರಗಳಿಂದ ಸ್ಪಷ್ಟವಾದ ಮತ್ತು ಅರ್ಥವಂತವಾದ ಪ್ರತಿಸಪಂದನೆಗಳನ್ನು ಪಡೆಯಲು, ಕಲಿಕೆಯ ಉದ್ದೇಶವನ್ನು ಆಧರಿಸಿ ಪ್ರಾಂಪ್ಟ್‌ಗಳನ್ನು ಬರೆಯಬೇಕು.

1. **ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳುವ ಪ್ರಾಂಪ್ಟ್ :** ಸಮಾಜ ವಿಜ್ಞಾನದ ಪರಿಕಲ್ಪನೆಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಈ ರೀತಿಯ ಪ್ರಾಂಪ್ಟ್‌ಗಳನ್ನು ಬಳಸಲಾಗುತ್ತದೆ. **ಉದಾಹರಣೆಗೆ** : "ನಾನು 6ನೇ ತರಗತಿ ವಿದ್ಯಾರ್ಥಿ. ಶ್ರಮದ ಮೌಲ್ಯವೇನು ಮತ್ತು ನಾವು ಎಲ್ಲಾ ರೀತಿಯ ಕೆಲಸಗಳನ್ನು ಏಕೆ ಗೌರವಿಸಬೇಕು." ಈ ರೀತಿಯ ಪ್ರಾಂಪ್ಟ್ ಮೂಲಭೂತ ಪರಿಕಲ್ಪನೆಗಳ ತಿಳುವಳಿಕೆಯನ್ನು ಬೆಳೆಸಲು ಸಹಾಯ ಮಾಡುತ್ತದೆ.
2. **ತುಲನಾತ್ಮಕ ಮತ್ತು ವಿಶ್ಲೇಷಣಾತ್ಮಕ ಪ್ರಾಂಪ್ಟ್ :** ಈ ರೀತಿಯ ಪ್ರಾಂಪ್ಟ್ ಅನ್ನು ವಿಚಾರಗಳನ್ನು ಹೋಲಿಸಲು ಅಥವಾ ವ್ಯತ್ಯಾಸಗಳನ್ನು ವಿಶ್ಲೇಷಿಸಲು ಬಳಸಲಾಗುತ್ತದೆ. **ಉದಾಹರಣೆಗೆ** : "ನಾನು 6ನೇ ತರಗತಿ ವಿದ್ಯಾರ್ಥಿ. ವೈದಿಕ ಸಂಸ್ಕೃತಿ ಮತ್ತು ಪ್ರಸ್ತುತ ಸಂಸ್ಕೃತಿಯ ನಡುವಿನ ವ್ಯತ್ಯಾಸವೇನು?" ಈ ರೀತಿಯ ಪ್ರಶ್ನೆಯು ವಿಶ್ಲೇಷಣಾತ್ಮಕ, ಯೋಜಿಸುವ ಕೌಶಲ್ಯವನ್ನು ಅಭಿವೃದ್ಧಿ ಪಡಿಸಲು ಸಹಾಯ ಮಾಡುತ್ತದೆ.
3. **ಅನ್ವಯ ಮತ್ತು ಚಟುವಟಿಕೆ ಆಧಾರಿತ ಪ್ರಾಂಪ್ಟ್ :** ಈ ರೀತಿಯ ಪ್ರಾಂಪ್ಟ್ ಅನ್ನು ನಿಜ ಜೀವನದ ಸಂದರ್ಭಗಳಲ್ಲಿ ಜ್ಞಾನವನ್ನು ಅನ್ವಯಿಸಲು ಬಳಸಲಾಗುತ್ತದೆ. **ಉದಾಹರಣೆಗೆ** : "ನಾನು 6ನೇ ತರಗತಿ ವಿದ್ಯಾರ್ಥಿ. ನನ್ನ ನೆರೆಹೊರೆಯಲ್ಲಿರುವ ವಿವಿಧ ವೃತ್ತಿಗಳನ್ನು ಗುರ್ತಿಸಿ ಮತ್ತು ಅವು ಏಕೆ ಮುಖ್ಯವೆಂದು ವಿವರಿಸಿ" ಈ ರೀತಿಯ ಪ್ರಶ್ನೆಯು ಪ್ರಾಯೋಗಿಕ ತಿಳುವಳಿಕೆಯನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ.

AP SCERT

Can AI Make Mistakes?

AI systems are powerful, but they are not always perfect. AI cannot think or feel like humans and depends completely on the data available to it. If the data is incomplete or incorrect, AI may produce wrong information. Sometimes AI may give answers that sound correct but are actually inaccurate. Therefore, AI-generated responses must always be checked and verified with the Social Science textbook. AI can support students in learning and understanding topics better. However, it should be used carefully and thoughtfully. It cannot replace teachers, textbooks, or classroom learning.

Myth	Fact
AI can think and feel like humans.	AI does not have feelings or real thinking; it works using patterns and instructions created by humans.
AI can complete all my Social Science homework without me learning anything.	AI can help me understand lessons better, but I must learn and write in my own think, words.

AP SCERT

Do You Know?

Sometimes an Artificial Intelligence system gives incorrect or imaginary information as if it were true. This behaviour is called AI hallucination. For more information ask AI about hallucination

Guidance: Before using any AI tools, students should first read the textbook lesson carefully. Teachers should show them how to write clear prompts by mentioning the class level, chapter name, and topic. Student use of AI must be monitored regularly. They should always verify AI answers with the textbook content. Copying from AI without understanding should not be allowed. AI must be used responsibly and honestly only to improve understanding, not to complete work mechanically.

AI ತಪ್ಪುಗಳನ್ನು ಮಾಡುತ್ತದೆಯೇ?

AI ವ್ಯವಸ್ಥೆಗಳು ಶಕ್ತಿಯುತವಾದವು, ಆದರೆ ಅವು ಯಾವಾಗಲೂ ಪರಿಪೂರ್ಣವಾಗಿರುವುದಿಲ್ಲ. AI ಮನುಷ್ಯರಂತೆ ಯೋಚಿಸಲು ಅಥವಾ ಅನುಭವಿಸಲು ಸಾಧ್ಯವಿಲ್ಲ ಮತ್ತು ಅದಕ್ಕೆ ಲಭ್ಯವಿರುವ ಡೇಟಾವನ್ನು ಸಂಪೂರ್ಣವಾಗಿ ಅವಲಂಬಿಸಿರುತ್ತದೆ. ಡೇಟಾ ಅಸಂಪೂರ್ಣ ಅಥವಾ ತಪ್ಪಾಗಿದ್ದರೆ, AI ತಪ್ಪು ಮಾಹಿತಿಯನ್ನು ನೀಡಬಹುದು. ಕೆಲವೊಮ್ಮೆ AI ಸರಿ ಎನಿಸುವ ಉತ್ತರಗಳನ್ನು ನೀಡಬಹುದು. ಆದರೆ ಅವು ವಾಸ್ತವವಾಗಿ ಅಸಂಪೂರ್ಣವಾಗಿ ಇರಬಹುದು. ಆದ್ದರಿಂದ, AI-ಸೃಷ್ಟಿಸಿದ ಪ್ರತಿಕ್ರಿಯೆಗಳನ್ನು ಯಾವಾಗಲೂ ಸಮಾಜ ವಿಜ್ಞಾನ ಪಠ್ಯಪುಸ್ತಕದೊಂದಿಗೆ ಪರಿಶೀಲಿಸಬೇಕು, ದೃಢೀಕರಿಸಬೇಕು. ವಿದ್ಯಾರ್ಥಿಗಳಿಗೆ AI ವಿಷಯಗಳನ್ನು ಉತ್ತಮವಾಗಿ ಕಲಿಯಲು ಮತ್ತು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಆದರೂ, ಇದನ್ನು ಎಚ್ಚರಿಕೆಯಿಂದ ಮತ್ತು ಆಲೋಚನಾತ್ಮಕವಾಗಿ ಬಳಸಬೇಕು. ಇದು ಶಿಕ್ಷಕರು, ಪಠ್ಯಪುಸ್ತಕಗಳು ಅಥವಾ ತರಗತಿಯ ಕಲಿಕೆಗೆ ಪರ್ಯಾಯವಲ್ಲ.

ಕಲ್ಪನೆ	ವಾಸ್ತವ
AI ಮನುಷ್ಯರಂತೆ ಯೋಚಿಸಬಲ್ಲದು ಮತ್ತು ಅನುಭವ ಪಡೆಯಬಲ್ಲದು.	AI ಗೆ ಭಾವನೆಗಳು ಅಥವಾ ನಿಜವಾದ ಆಲೋಚನಾ ಸಾಮರ್ಥ್ಯವಿಲ್ಲ; ಇದು ಮಾನವರು ರೂಪಿಸಿದ ಪ್ಯಾಟರ್ನ್‌ಗಳನ್ನು ಮತ್ತು ಸೂಚನೆಗಳನ್ನು ಉಪಯೋಗಿಸಿಕೊಂಡು ಕೆಲಸ ಮಾಡುತ್ತದೆ.
AI ನನ್ನ ಎಲ್ಲಾ ಸಮಾಜ ವಿಜ್ಞಾನದ ಮನೆಕೆಲಸವನ್ನು ನಾನು ಏನನ್ನೂ ಕಲಿಯದೆ AI ನಿಂದ ಪೂರ್ಣಗೊಳಿಸಬಹುದು.	ಪಾಠಗಳನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು AI ನನಗೆ ಸಹಾಯ ಮಾಡಬಲ್ಲದು, ಆದರೆ ನಾನು ನನ್ನ ಸ್ವಂತ ಆಲೋಚನೆ, ಮಾತುಗಳಲ್ಲಿ ಕಲಿಯಬೇಕು ಮತ್ತು ಬರೆಯಬೇಕು.

ನಿಮಗೆ ಗೊತ್ತೇ?

ಕೆಲವೊಮ್ಮೆ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ (AI) ವ್ಯವಸ್ಥೆಗಳು ತಪ್ಪು ಅಥವಾ ಕಲ್ಪಿತ ಮಾಹಿತಿಯನ್ನು ನಿಜವೆಂದು ತೋರಿಸುತ್ತವೆ. ಈ ನಡವಳಿಕೆಯನ್ನು AI ಹೆಲ್ಯೂಜಿನೇಷನ್ ಎನ್ನುವರು. ಹೆಚ್ಚಿನ ಮಾಹಿತಿಗಾಗಿ AI ಅನ್ನು ಹೆಲ್ಯೂಜಿನೇಷನ್ ಕುರಿತು ಕೇಳಿರಿ.

ಶಿಕ್ಷಕರಿಗೆ ಮಾರ್ಗದರ್ಶನ: ಯಾವುದಾದರೂ AI ಟೂಲನ್ನು ಬಳಸುವ ಮೊದಲು, ವಿದ್ಯಾರ್ಥಿಗಳು ಮೊದಲು ಪಠ್ಯ ಪುಸ್ತಕದಲ್ಲಿನ ಪಾಠವನ್ನು ಎಚ್ಚರಿಕೆಯಿಂದ ಓದಬೇಕು. ತರಗತಿಯ ಮಟ್ಟ, ಅಧ್ಯಾಯದ ಹೆಸರು ಮತ್ತು ವಿಷಯವನ್ನು ನಿರ್ದಿಷ್ಟಪಡಿಸುವ ಮೂಲಕ ಸ್ಪಷ್ಟವಾದ ಪ್ರಾಂಪ್ಟ್ ಅನ್ನು ಹೇಗೆ ಬರೆಯಬೇಕೆಂದು ಶಿಕ್ಷಕರು ಅವರಿಗೆ ತೋರಿಸಬೇಕು. ವಿದ್ಯಾರ್ಥಿಗಳ AI ಬಳಕೆಯನ್ನು ಕ್ರಮತಪ್ಪದೇ ಮೇಲ್ವಿಚಾರಣೆ ಮಾಡಬೇಕು. ಅವರು ಯಾವಾಗಲೂ ಪಠ್ಯಪುಸ್ತಕದಲ್ಲಿನ ವಿಷಯದೊಂದಿಗೆ AI ಉತ್ತರವನ್ನು ಪರಿಶೀಲಿಸಬೇಕು, ಅರ್ಥಮಾಡಿಕೊಳ್ಳದೇ AI ನಿಂದ ನಕಲಿಸಲು ಅವಕಾಶ ನೀಡಬಾರದು. AI ಅನ್ನು ಜವಾಬ್ದಾರಿಯುತವಾಗಿ ಮತ್ತು ಪ್ರಾಮಾಣಿಕವಾಗಿ ತಿಳುವಳಿಕೆಯನ್ನು ಸುಧಾರಿಸಲು ಮಾತ್ರ ಬಳಸಬೇಕಾಗಲಿ, ಕೆಲಸವನ್ನು ಯಾಂತ್ರಿಕವಾಗಿ ಪೂರ್ಣಗೊಳಿಸಲು ಅಲ್ಲ.

AP SCERT

Chapter-wise AI-Supported Exploration

Tasks for Students to Explore with AI (Social Science – Semester 1)

Chapter Level	Foundational Level	Analytical Level	Creative
Chapter 1: Locating Places on Earth	• Define globe, latitude, and longitude • Identify directions on a map.	• Compare globe and map. • Explain how coordinates help locate places.	• Compare map reading with GPS navigation. • Design a simple map using AI digital tools.
Chapter 2 : Oceans and Continents	• List the continents and oceans. • Identify land and Earth water on Earth.	• Compare different continents. • Explain the importance of oceans.	• Compare human observation of Earth and satellite images. • Create a digital model using AI tools. weather detection.
Chapter 3 : Timeline and Sources of History	• Define history and timeline. • List sources of history.	• Arrange historical events in order • Compare archaeo -logical and literary sources.	• Compare timeline charts and AI digital timelines. • Create a digital timeline using AI tools.
Chapter 4 : India, That is Bharat	• Identify India on a map. • List physical features of India.	• Explain India's geographical diversity. • Compare different regions of India.	• Compare physical maps and digital maps. • Create a digital presentation on India using AI.
Chapter 5 : India's Cultural Roots	• Define culture. (Mauryan Empire). • List important cultural traditions.	• Compare different cultural practices. • Explain importance of Vedas and teachings.	• Compare traditional learning and digital learning. • Create a digital cultural heritage project using AI

AP SCERT

ಅಧ್ಯಾಯಗಳ ಪ್ರಕಾರ AI ಆಧಾರಿತ ಪರಿಶೋಧನೆ
ವಿದ್ಯಾರ್ಥಿಗಳು AI ಯೊಂದಿಗೆ ಪರಿಶೋಧಿಸಬೇಕಾದ ಚಟುವಟಿಕೆಗಳು (ಸಮಾಜ ವಿಜ್ಞಾನ–ಸೆಮಿಸ್ಟರ್–1)

ಅಧ್ಯಾಯ	ಬುನಾದಿಮಟ್ಟ (Founda tional)	ವಿಶ್ಲೇಷಣಾತ್ಮಕ ಮಟ್ಟ (Analytical)	ಸೃಜನಾತ್ಮಕ ಮಟ್ಟ (Creative)
ಅಧ್ಯಾಯ 1: ಭೂಮಿಯ ಮೇಲಿನ ಪ್ರದೇಶಗಳನ್ನು ಗುರ್ತಿಸುವುದು.	• ಗ್ಲೋಬ್, ಅಕ್ಷಾಂಶ ಮತ್ತು ರೇಖಾಂಶವನ್ನು ವ್ಯಾಖ್ಯಾನಿಸುವುದು • ನಕ್ಷೆಯಲ್ಲಿ ದಿಕ್ಕುಗಳನ್ನು ಗುರ್ತಿಸುವುದು	• ಗ್ಲೋಬ್ ಮತ್ತು ನಕ್ಷೆಯನ್ನು ಹೋಲಿಸುವುದು. • ಪ್ರದೇಶಗಳನ್ನು ಗುರ್ತಿಸಲು ಕೋಅರ್ಡಿನೇಟ್‌ಗಳು ಹೇಗೆ ಸಹಾಯ ಮಾಡುತ್ತವೆ ವಿವರಿಸುವುದು	• ಮ್ಯಾಪ್ ರೀಡಿಂಗ್‌ನ್ನು GPS ನಾವಿಗೇಷನ್‌ಗೆ ಹೋಲಿಸುವುದು. • AI ಟೂಲ್ಸ್‌ಗಳನ್ನು ಉಪಯೋಗಿಸಿಕೊಂಡು ಒಂದು ಸರಳ ನಕ್ಷೆಯನ್ನು ಡಿಜೈನ್ ಮಾಡುವುದು.
ಅಧ್ಯಾಯ 2: ಮಹಾಸಾಗರಗಳು ಮತ್ತು ಖಂಡಗಳು	• ಖಂಡಗಳು ಮತ್ತು ಮಹಾಸಾಗರಗಳ ಪಟ್ಟಿಯನ್ನು ತಯಾರಿಸಿ. • ಭೂಮಿಯ ಮೇಲಿನ ನೆಲ ಮತ್ತು ನೀರನ್ನು ಗುರ್ತಿಸುವುದು.	• ವಿವಿಧ ಖಂಡಗಳನ್ನು ಹೋಲಿಸುವುದು • ಮಹಾಸಾಗರಗಳ ಪ್ರಾಮುಖ್ಯತೆಯನ್ನು ವಿವರಿಸುವುದು.	• ಭೂಮಿಯನ್ನು ಮೇಲಿನ ಮಾನವನ ಪರಿಶೀಲನೆ ಮತ್ತು ಉಪಗ್ರಹ ಚಿತ್ರಗಳನ್ನು ಹೋಲಿಸುವುದು. • AI ಟೂಲ್ಸ್‌ಗಳನ್ನು ಉಪಯೋಗಿಸಿ ಡಿಜಿಟಲ್ ಭೂಮಿ ಮಾದರಿಯನ್ನು ಕ್ರಿಯೇಟ್ ಮಾಡುವುದು.
ಅಧ್ಯಾಯ 3: ಇತಿಹಾಸ ಕಾಲಾನುಕ್ರಮ ಮತ್ತು ಆಧಾರಗಳು	• ಇತಿಹಾಸ ಮತ್ತು ಕಾಲಾನುಕ್ರಮವನ್ನು ವಿವರಿಸುವುದು. • ಇತಿಹಾಸದ ಆಧಾರಗಳನ್ನು ಪಟ್ಟಿ ಮಾಡುವುದು.	• ಇತಿಹಾಸದ ಘಟನೆಗಳನ್ನು ಕ್ರಮವಾಗಿ ಜೋಡಿಸುವುದು. • ಆರ್ಕಿಯಾಲಾಜಿಕಲ್ ಮತ್ತು ಮತ್ತು ಸಾಹಿತ್ಯೀಕ ಮೂಲಗಳನ್ನು ಹೋಲಿಕೆ ಮಾಡುವುದು.	• ಟೈಮ್‌ಲೈನ್ ಚಾರ್ಟ್‌ಗಳನ್ನು ಮತ್ತು AI ಡಿಜಿಟಲ್ ಟೈಮ್‌ಲೈನ್‌ಗಳನ್ನು ಹೋಲಿಕೆ ಮಾಡುವುದು • AI ಪರಿಕರಗಳನ್ನು ಬಳಸಿಕೊಂಡು ಡಿಜಿಟಲ್ ಟೈಮ್‌ಲೈನ್ ಕ್ರಿಯೇಟ್ ಮಾಡುವುದು.
ಅಧ್ಯಾಯ 4: ಇಂಡಿಯಾ ಎಂದರೆ ಭಾರತದೇಶ	• ನಕ್ಷೆಯಲ್ಲಿ ಭಾರತ ದೇಶವನ್ನು ಗುರ್ತಿಸುವುದು. • ಭಾರತ ದೇಶದ ಭೌತಿಕ ಲಕ್ಷಣಗಳನ್ನು ಪಟ್ಟಿ ಮಾಡುವುದು.	• ಭಾರತದ ಭೌಗೋಳಿಕ ವೈವಿಧ್ಯತೆಯನ್ನು ವಿವರಿಸುವುದು • ಭಾರತದೇಶದ ವಿವಿಧ ಪ್ರದೇಶಗಳನ್ನು ಹೋಲಿಕೆ ಮಾಡುವುದು.	• ಭೌತಿಕ ನಕ್ಷೆಗಳು ಮತ್ತು ಡಿಜಿಟಲ್ ನಕ್ಷೆಗಳನ್ನು ಹೋಲಿಕೆ ಮಾಡುವುದು. • AI ಉಪಯೋಗಿಸಿ ಡಿಜಿಟಲ್ ಪ್ರೆಜೆಂಟೇಷನ್ ಕ್ರಿಯೇಟ್ ಮಾಡುವುದು.
ಅಧ್ಯಾಯ 5: ಭಾರತದ ಸಾಂಸ್ಕೃತಿಕ ಮೂಲಗಳು	• ಸಂಸ್ಕೃತಿಯನ್ನು ವ್ಯಾಖ್ಯಾನಿಸುವುದು • ಪ್ರಮುಖ ಸಾಂಸ್ಕೃತಿಕ ಸಂಪ್ರದಾಯಗಳನ್ನು ಪಟ್ಟಿ ಮಾಡುವುದು	• ವಿವಿಧ ಸಾಂಸ್ಕೃತಿಕ ಆಚರಣೆಗಳನ್ನು ಹೋಲಿಕೆ ಮಾಡುವುದು • ವೇದಗಳ ಪ್ರಾಮುಖ್ಯತೆ ಮತ್ತು ಬೋಧನೆಗಳನ್ನು ವಿವರಿಸುವುದು	• ಟ್ರೆಡಿಷನಲ್ ಲರ್ನಿಂಗ್ ಮತ್ತು ಡಿಜಿಟಲ್ ಲರ್ನಿಂಗನ್ನು ಹೋಲಿಸುವುದು. • AI ಉಪಯೋಗಿಸಿ ಡಿಜಿಟಲ್ ಕಲ್ಚರಲ್ ಹೆರಿಟೇಜ್ ಪ್ರಾಜೆಕ್ಟ್‌ನ್ನು ಕ್ರಿಯೇಟ್ ಮಾಡುವುದು.

AP SCERT

Chapter 6 : Family and Community	• Define family and community. • List types of families.	• Compare joint and nuclear families • Explain roles of family members	• Compare family communication and digital communication. • Create a digital family tree using AI tools.
Chapter 7: The Value of Work	• Define economic and non-economic activities • List different occupations.	• Compare different types of work • Explain importance of work in society.	• Compare human work and AI-based work. • Create a digital chart showing different occupations using AI.

Students may undertake small community-based projects such as creating digital maps. They can prepare digital timelines to understand events in order. They may also develop digital family trees to learn about relationships. Students can study different occupations using AI.

These activities help students understand Social Science and Artificial Intelligence together.

Conclusion: The first semester chapters of Social Science develop important skills such as location, classification, sequencing, comparison, and social understanding. Location skills help students identify places on maps and understand positions on Earth. Classification helps students group continents, cultures, and activities based on their features. Sequencing helps students arrange historical events in correct chronological order using timelines. Comparison helps students identify similarities and differences between places, cultures, and social systems. Social understanding helps students learn about family, community, and governance. Social Science learning helps students understand how intelligent systems collect, organise, and use information to provide useful outputs and support human activities in daily life.

AP SCERT

ಅಧ್ಯಾಯ 6: ಕುಟುಂಬ ಮತ್ತು ಸಮಾಜ	• ಕುಟುಂಬ ಮತ್ತು ಸಮಾಜವನ್ನು ವ್ಯಾಖ್ಯಾನಿಸುವುದು • ಕುಟುಂಬಗಳ ಪ್ರಕಾರಗಳನ್ನು ಪಟ್ಟಿ ಮಾಡುವುದು	• ಅವಿಭಕ್ತ ಮತ್ತು ವಿಭಕ್ತ ಕುಟುಂಬಗಳ ಹೋಲಿಕೆ • ಕುಟುಂಬ ಸದಸ್ಯರ ಪಾತ್ರಗಳನ್ನು ವಿವರಿಸುವುದು	• ಫ್ಯಾಮಿಲಿ ಕಮ್ಯೂನಿಕೇಷನ್ ಮತ್ತು ಡಿಜಿಟಲ್ ಕಮ್ಯೂನಿಕೇಷನ್‌ಗಳ ಹೋಲಿಕೆ ಮಾಡುವುದು. • AI ಟೂಲ್ ಉಪಯೋಗಿಸಿ ಡಿಜಿಟಲ್ ಫ್ಯಾಮಿಲಿಟ್ರೀ ಕ್ರಿಯೇಟ್ ಮಾಡುವುದು.
ಅಧ್ಯಾಯ 7: ಶ್ರಮದ ಮೌಲ್ಯ	• ಆರ್ಥಿಕ ಮತ್ತು ಆರ್ಥಿಕೇತರ ಚಟುಟಿಕೆಗಳನ್ನು ವ್ಯಾಖ್ಯಾನಿಸುವುದು • ವಿವಿಧ ವೃತ್ತಿಗಳನ್ನು ಪಟ್ಟಿ ಮಾಡುವುದು	• ವಿವಿಧ ರೀತಿಯ ಕೆಲಸಗಳನ್ನು ಹೋಲಿಸುವುದು. • ಸಮಾಜದಲ್ಲಿ ಕೆಲಸದ ಮಹತ್ವವನ್ನು ವಿವರಿಸುವುದು.	• ಮಾನವ ಕೆಲಸ ಮತ್ತು AI ಚಾಲಿತ ಕೆಲಸವನ್ನು ಹೋಲಿಸುವುದು. • AI ನ್ನು ಉಪಯೋಗಿಸಿ ವಿವಿಧ ವೃತ್ತಿಗಳನ್ನು ತೋರಿಸುವ ಡಿಜಿಟಲ್ ಚಾರ್ಟನ್ನು ಕ್ರಿಯೇಟ್ ಮಾಡುವುದು.

ವಿದ್ಯಾರ್ಥಿಗಳು ಡಿಜಿಟಲ್ ಮ್ಯಾಪ್‌ಗಳನ್ನು ತಯಾರಿಸುವಂತಹ ಚಿಕ್ಕ ಸಾಮಾಜಿಕ ಆಧಾರಿತ ಪ್ರಾಜೆಕ್ಟ್‌ಗಳನ್ನು ಕೈಗೊಳ್ಳಬಹುದು. ಘಟನೆಗಳ ಅನುಕ್ರಮವನ್ನು ಅರ್ಥ ಮಾಡಿಕೊಳ್ಳಲು ಅವರು ಡಿಜಿಟಲ್ ಕಾಲಾನುಕ್ರಮಗಳನ್ನು ಸಿದ್ಧಪಡಿಸಿಕೊಳ್ಳಬಹುದು. ಸಂಬಂಧಗಳನ್ನು ಅರ್ಥ ಮಾಡಿಕೊಳ್ಳಲು ಅವರು ಡಿಜಿಟಲ್ ವಂಶವೃಕ್ಷಗಳನ್ನು ಸಹ ಅಭಿವೃದ್ಧಿಪಡಿಸಬಹುದು. ವಿದ್ಯಾರ್ಥಿಗಳು AI ನ್ನು ಬಳಸಿಕೊಂಡು ವಿವಿಧ ವೃತ್ತಿಗಳನ್ನು ಅಧ್ಯಯನ ಮಾಡಬಹುದು. ಈ ಚಟುವಟಿಕೆಗಳು ವಿದ್ಯಾರ್ಥಿಗಳಿಗೆ ಸಮಾಜ ವಿಜ್ಞಾನ ಮತ್ತು ಕೃತಕ ಬುದ್ಧಿಮತ್ತೆ ಎರಡನ್ನೂ ಒಟ್ಟಿಗೆ ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.

ಮುಕ್ತಾಯ : ಸಮಾಜ ವಿಜ್ಞಾನದ ಮೊದಲ ಸೆಮಿಸ್ಟರ್ ಪಾಠಗಳು ಸ್ಥಾನ, ವರ್ಗೀಕರಣ, ಕ್ರಮಬದ್ಧಗೊಳಿಸುವಿಕೆ, ಹೋಲಿಕೆ ಮತ್ತು ಸಾಮಾಜಿಕ ತಿಳುವಳಿಕೆಯಂತಹ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುತ್ತದೆ. ಈ ಕೌಶಲ್ಯಗಳು ವಿದ್ಯಾರ್ಥಿಗಳಿಗೆ ನಕ್ಷೆಗಳಲ್ಲಿ ಪ್ರದೇಶಗಳನ್ನು ಗುರ್ತಿಸಲು, ಸಂಸ್ಕೃತಿಗಳನ್ನು ವರ್ಗೀಕರಿಸಲು, ಐತಿಹಾಸಿಕ ಘಟನೆಗಳನ್ನು ಕಾಲಾನುಕ್ರಮದಲ್ಲಿ ಜೋಡಿಸುವುದು, ಪ್ರದೇಶಗಳು ಹಾಗೂ ಸಂಸ್ಕೃತಿಗಳ ನಡುವೆ ಹೋಲಿಕೆಗಳನ್ನು ಮಾಡಲು ಮತ್ತು ಕುಟುಂಬ, ಸಮಾಜ ಮತ್ತು ಆಡಳಿತವನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಈ ಕೌಶಲ್ಯಗಳು AI ವ್ಯವಸ್ಥೆಗಳು ಮಾಹಿತಿಯನ್ನು ಸಂಗ್ರಹಿಸಲು, ವರ್ಗೀಕರಿಸಲು ಕ್ರಮಬದ್ಧೀಕರಿಸಲು ಮತ್ತು ಹೋಲಿಸಲು ಬುನಾದಿಯಾಗಿರುತ್ತವೆ. AI ವ್ಯವಸ್ಥೆಗಳು ಮಾಹಿತಿಯನ್ನು ಹೇಗೆ ನಿರ್ವಹಿಸಿ ಮತ್ತು ಉಪಯುಕ್ತ ಫಲಿತಾಂಶಗಳನ್ನು ನೀಡುತ್ತವೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಸಮಾಜ ವಿಜ್ಞಾನ ಕಲಿಕೆ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತದೆ.

AP SCERT

GLOSSERY

1. **Cardinal direction** - One of the four main directions: north, south, east and west
2. **Equator** - An imaginary line at 0° latitude dividing the Earth into Northern and Southern Hemispheres
3. **Parallels of latitude** - Imaginary east-west lines used to measure distance north or south of the Equator
4. **Meridian of longitude** - Imaginary lines running from the North Pole to the South Pole
5. **Prime Meridian** - The meridian at 0° longitude passing through Greenwich
6. **Greenwich Mean Time (GMT)** - Mean solar time at Greenwich, used as a world time reference
7. **Indian Standard Time (IST)** - Official time of India, 5 hours 30 minutes ahead of GMT
8. **Standard Time Zone** - A zone of longitude that follows the same standard time
9. **International Date Line** - Imaginary line near 180° longitude where the date changes
10. **North Pole** - Point at 90°N where the Earth's axis meets the surface
11. **South Pole** - Point at 90°S where the Earth's axis meets the surface
12. **Continent** - A large continuous landmass (used to classify Earth's land areas)
13. **Ocean** - A very large body of salty water covering most of the Earth
14. **Sea** - A large body of salty water smaller than an ocean and partly or completely surrounded by land
15. **Bay** - A broad inlet of the sea where the land curves inward
16. **Gulf** - A part of the sea deeply surrounded by land
17. **Marine** - Related to or found in oceans and seas
18. **Subcontinent** - A large, distinct part of a continent
19. **Terrestrial** - On or relating to the Earth (land areas)
20. **Expanse** - A wide, continuous stretch of land or water
21. **Landscape** - All visible natural features of an area of land
22. **Sea level** - The average level of the ocean's surface
23. **Inhabitants** - People or living beings living in a particular place
24. **Widespread** - Found or spread over a large area
25. **Immense** - Extremely large in size or extent
26. **History** - The study of the human past
27. **Historian** - A person who studies and writes about the past
28. **Ancient** - Of or from a very long time ago
29. **Era** - A distinct period of time in history
30. **Context** - The background or circumstances of an event
31. **Timeline** - A visual representation of events arranged in chronological order
32. **Source of history** - A place, person, text or object from which we get information about the past
33. **Manuscript** - A handwritten document on paper, palm leaf, cloth, etc.
34. **Inscriptions** - Words or texts written or carved on stone, metal or other materials
35. **Archaeologist** - A person who studies the past through excavation and material remains
36. **Excavate** - To dig out remains from the ground
37. **Excavator** - A person or machine used in excavation
38. **Testimony** - Evidence or proof of something from the past
39. **Exploration** - The act of searching for and discovering information
40. **Heritage** - Cultural traditions and historic objects passed down from earlier generations
41. **Subcontinent** - A large, distinct part of a continent
42. **Heritage** - Cultural traditions, monuments and values passed down from the past

AP SCERT

ಪದಕೋಶ

1. **ಮುಖ್ಯ ದಿಕ್ಕುಗಳು** – ನಾಲ್ಕು ಮುಖ್ಯ ದಿಕ್ಕುಗಳಾದ : ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮ.
2. **ಭೂಮಧ್ಯರೇಖೆ**– ಭೂಮಿಯನ್ನು ಉತ್ತರ ಮತ್ತು ದಕ್ಷಿಣ ಅರ್ಧಗೋಳಗಳಾಗಿ ವಿಭಜಿಸುವ 0° ಅಕ್ಷಾಂಶದಲ್ಲಿರುವ ಕಾಲ್ಪನಿಕ ರೇಖೆಯೇ ಭೂಮಧ್ಯರೇಖೆ.
3. **ಅಕ್ಷಾಂಶದ ಸಮಾಂತರ ರೇಖೆಗಳು** – ಭೂಮಧ್ಯ ರೇಖೆಯ ಉತ್ತರ ಅಥವಾ ದಕ್ಷಿಣ ದೂರವನ್ನು ಅಳೆಯಲು ಬಳಸುವ ಕಾಲ್ಪನಿಕ ಪೂರ್ವ–ಪಶ್ಚಿಮ ರೇಖೆಗಳು.
4. **ರೇಖಾಂಶದ ಮಧ್ಯಹ್ನದ ರೇಖೆಗಳು** – ಉತ್ತರ ದೃವದಿಂದ ದಕ್ಷಿಣ ದೃವದವರೆಗೆ ವಿಸ್ತರಿಸುವ ಕಾಲ್ಪನಿಕ ರೇಖೆಗಳು.
5. **ಪ್ರಧಾನ ರೇಖಾಂಶ** – ಗ್ರೀನಿಚ್ ಮೂಲಕ ಹಾದು ಹೋಗುವ 0^{0} ರೇಖಾಂಶ ಅಥವಾ ಮಧ್ಯಾಹ್ನ ರೇಖೆ.
6. **ಗ್ರೀನಿಚ್ ಮೀನ್ ಟೈಂ** (GMT) – ಗ್ರೀನಿಚ್‌ನಲ್ಲಿ ಸರಾಸರಿ ಸೌರ ಸಮಯವಾಗಿದ್ದು ಇದನ್ನು ಜಾಗತಿಕ ಸಮಯದ ಸೂಚನೆಯಾಗಿ ಉಪಯೋಗಿಸಲ್ಪಡುತ್ತದೆ.
7. **ಭಾರತೀಯ ಪ್ರಮಾಣಿತ ಸಮಯ** (IST) – ಭಾರತದ ಅಧಿಕೃತ ಪ್ರಾಮಾಣಿತ ಸಮಯ. ಇದು ಗ್ರೀನಿಚ್ ಸರಾಸರಿ ಸಮಯಕ್ಕಿಂತ 5 ಗಂಟೆ 30 ನಿಮಿಷ ಮುಂದಿದೆ.
8. **ಪ್ರಾಮಾಣಿತ ಸಮಯ ವಲಯ** – ಒಂದೇ ಪ್ರಾಮಾಣಿತ ಸಮಯವನ್ನು ಅನುಸರಿಸುವ ರೇಖಾಂಶದ ಕಾಲ ವಲಯ.
9. **ಅಂತರಾಷ್ಟ್ರೀಯ ದಿನ ರೇಖೆ**– 180° ರೇಖಾಂಶಕ್ಕೆ ಹತ್ತಿರವಿರುವ ಕಾಲ್ಪನಿಕ ರೇಖೆ. ಈ ರೇಖೆಯ ಹತ್ತಿರ ದಿನಾಂಕ ಬದಲಾಗುತ್ತದೆ.
10. **ಉತ್ತರ ದೃವ**– ಭೂಮಿಯ ಅಕ್ಷದೊಂದಿಗೆ ಮೇಲ್ಮೈಯನ್ನು ಛೇದಿಸುವ 90^{0} ಉತ್ತರ ಅಕ್ಷಾಂಶದ ಹತ್ತಿರುವಿರುವ ಬಿಂದು.
11. **ದಕ್ಷಿಣ ದೃವ**– ಭೂಮಿಯ ಅಕ್ಷದೊಂದಿಗೆ ಮೇಲ್ಮೈಯನ್ನು ಛೇದಿಸುವ 90^{0} ದಕ್ಷಿಣ ಅಕ್ಷಾಂಶದ ಹತ್ತಿರ ವಿರುವ ಬಿಂದು.
12. **ಖಂಡ**– ಒಂದು ದೊಡ್ಡ ವಿಶಾಲವಾದ ಭೂಭಾಗ (ಭೂಮಿಯ ಭೂಪ್ರದೇಶಗಳನ್ನು ವರ್ಗೀಕರಿಸಲು ಬಳಸಲಾಗುತ್ತದೆ)
13. **ಮಹಾಸಾಗರ** – ಖಂಡಗಳನ್ನು ಬೇರ್ಪಡಿಸುವ ವಿಶಾಲವಾದ ಜಲರಾಶಿ.
14. **ಸಮುದ್ರ** – ಭೂಪ್ರದೇಶದಿಂದ ಭಾಗಶಃ ಅಥವಾ ಸಂಪೂರ್ಣವಾಗಿ ಆವರಿಸಲ್ಪಟ್ಟು, ಮಹಾಸಾಗರಗಳಿಂದ ವಿಸ್ತೀರ್ಣದಲ್ಲಿ ಚಿಕ್ಕದಾದ ಜಲರಾಶಿ.
15. **ಕೊಲ್ಲಿ**– ಭೂಪ್ರದೇಶದೊಳಗೆ ಚೊಚ್ಚಿಕೊಂಡು ಹೋಗುವ ಅರ್ಧಚಂದ್ರಾಕಾರದ ನೀರಿನ ಭಾಗ.
16. **ಸಿಂಧು ಶಾಖೆ** – ಸುತ್ತಲೂ ಭೂಭಾಗದಿಂದ ಆವೃತವಾದ ಸಮುದ್ರ ಭಾಗ.
17. **ಸಮುದ್ರ ಸಂಬಂಧಿತ** – ಮಹಾಸಾಗರಗಳು ಮತ್ತು ಸಮುದ್ರಗಳಿಗೆ ಸಂಬಂಧಿಸಿದ್ದು.
18. **ಉಪಖಂಡ**– ಒಂದು ಖಂಡದ ಭಾಗವಾಗಿದ್ದು, ಭೌಗೋಳಿಕವಾಗಿ ಅಥವಾ ರಾಜಕೀಯವಾಗಿ ಪ್ರತ್ಯೇಕವಾಗಿರುವ, ಖಂಡಕ್ಕಿಂತ ಚಿಕ್ಕದಾದ ದೊಡ್ಡ ಭೂಪ್ರದೇಶವನ್ನು ಸೂಚಿಸುತ್ತದೆ.
19. **ಭೂಸಂಬಂಧಿತ**– ಭೂಮಿಯ ಮೇಲೆ ವಾಸಿಸುವ ಅಥವಾ ಅದಕ್ಕೆ ಸಂಬಂಧಿತ ಅಂಶಗಳನ್ನು ಸೂಚಿಸುತ್ತದೆ.
20. **ವಿಸ್ತಾರ** – ಭೂಮಿ ಅಥವಾ ನೀರಿನ ವಿಶಾಲವಾದ, ನಿರಂತರ ವಿಸ್ತರಣೆ.
21. **ಭೂದೃಶ್ಯ** – ಪ್ರತ್ಯಕ್ಷವಾಗಿ ಗೋಚರಿಸುವ ಒಂದು ಪ್ರದೇಶದ ನೈಸರ್ಗಿಕ ಲಕ್ಷಣಗಳು.
22. **ಸಮುದ್ರ ಮಟ್ಟ** – ಸಮುದ್ರದ ಮೇಲ್ಮೈಯ ಸರಾಸರಿ ಎತ್ತರ.
23. **ನಿವಾಸಿಗಳು** – ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವ ಜನರು ಅಥವಾ ಜೀವಿಗಳು.
24. **ವ್ಯಾಪಕ** – ದೊಡ್ಡ ಪ್ರದೇಶದಲ್ಲಿ ಕಂಡುಹಿಡಿದ ಅಥವಾ ವಿಸ್ತರಿಸಿದ.
25. **ಅಪಾರವಾದ** – ಗಾತ್ರ ಅಥವಾ ವ್ಯಾಪ್ತಿಯಲ್ಲಿ ಅತ್ಯಂತ ದೊಡ್ಡದು.
26. **ಇತಿಹಾಸ** – ಮಾನವ ಗತಕಾಲದ ಅಧ್ಯಯನ
27. **ಇತಿಹಾಸಕಾರ** – ಗತಕಾಲದ ಕುರಿತು ಅಧ್ಯಯನ ಮಾಡಿ ಬರೆಯುವ ವ್ಯಕ್ತಿ.
28. **ಪ್ರಾಚೀನವಾದದ್ದು** – ಬಹಳ ಹಿಂದೆಯೇ ಸಂಭವಿಸಿದ ಅಥವಾ ಗತಕಾಲಕ್ಕೆ ಸೇರಿದ್ದು.
29. **ಶತಮಾನ** – ಇತಿಹಾಸದಲ್ಲಿ ಒಂದು ವಿಶಿಷ್ಟ ಕಾಲ.
30. **ಸಂದರ್ಭ** – ಒಂದು ಘಟನೆಯ ಹಿನ್ನೆಲೆ ಅಥವಾ ಪರಿಸ್ಥಿತಿಗಳು.
31. **ಟೈಮ್‌ಲೈನ್** – ಕಾಲಾನುಕ್ರಮದಲ್ಲಿ ಜೋಡಿಸಲಾದ ಘಟನೆಗಳ ದೃಶ್ಯ ನಿರೂಪಣೆ.
32. **ಐತಿಹಾಸಿಕ ಆಧಾರ** – ಗತಕಾಲದ ಬಗ್ಗೆ ನಾವು ಮಾಹಿರಿಯನ್ನು ಪಡೆಯುವ ಪ್ರದೇಶ, ವ್ಯಕ್ತಿ, ಬರಹಗಳು ಅಥವಾ ವಸ್ತುಗಳು.
33. **ಹಸ್ತ ಪ್ರತಿ** – ಕಾಗದ, ತಾಳೆಗರಿ, ಬಟ್ಟೆ ಇತ್ಯಾದಿಗಳ ಮೇಲೆ ಕೈಬರಹದ ದಾಖಲೆ.
34. **ಶಾಸನಗಳು** – ಕಲ್ಲು, ಲೋಹ ಅಥವಾ ಇತರ ವಸ್ತುಗಳ ಮೇಲೆ ಬರೆದ ಅಥವಾ ಕೆತ್ತಿದ ಪದಗಳು ಅಥವಾ ಪಠ್ಯಗಳು.
35. **ಪುರಾತತ್ವ ಶಾಸ್ತ್ರಜ್ಞ**– ಉತ್ಖನನ ಮತ್ತು ವಸ್ತುಗಳ ಅವಶೇಷಗಳ ಮೂಲಕ ಇತಿಹಾಸವನ್ನು ಅಧ್ಯಯನ ಮಾಡುವ ವ್ಯಕ್ತಿ.
36. **ಉತ್ಖನನ** – ಭೂಮಿಯಿಂದ ಅವಶೇಷಗಳನ್ನು ಅಗೆದು ತೆಗೆಯುವುದು.
37. **ಅಗೆಯುವ ಯಂತ್ರ** – ಉತ್ಖನನದಲ್ಲಿ ಉಪಯೋಗಿಸುವ ವ್ಯಕ್ತಿ ಅಥವಾ ಯಂತ್ರ.
38. **ಸಾಕ್ಷಿ** – ಹಿಂದಿನ ಘಟನೆಗಳಿಗೆ ಸಂಬಂಧಿಸಿದ ಪುರಾವೆ ಅಥವಾ ಸಾಕ್ಷಿ.
39. **ಪರಿಶೋಧನೆ** – ಮಾಹಿತಿಯನ್ನು ಹುಡುಕುವ ಮತ್ತು ಕಂಡುಹಿಡಿಯುವ ಕ್ರಿಯೆ.
40. **ಪರಂಪರೆ**– ಹಿಂದಿನ ತಲೆಮಾರುಗಳಿಂದ ರವಾನಿಸಲಾದ ಅಮೂಲ್ಯವಾದ ಸಾಂಸ್ಕೃತಿಕ ಸಂಪ್ರದಾಯಗಳು ಮತ್ತು ಐತಿಹಾಸಿಕ ವಸ್ತುಗಳು.
41. **ಉಪಖಂಡ** – ಒಂದು ಖಂಡದಲ್ಲಿನ ದೊಡ್ಡ ಭಾಗ, ವಿಶಿಷ್ಟ ಭಾಗ
42. **ವೈವಿಧ್ಯತೆ** – ಮಹಾನ್ ವೈವಿಧ್ಯತೆಯನ್ನು ತೋರಿಸುವುದು.

© NCERT

43. Diverse - Showing a great variety
44. **Commonality** - Shared features or characteristics
45. **Harmony** - A state of peaceful coexistence and agreement
46. **Worldview** - A particular way of understanding the world
47. **Inhabitants** - People who live in a particular place
48. **Terrain** - Physical features of land
49. **Valley** - A low area between hills or mountains
50. **Settlement** - A place where people establish a community
51. **Urbanisation** - The growth of towns and cities
52. **Widespread** - Found over a large area
53. **UNESCO** - An organisation that works to protect world heritage sites
54. **Culture (conceptual use)** - The way of life, beliefs, customs, and traditions of people
55. **Related to a Sanyasi** - Performing strict spiritual practices in order to attain higher spiritual states.
56. **Spiritual** - Related to the spirit or soul, beyond material life
57. **Spirituality** - The search for or attainment of a higher or deeper meaning of life
58. **Deity** - A god or goddess
59. **Invocation** - Calling upon a divine or higher power
60. **Chant** - To sing or recite rhythmically, often as part of worship
61. **Epic** - A long poem narrating heroic deeds and events of the past
62. **Afterlife** - Life believed to begin after death
63. Monk - A man who leaves worldly life to follow a spiritual path
64. **Nun** - A woman who leaves worldly life to follow a spiritual path
65. **Seeker** - A person who seeks truth or higher knowledge
66. **Shrine** - A sacred or holy place
67. **Pilgrim** - A person who travels to a sacred place for religious reasons
68. **Bhakti** - Deep respect or devotion towards sacred or important things
69. **Folklore** - Traditional beliefs, stories, and customs that are passed down orally
70. **Family (conceptual use)** - A group of people related by blood, marriage, or adoption
71. **Nuclear family** - A family consisting of parents and their children only
72. **Community (conceptual use)** - A group of people living together or sharing common interests
73. **Bonds** - Connections between people
74. **Attachment** - An emotional bond with someone or something
75. **Homemaker** - A person who manages the household
76. **Chore** - A routine household task
77. **Cooperate / Cooperative** - Working together for mutual benefit
78. **Voluntary** - Done by one's own free will
79. **Welfare** - Health, well-being, and prosperity of people
80. **Work (conceptual use)** - Any physical or mental activity done to produce goods or services
81. **Livelihood (conceptual use)** - A means of earning a living
82. **Wage** - Payment made by an employer to a worker for a specific period of work
83. **Salary** - A fixed regular payment, usually paid monthly
84. **Payment in kind** - Non-cash payment received for work performed
85. **Market** - A place where goods and services are exchanged
86. **Occupation (conceptual use)** - A type of work done to earn a living
87. **Wealth** - An abundance of valuable possessions or resources
88. **Underprivileged** - People not enjoying the same standard of living or opportunities

AP SCERT

43. **ವೈವಿಧ್ಯತೆ** – ದೊಡ್ಡ ವೈವಿಧ್ಯತೆಯನ್ನು ತೋರಿಸುವುದು
44. **ಸಾಮಾನ್ಯತೆ** – ಹಂಚಿಕೆಯ ವೈಶಿಷ್ಟ್ಯಗಳು ಮತ್ತು ಗುಣಲಕ್ಷಣಗಳು
45. **ಸಾಮರಸ್ಯ** – ಶಾಂತಿಯುತ ಸಹಬಾಳ್ವೆ ಮತ್ತು ಒಪ್ಪಂದದ ಸ್ಥಿತಿ
46. **ವಿಶ್ವ ದೃಷ್ಟಿಕೋನ** – ಜಗತ್ತನ್ನು ಅರ್ಥಮಾಡಿಕೊಳ್ಳುವ ಒಂದು ನಿರ್ದಿಷ್ಟ ಮಾರ್ಗ
47. **ನಿವಾಸಿಗಳು** – ನಿರ್ದಿಷ್ಟ ಜಾಗದಲ್ಲಿ ವಾಸಿಸುವ ಜನರು
48. **ಭೂಪ್ರದೇಶ**– ಭೂಮಿಯ ಭೌತಿಕ ಲಕ್ಷಣಗಳು
49. **ಕಣಿವೆ** – ಬೆಟ್ಟಗಳು ಅಥವಾ ಪರ್ವತಗಳ ನಡುವಿನ ತಗ್ಗು ಪ್ರದೇಶ
50. **ವಸಾಹತು** – ಜನರು ಸಮುದಾಯವನ್ನು ಸ್ಥಾಪಿಸುವ ಸ್ಥಳ
51. **ನಗರೀಕರಣ** – ಪಟ್ಟಣಗಳು ಮತ್ತು ನಗರಗಳ ಬೆಳವಣಿಗೆ
52. **ವ್ಯಾಪಕ** – ದೊಡ್ಡ ಪ್ರದೇಶದಲ್ಲಿ ಕಂಡುಬರುತ್ತದೆ.
53. **ಯುನೆಸ್ಕೋ** – ವಿಶ್ವ ಪರಂಪರೆಯ ತಾಣಗಳನ್ನು ರಕ್ಷಿಸಲು ಕೆಲಸ ಮಾಡುವ ಸಂಸ್ಥೆ
54. **ಸಂಸ್ಕೃತಿ (ಪರಿಕಲ್ಪನಾ ಬಳಕೆ)**– ಜನರ ಜೀವನ ವಿಧಾನ, ನಂಬಿಕೆಗಳು, ಪದ್ಧತಿಗಳು ಮತ್ತು ಸಂಪ್ರದಾಯಗಳು
55. **ಸನ್ಯಾಸಿಗೆ ಸಂಬಂಧಿಸಿದೆ** – ಉನ್ನತ ಆಧ್ಯಾತ್ಮಿಕ ಸ್ಥಿತಿಗಳನ್ನು ಸಾಧಿಸಲು ಕಟ್ಟುನಿಟ್ಟಾದ ಆಧ್ಯಾತ್ಮಿಕ ಅಭ್ಯಾಸಗಳನ್ನು ನಿರ್ವಹಿಸುವುದು.
56. **ಆಧ್ಯಾತ್ಮಿಕ**– ಭೌತಿಕ ಜೀವನವನ್ನು ಮೀರಿ, ಆತ್ಮ ಅಥವಾ ಆತ್ಮಕ್ಕೆ ಸಂಬಂಧಿಸಿದೆ
57. **ಆಧ್ಯಾತ್ಮಕತೆ** – ಜೀವನದ ಉನ್ನತ ಅಥವಾ ಆಳವಾದ ಅರ್ಥದ ಹುಡುಕಾಟ ಅಥವಾ ಸಾಧನೆ.
58. **ದೇವತೆ** – ದೇವರು ಅಥವಾ ದೇವತೆ
59. **ಆವಾಹನೆ** – ದೈವಿಕ ಅಥವಾ ಉನ್ನತ ಶಕ್ತಿಯನ್ನು ಕರೆಯುವುದು
60. **ಜಪ** – ಪೂಜೆಯ ಭಾಗವಾಗಿ ಲಯಬದ್ಧವಾಗಿ ಹಾಡುವುದು ಅಥವಾ ಪಠಿಸುವುದು
61. **ಮಹಾಕಾವ್ಯ** – ಹಿಂದಿನ ವೀರ ಕಾರ್ಯಗಳು ಮತ್ತು ಘಟನೆಗಳಟಿನನ್ನು ನಿರೂಪಿಸುವ
62. **ಮರಣಾಂತರದ ಜೀವನ** – ಮರಣದ ನಂತರ ಜೀವನ ಪ್ರಾರಂಭವಾಗುತ್ತದೆ ಎಂದು ನಂಬಲಾಗಿದೆ.
63. **ಸನ್ಯಾಸಿ** – ಆಧ್ಯಾತ್ಮಿಕ ಮಾರ್ಗವನ್ನು ಅನುಸರಿಸಲು ಲೌಕಿಕ ಜೀವನವನ್ನು ತೊರೆದ ಪುರುಷ
64. **ಸನ್ಯಾಸಿನಿ** – ಆಧ್ಯಾತ್ಮಿಕ ಮಾರ್ಗವನ್ನು ಅನುಸರಿಸಲು ಲೌಕಿಕ ಜೀವನವನ್ನು ತೊರೆದ ಮಹಿಳೆ
65. **ಆನ್ವೇಷಕ** – ಸತ್ಯ ಅಥವಾ ಉನ್ನತ ಜ್ಞಾನವನ್ನು ಹುಡುಕುವ ವ್ಯಕ್ತಿ.
66. **ಪುಣ್ಯಕ್ಷೇತ್ರ**– ಆಧ್ಯಾತ್ಮಿಕ ಆಥವಾ ಒಂದು ಪವಿತ್ರ ಸ್ಥಳ
67. **ಯಾತ್ರಿಕ** – ಧಾರ್ಮಿಕ ಕಾರಣಗಳಿಗಾಗಿ ಪವಿತ್ರ ಸ್ಥಳಕ್ಕೆ ಪ್ರಯಾಣಿಸುವ ವ್ಯಕ್ತಿ
68. **ಭಕ್ತಿ** – ಪವಿತ್ರ ಆಥವಾ ಪ್ರಮುಖ ವಿಷಯಗಳ ಬಗ್ಗೆ ಆಳವಾದ ಗೌರವ
69. **ಜಾನಪದ** – ಮೌಖಿಕವಾಗಿ ರವಾನಿಸಲಾದ ಸಾಂಪ್ರದಾಯಿಕ ನಂಬಿಕೆಗಳು, ಕಥೆಗಳು ಮತ್ತು ಪದ್ಧತಿಗಳು
70. **ಕುಟುಂಬ (ಪರಿಕಲ್ಪನಾ ಬಳಕೆ)** – ರಕ್ತ, ಮದುವೆ ಆಥವಾ ದತ್ತು ಸ್ವೀಕಾರವಾದ ಸಂಬಂಧ ಹೊಂದಿರುವ ಜನರ ಗುಂಪು
71. **ವಿಭಕ್ತ ಕುಟುಂಬ** – ಪೋಷಕರು ಮತ್ತು ಅವರ ಮಕ್ಕಳು ಮಾತ್ರ ಒಳಗೊಂಡಿರುವ ಕುಟುಂಬ.
72. **ಸಮುದಾಯ (ಪರಿಕಲ್ಪನಾ ಬಳಕೆ)** – ಒಟ್ಟಿಗೆ ವಾಸಿಸುವ ಅಥವಾ ಸಾಮಾನ್ಯ ಆಸಕ್ತಿಗಳನ್ನು ಹಂಚಿಕೊಳ್ಳುವ ಜನರ ಗುಂಪು
73. **ಬಂಧಗಳು** – ಜನರ ನಡುವಿನ ಸಂಪರ್ಕಗಳು
74. **ಭಾಂದವ್ಯ** – ಯಾರೊಂದಿಗಾದರೂ ಅಥವಾ ಯಾವುದಾದರೂ ಒಂದರೊಂದಿಗಿನ ಭಾವನಾತ್ಮಕ ಬಂಧ
75. **ಗೃಹಿಣಿ** – ಮನೆಯನ್ನು ನಿರ್ವಹಿಸುವ ವ್ಯಕ್ತಿ
76. **ಕೆಲಸ** – ದಿನನಿತ್ಯದ ಮನೆಯ ಕೆಲಸ
77. **ಸಹಕರಿಸಿ/ಸಹಕಾರಿ** – ಪರಸ್ಪರ ಪ್ರಯೋಜನಕ್ಕಾಗಿ ಒಟ್ಟಿಗೆ ಕೆಲಸ ಮಾಡಿ.
78. **ಸ್ವಯಂಪ್ರೇರಿತ** – ಒಬ್ಬರ ಸ್ವಂತ ಇಚ್ಛೆಯಿಂದ ಮಾಡಲಾಗುತ್ತದೆ
79. **ಕಲ್ಯಾಣ** – ಆರೋಗ್ಯ, ಯೋಗಕ್ಷೇಮ ಮತ್ತು ಜನರ ಸಮೃದ್ಧಿ
80. **ಕೆಲಸ** – ಸರಕು ಅಥವಾ ಸೇವೆಗಳನ್ನು ಉತ್ಪಾದಿಸಲು ಮಾಡುವ ಯಾವುದೇ ದೈಹಿಕ ಮತ್ತು ಮಾನಸಿಕ ಚಟುವಟಿಕೆ
81. **ಜೀವನೋಪಾಯ**– ಗಳಿಸುವ ಸಾಧನ ಜೀವನ ವೆಚ್ಚ
82. **ವೇತನ** – ನಿರ್ದಿಷ್ಟ ಕೆಲಸದ ಅವಧಿಗೆ ಉದ್ಯೋಗದಾತರು ಕೆಲಸಗಾರನಿಗೆ ಮಾಡುವ ಪಾವತಿ
83. **ಸಂಬಳ** – ಸಾಮಾನ್ಯವಾಗಿ ಮಾಸಿಕ ಪಾವತಿಸುವ ಸ್ಥಿರ ನಿಯಮಿತ ಪಾವತಿ
84. **ವಸ್ತು ರೂಪದಲ್ಲಿ ಪಾವತಿ** – ನಿರ್ವಹಿಸಿದ ಕೆಲಸಕ್ಕೆ ಸ್ವೀಕರಿಸಿದ ನಗದು ರಹಿತ ಪಾವತಿ
85. **ಮಾರುಕಟ್ಟೆ** – ಸರಕು ಮತ್ತು ಸೇವೆಗಳನ್ನು ವಿನಿಮಯ ಮಾಡಿಕೊಳ್ಳುವ ಸ್ಥಳ
86. **ಉದ್ಯೋಗ** – ಜೀವನೋಪಾಯಕ್ಕಾಗಿ ಮಾಡುವ ಒಂದು ರೀತಿಯ ಕೆಲಸ
87. **ಸಂಪತ್ತು** – ಅಮೂಲ್ಯವಾದ ಆಸ್ತಿ ಅಥವಾ ಸಂಪನ್ಮೂಲಗಳ ಸಮೃದ್ಧಿ
88. **ಸವಲತ್ತುರಹಿತರು** – ಒಂದೇ ರೀತಿಯ ಜೀವನ ಮಟ್ಟ ಆಥವಾ ಅವಕಾಶಗಳನ್ನು ಅನುಭವಿಸದ ಜನರು.

AP SCERT


ARCTIC OCEAN
Arctic Circle
Greenland (Denmark)
Alaska (USA)
Canada
United States of America
Mexico
Baffin Bay
Hudson Bay
Beaufort Sea
Gulf of Alaska
Labrador Sea
NORTH PACIFIC OCEAN
NORTH ATLANTIC OCEAN
SOUTH ATLANTIC OCEAN
SOUTH PACIFIC OCEAN
INDIAN OCEAN
PACIFIC OCEAN
SOUTHERN OCEAN
ANTARCTICA
Tropic of Cancer
Equator
Tropic of Capricorn
Prime Meridian
Brazil
Argentina
Peru
Bolivia
Guyana
Ecuador
United Kingdom
Ireland
Norway
Finland
Poland
Spain
Portugal
Algeria
Libya
Egypt
Sudan
Mali
Niger
Chad
Liberia
Sierra Leone
Madagascar
Russia
Kazakhstan
Mongolia
China
India
Pakistan
Iran
Iraq
Turkey
Saudi Arabia
Oman
Yemen
Japan
North Korea
South Korea
Bangladesh
Indonesia
Singapore
Maldives
Australia
Tasmania
New Zealand
Black Sea
Caspian Sea
Aral Sea
Arabian Sea
Kara Sea
Barents Sea
Norwegian Sea
Weddell Sea
1. Netherlands
2. Belgium
3. Luxembourg
4. Switzerland
5. Cwaania
6. Croatia
7. Bosnia and Herzagovina
8. Czechia
9. Slovakia
10. Austria
11. Dungary
12. Serbia
13. Narsinea
14. North Mecedonia
15. Albania
16. Cyprus
17. Labanon
18. Uniited Blatan
19. Guinea
20. Ghana
21. Togo
22. Benin
23. Cameroon
24. Equatorial Guinea
25. Bownda
26. Cambodia
27. Panama
28. Malawi
20. Liechtensits
30. Montenegre
31. Kezovo
32. Palestinian Territories
33. St. Vincent & the Grenadines
0 2,000 4,000 Miles
0 3,000 4,000 6,000 8,000 Kilometers

AP SCERT


TAJIKISTAN
AFGHANISTAN
PAKISTAN
CHINA (TIBET)
NEPAL
BHUTAN
BANGLADESH
MYANMAR (BURMA)
SRI LANKA
INDIAN OCEAN
ARABIAN SEA
BAY OF BENGAL
LADAKH
Srinagar
Leh
JAMMU & KASHMIR
Jammu
HIMACHAL PRADESH
Shimla
PUNJAB
CHANDIGARH
Dehradun
UTTARAKHAND
HARYANA
DELHI
New Delhi
Jaipur
RAJASTHAN
UTTAR PRADESH
Lucknow
SIKKIM
Gangtok
Itanagar
ARUNACHAL PRADESH
Dispur
ASSAM
NAGALAND
Kohima
Shillong
MEGHALAYA
Imphal
MANIPUR
Agartala
TRIPURA
Aizawl
MIZORAM
BIHAR
Patna
JHARKHAND
Ranchi
WEST BENGAL
Kolkata
Gandhinagar
GUJARAT
Bhopal
MADHYA PRADESH
CHHATTISGARH
Raipur
Bhuvaneswar
ODISHA
Daman
DADRA & NAGAR HAVELI AND DAMAN & DIU
MAHARASHTRA
Mumbai
TELANGANA
Hyderabad
Yanam (Puducherry)
Amaravati
Panaji
GOA
ANDHRA PRADESH
KARNATAKA
Bengaluru
Chennai
Mahe (Puducherry)
PUDUCHERRY
LAKSHADWEEP (INDIA)
Kavaratti
KERALA
TAMIL NADU
Karaikal (Puducherry)
Thiruvananthapuram
ANDAMAN & NICOBAR ISLANDS (INDIA)
Port Blair
International Boundary
State/UT Boundary
Country Capital
State/UT Capital

APSCERT

MIND MAP

Exploring Society, India and Beyond for Class 6 Helps students understand human life and historical developments, the rise and expansion of empires, interactions between **geography,** society, and governance, colonial transformations and **modern India,** natural resources and economic systems, cultural diversity and democratic institutions, and historical continuity and change.

SEM - 1

Class 6 – Social Science

ABSCERT

Curricular Goals	CG-1: Understanding Human Life	CG-2: Continuity and Change in History	CG-3: Social and Historical Changes	CG-4: India's Place in Geography and Cultures	CG-5: Analysing Geography and Society	CG-6: Resources and Livelihoods	CG-9: Society and Livelihoods
Learning Outcomes	• Explain maps, globe and directions • Understand latitudes and longitudes • Calculate and compare time zones • Interpret maps, pictures and historical infographics	• Define history and timeline • Differentiate BCE and CE • Identify archaeological sources • Explain aspects of early human life	• Explain rise of Marathas and Shivaji • Understand colonial expansion and treaties	• Explain meaning of Bharat • Describe features of Indus Civilization • Understand importance of oceans	• Explain unity in diversity • Identify cultural differences in India • Respect diversity and traditions	• Explain role of family • Describe types of occupations	• Differentiate society and community • Explain importance of work

Theme A: India and the World	Theme B: Tapestry of the Past	Theme C: Our Cultural Heritage and Knowledge Traditions	Theme D: Governance and Democracy	Theme E: Economic Life Around Us
1. Locating places on the Earth 2. Oceans and Continents	3. Timeline and sources of history 4. India that is Bharat	5. Unity in diversity	6. Family and Community	7. Value of work